ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಮೇ 30, 2024

ಸಂಪುಟ : 51 ಸಂಚಿಕೆ : 16 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಸರ್ಕಾರಿ ಶಾಲೆಗಳಲ್ಲಿ ಶುರುವಾಯ್ತು ಮಕ್ಕಳ ಚಿಲಿಪಿಲಿ

### ನಾಳೆ ಸಿಹಿ ಊಟದ ಸ್ವಾಗತ, ನಿಟುವಳ್ಳಿ ಶಾಲೆಯಲ್ಲಿ ದಾಖಲಾತಿಗೆ ಸರದಿಯಲ್ಲಿ ನಿಂತ ಪಾಲಕರು






ದಾವಣಗೆರೆ ನಿಟುವಳ್ಳಿ ಸರ್ಕಾರಿ ಉನ್ನತೀಕರಿಸಿದ ಶಾಲೆಯಲ್ಲಿ ಮಕ್ಕಳನ್ನು ದಾಖಲಿಸಲು ಸರದಿ ಸಾಲಿನಲ್ಲಿ ನಿಂತ ಪೋಷಕರು. ವಿದ್ಯಾಸಾಗರ ಕಾನ್ವೆಂಟ್‌ಗೆ ತೆರಳುತ್ತಿರುವ ವಿದ್ಯಾರ್ಥಿಗಳು (ಬಲಚಿತ್ರ)

ದಾವಣಗೆರೆ: ಕಳೆದೆರಡು ತಿಂಗಳಿನಿಂದ ಮೌನವಾಗಿದ್ದ ಸರ್ಕಾರಿ ಶಾಲೆಗಳಲ್ಲಿ ಬುಧವಾರ ಶಾಲಾ ಘಂಟೆ ಬಾರಿಸಿದೆ. ಮಕ್ಕಳ ಚಿಲಿಪಿಲಿ ಶುರುವಾಗಿದೆ. ಶಿಕ್ಷಕರು ದಾಖಲಾತಿ ಕಾರ್ಯದಲ್ಲಿ ಬ್ಯೂಸಿಯಾಗಿದ್ದರೆ, ಸಿಬ್ಬಂದಿಗಳು ಸ್ವಚ್ಛತಾ ಕಾರ್ಯಗಳಲ್ಲಿ ಮಗ್ನರಾಗಿದ್ದರು.

ಕಳೆದ ಶೈಕ್ಷಣಿಕ ವರ್ಷದಲ್ಲಿ ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಸಂತೃಪ್ತಿ ಇಲ್ಲದ ಪೋಷಕರು, ಶಿಕ್ಷಣ-ಶುಲ್ಕದ ಬಗ್ಗೆ ಅಳೆದೂ, ತೂಗಿ ಉತ್ತಮ ಶಾಲೆ ಎಂದು ನಿಶ್ಚಯಿಸಿಕೊಂಡ ಶಾಲೆಗಳತ್ತ ದೌಡಾಯಿಸುತ್ತಿದ್ದಾರೆ.

ಬಹುತೇಕ ಶಾಲೆಗಳನ್ನು ತಳಿರು-ತೋರಣಗಳಿಂದ ಸಿಂಗರಿಸಲಾಗಿದೆ. ಮೇ 31ರಿಂದ ಮಕ್ಕಳಿಗೆ ಅದ್ಧೂರಿ ಸ್ವಾಗತ ಕೋರಲು, ಬಿಸಿಯೂಟದಲ್ಲಿ ಸಿಹಿಯೂಟ ನೀಡಲು ಶಿಕ್ಷಣ ಇಲಾಖೆ ಸೂಚಿಸಿದೆಯಾದರೂ, ಇಂದಿನಿಂದಲೇ ಮಕ್ಕಳು ಶಾಲೆಗೆ ಆಗಮಿಸಿದ್ದಾರೆ.

ನಿಟುವಳ್ಳಿಯ ಸರ್ಕಾರಿ ಉನ್ನತೀಕರಿಸಿದ ಪ್ರಾಥಮಿಕ ಶಾಲೆಯಲ್ಲಿ 1ನೇ ತರಗತಿ ಇಂಗ್ಲೀಷ್ ಮಾಧ್ಯಮ ವಿಭಾಗಕ್ಕೆ ಹೆಚ್ಚು ಬೇಡಿಕೆ ಇದೆ. ಈ ಹಿನ್ನೆಲೆಯಲ್ಲಿ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ದಾಖಲಿಸಲು ಮುಂಜಾನೆ 5 ಗಂಟೆಯಿಂದಲೇ ಶಾಲಾ ಮುಂಭಾಗ ಸರದಿ ಸಾಲಿನಲ್ಲಿ ನಿಂತಿದ್ದರು.

ಶಾಲೆ ಆರಂಭವಾದಾಗ ಆಗಮಿಸಿದ್ದ ಶಿಕ್ಷಕರು 30 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿದೆ. ಎಲ್ಲರೂ ದಾಖಲೆಗಳನ್ನು ಕೊಡಿ ಲಾಟರಿ ಮೂಲಕ 30 ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳುತ್ತೇವೆ ಎಂದಾಗ, ಬೆಳಿಗ್ಗೆಯಿಂದ ನಿಂತಿದ್ದ ಪೋಷಕರು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯರಾದ ಟಿ.ಎಸ್. ಸ್ವಾಮಿ ಪತ್ರಿಕೆಯೊಂದಿಗೆ ಮಾತನಾಡುತ್ತಾ, ಪ್ರತಿ ವರ್ಷವೂ ಆಂಗ್ಲ ಮಾಧ್ಯಮಕ್ಕೆ ಹೆಚ್ಚಿನ ಬೇಡಿಕೆ ಇರುತ್ತದೆ. 40ಕ್ಕೂ ಹೆಚ್ಚು (3ನೇ ಪುಟಕ್ಕೆ)

## ಪ್ರಜ್ವಲ್ ರೇವಣ್ಣ ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕೃತ

ಬೆಂಗಳೂರು, ಮೇ 29 - ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಸಂಸದ ಪ್ರಜ್ವಲ್ ರೇವಣ್ಣ ತಮ್ಮ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಬಂಧಿಸದಂತೆ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಾಲಯ ತಳ್ಳಿ ಹಾಕಿದೆ.

ಜನಪ್ರತಿನಿಧಿಗಳ ನ್ಯಾಯಾಲಯದ ಮುಂದೆ ಪ್ರಜ್ವಲ್ ವಕೀಲರು, ಎಸ್‌ಐಟಿ ಹೂಡಿರುವ ಮೂರು ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಕೋರಿದ್ದರು. ಆದರೆ, ನ್ಯಾಯಾಲಯ ಅರ್ಜಿಯನ್ನು ತಳ್ಳಿ ಹಾಕಿದೆ.

ವಿದೇಶದಿಂದ ಮರಳಲು ಪ್ರಜ್ವಲ್ ವಿಮಾನ ಟಿಕೆಟ್ ಕಾಯ್ದಿರಿಸಿದ್ದಾರೆ. ಈ ಹಿಂದೆಯೂ ಎರಡು ಬಾರಿ ಟಿಕೆಟ್ ಕಾಯ್ದಿರಿಸಿದ್ದ ಪ್ರಜ್ವಲ್, ನಂತರ ತಮ್ಮ ಮನಸ್ಸು ಬದಲಿಸಿ ಭಾರತಕ್ಕೆ ಹಿಂತಿರುಗಿರಲಿಲ್ಲ ಎಂಬುದನ್ನು ಸ್ಮರಿಸಬಹುದು.



ಪ್ರಜ್ವಲ್ ಪರ ವಕೀಲರು, ಕೆಲಸದಾಕೆ ನೀಡಿದ ದೂರು 107/2024, ಅಲ್ಲದೆ, ಅಪಹರಣಕ್ಕೆ ಸಂಬಂಧಿ ಸಿದಂತೆ ಸಿಐಡಿ 20/2024 ಪ್ರಕರಣ, ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದಂತೆ 02/2024 ಪ್ರಕರಣಗಳಲ್ಲಿ ನಮ್ಮ ಕಕ್ಷಿದಾರರನ್ನು ಬಂಧಿಸದಂತೆ ಜಾಮೀನು ಕೋರಿ ಜನಪ್ರತಿನಿಧಿಗಳ ನ್ಯಾಯಾಲಯದ ಮೊರೆ ಹೋಗಿದ್ದರು.

ಪ್ರಜ್ವಲ್ ಇದೇ 31ಕ್ಕೆ ಹಿಂತಿರುಗಿ ಅಂದೇ ಎಸ್‌ಐಟಿ ಮುಂದೆ ಹಾಜರಾಗುವುದಾಗಿಯೂ (3ನೇ ಪುಟಕ್ಕೆ)

## ಇಂದು ಕೇರಳಕ್ಕೆ ತಲುಪಲಿರುವ ಮುಂಗಾರು

ನವದೆಹಲಿ, ಮೇ 29 – ರೆಮಲ್ ಚಂಡಮಾರುತದ ಕಾರಣದಿಂದಾಗಿ ಮುಂಗಾರು ಗುರುವಾರ ಕೇರಳಕ್ಕೆ ತಲುಪಲಿದೆ. ಈ ಹಿಂದೆ ಮೇ 31ರಂದು ಕೇರಳಕ್ಕೆ ಮುಂಗಾರು ತಲುಪಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿತ್ತು. ಮುಂದಿನ 24 ಗಂಟೆಗಳಲ್ಲಿ ಮುಂಗಾರು ಕೇರಳಕ್ಕೆ ತಲುಪಲು



ಪರಿಸ್ಥಿತಿ ಅನುಕೂಲಕರವಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ಪಶ್ಚಿಮ ಬಂಗಾಳ ಹಾಗೂ ಬಾಂಗ್ಲಾದೇಶಕ್ಕೆ ಅಪ್ಪಳಿಸಿದ್ದ ಚಂಡಮಾರುತ, ಮುಂಗಾರು ಮಾರುತಗಳು ಬಂಗಾಳ ಕೊಲ್ಲಿಯ ಕಡೆ ಬರುವಂತೆ ಮಾಡಿದ್ದವು. ಹೀಗಾಗಿ ಮುಂಗಾರು ಒಂದು ದಿನ ಮುಂಚೆ ಕೇರಳ ತಲುಪಲಿದೆ.

## ಬಿತ್ತನೆ ಬೀಜ ದರ ಏರಿಕೆ ಖಂಡಿಸಿ ಪ್ರತಿಭಟನೆ

### ಸಹಾಯಧನ ಹೆಚ್ಚಿಸಿ ಕಡಿಮೆ ದರದಲ್ಲಿ ಬೀಜ ವಿತರಿಸಲು ಬಿಜೆಪಿ ರೈತ ಮೋರ್ಚಾ ಆಗ್ರಹ



ದಾವಣಗೆರೆ, ಮೇ 29- ಬಿತ್ತನೆ ಬೀಜದ ದರ ಏರಿಕೆ ಖಂಡಿಸಿ ಜಿಲ್ಲಾ ಬಿಜೆಪಿ ರೈತ ಮೋರ್ಚಾ ವತಿಯಿಂದ ನಗರದ ಎಪಿಎಂಸಿ ಬಳಿಯ ರೈತ ಸಂಪರ್ಕ ಕೇಂದ್ರದ ಬಳಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ಎನ್.ರಾಜಶೇಖರ್, ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್, ವಕ್ತಾರ ಕೊಳೇನಹಳ್ಳಿ ಬಿ.ಎಂ. ಸತೀಶ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ರೈತರಿಗೆ ಸಹಾಯ ಧನ ಹೆಚ್ಚಳ ಮಾಡಿ ಕಡಿಮೆ ದರದಲ್ಲಿ ಬಿತ್ತನೆ ಬೀಜ ವಿತರಿಸುವಂತೆ ಆಗ್ರಹಿಸಲಾಯಿತು.

ಕಳೆದ ಹಂಗಾಮಿನಲ್ಲಿ ರೈತರು ಭೀಕರ ಬರಗಾಲದಿಂದ ಬಸವಳಿದಿದ್ದಾರೆ. ಈ ವೇಳೆ ಬಿತ್ತನೆ ಬೀಜದ ದರ ಏರಿಕೆಯಾಗಿರುವುದು ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಕೂಡಲೇ ಸರ್ಕಾರ ಬೆಲೆ ಇಳಿಕೆಗೆ ಕ್ರಮ ವಹಿಸುವಂತೆ ಒತ್ತಾಯಿಸಲಾಯಿತು.

ಗುಣಮಟ್ಟದ ಬಿತ್ತನೆ ಬೀಜಗಳನ್ನು ವಿತರಿಸಬೇಕು. ನಕಲಿ ಬಿತ್ತನೆ ಬೀಜದ ಹಾವಳಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಜಿಲ್ಲೆಯಲ್ಲಿ ರೈತರು ಹೆಚ್ಚಿನ ಪ್ರಮಾಣದಲ್ಲಿ ಭತ್ತ ಮತ್ತು ಮೆಕ್ಕೆಜೋಳ ಬಿತ್ತನೆ ಮಾಡುತ್ತಿದ್ದು, ಮೆಕ್ಕೆಜೋಳ ಬೀಜಗಳ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಪೂರೈಕೆ ಮಾಡಲು ತಕ್ಷಣ ಕ್ರಮ ಕೈಗೊಳ್ಳಬೇಕು. ಅಗತ್ಯ (3ನೇ ಪುಟಕ್ಕೆ)

## ವಿರೋಧ ಪಕ್ಷದ ಸಾಲಿನವರಿಗೆ ಮತ ಬೇಡ

### ಆಗ್ನೇಯ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಿಂದ ಸಮಸ್ಯೆಗೆ ಸ್ಪಂದನೆ: ಎಸ್ಸೆಸ್

ದಾವಣಗೆರೆ, ಮೇ 29- ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಹೊರತಾಗಿ ಬೇರೆಯವರಿಗೆ ಮತ ನೀಡಿದರೆ ಪ್ರಯೋಜನವಿಲ್ಲ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಪಕ್ಷಗಳಿಗೆ ಮತ ನೀಡಿ ಗೆಲ್ಲಿಸಿದರೆ ಅವರು ವಿರೋಧ ಪಕ್ಷದ ಸಾಲಿನಲ್ಲಿ ಕುಳಿತು ಎದ್ದು ಹೋಗಬೇಕಾಗುತ್ತದೆ. ಆಗ್ನೇಯ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಟಿ. ಶ್ರೀನಿವಾಸ್ ಗೆಲ್ಲಿಸಿದರೆ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಲು ಸಾಧ್ಯ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷ ಈ ಹಿಂದೆ ಭರವಸೆ ನೀಡಿದಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ



ತಂದಿದೆ. ಕಾಂಗ್ರೆಸ್ ನುಡಿದಂತೆ ನಡೆಯುತ್ತಿದೆ ಎಂದವರು ಹೇಳಿದರು.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ಮುಂದಿನ ನಾಲ್ಕು ವರ್ಷ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವೇ ಇರಲಿದೆ. ಹೀಗಾಗಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಿದರೆ ನಾವೂ ಬೆಂಬಲ ನೀಡಿ ಒಳ್ಳೆಯ ತಂಡವಾಗಿ (2ನೇ ಪುಟಕ್ಕೆ)

## ಜಿಲ್ಲೆಯಲ್ಲಿ ಬಿತ್ತನೆ ಬೀಜ ದಾಸ್ತಾನು

ದಾವಣಗೆರೆ, ಮೇ 29- ಜಿಲ್ಲೆಯಲ್ಲಿ ಮೇ ತಿಂಗಳಲ್ಲಿ ಮುಂಗಾರು ಹಂಗಾಮು ಚುರುಕಾಗಿದ್ದು, ಜನವರಿಯಿಂದ ಮೇ 28 ನೇ ದಿನಾಂಕದವರೆಗೆ ಜಿಲ್ಲೆಯ ವಾಡಿಕೆ ಮಳೆ 96.6 ಮಿ.ಮೀ ಇದೆ. 145 ಮಿ.ಮೀ. ಮಳೆಯಾಗಿದೆ. ವಾಡಿಕೆಗಿಂತ ಶೇ.50 ರಷ್ಟು ಮಳೆಯಾಗಿದೆ. ಭೂಮಿ ಸಿದ್ಧತೆಗೆ ಅನುಕೂಲವಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಸಮಗ್ರ ಬೆಳೆ ನಿರ್ವಹಣೆ ಜೊತೆಗೆ ಉತ್ತಮ ಇಳುವರಿ ಪಡೆಯುವಲ್ಲಿ ಗುಣಮಟ್ಟದ ಬಿತ್ತನೆ ಬೀಜಗಳು ಮುಖ್ಯ. ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವಂತೆ ಉತ್ತಮ ಬೆಳವಣಿಗೆ ಹಾಗೂ ಇಳುವರಿ ಪಡೆಯುವಲ್ಲಿ ಗುಣಮಟ್ಟದ ಬಿತ್ತನೆ ಬೀಜಗಳು ಅತ್ಯಮೂಲ್ಯವಾಗಿವೆ (5ನೇ ಪುಟಕ್ಕೆ)

**+ Dream of Doctors +**

- **3500 sft**. land on Stadium Road Near Alur & City Central Hospital, Davanagere
- We Owners are seeking partners to develop a hospital on this land.
- Ideal opportunity for **Medical professionals** and **Health care organizations** looking to own or rent space.
- You can join us in creating a premier healthcare facility.

**Contact : 95136 99252**
- Brokers Excuse -



# ಶಿಕ್ಷಣ ವ್ಯವಸ್ಥೆಯನ್ನು ಹಾಳುಗೆಡವಿದ ರಾಜ್ಯ ಕಾಂಗ್ರೆಸ್ ಸರ್ಕಾರ



## ಹರಪನಹಳ್ಳಿಯಲ್ಲಿ ಕಿಡಿಕಾರಿದ ವಿಧಾನ ಪರಿಷತ್‌ನ ಮಾಜಿ ಸದಸ್ಯ ಅರುಣ್ ಶಹಪೂರ

ಹರಪನಹಳ್ಳಿ, ಮೇ 29 - ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಶಿಕ್ಷಣ ವ್ಯವಸ್ಥೆಯನ್ನು ಹಾಳುಗೆಡವಿದೆ ಎಂದು ವಿಧಾನ ಪರಿಷತ್‌ನ ಮಾಜಿ ಸದಸ್ಯ ಅರುಣ್ ಶಹಪೂರ ದೂರಿದರು.

ಪಟ್ಟಣದ ಎಡಿಬಿ ಕಾಲೇಜಿನಲ್ಲಿ ಬುಧವಾರ ಈಶಾನ್ಯ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಮರನಾಥ ಪಾಟೀಲ್ ಪರವಾಗಿ ಮತಯಾಚನೆ ಮಾಡಿ, ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ವ್ಯವಸ್ಥೆ ಹೀನಾಯ ಸ್ಥಿತಿಗೆ ತಲುಪಿದೆ, ಶಿಕ್ಷಣ ಇಲಾಖೆಗೆ ಪರೀಕ್ಷೆಯ ಬಗ್ಗೆ ಸ್ಪಷ್ಟ ಪರಿಕಲ್ಪನೆ ಇಲ್ಲ, ವಿದ್ಯಾರ್ಥಿಗಳು ಮತ್ತು ಪಾಲಕರನ್ನು ಅನಗತ್ಯವಾಗಿ ಗೊಂದಲಕ್ಕೆ ತಳ್ಳಿದೆ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

10ನೇ ತರಗತಿ ಮತ್ತು ದ್ವಿತೀಯ ಪಿಯುಸಿಗೆ ತಲಾ ಮೂರು ಪರೀಕ್ಷೆಗಳನ್ನು ನಡೆಸುತ್ತಿದೆ. ಇದರಿಂದ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರು ತೀವ್ರ ಒತ್ತಡಕ್ಕೆ ಸಿಲುಕಿದ್ದಾರೆ ಎಂದು ದೂರಿದರು.

ಮೂರು ಪರೀಕ್ಷೆಗಳಿಗೂ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಕಟ್ಟಿಸಿಕೊಂಡಿದ್ದಾರೆ. ಅಲ್ಲದೇ ವಿದ್ಯಾರ್ಥಿಗಳಿಗೆ ಗ್ರೇಸ್ ಮಾರ್ಕ್ಸ್ ನೀಡುವ ಮೂಲಕ ರಾಜಕೀಯವಾಗಿ ಬಳಸಿಕೊಂಡಿದ್ದಾರೆ ಎಂದು ಟೀಕಿಸಿದರು.

ರಾಜ್ಯ ಪಠ್ಯಕ್ರಮದಡಿ 1 ಕೋಟಿಗೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ, 9ಲಕ್ಷದಷ್ಟು ವಿದ್ಯಾರ್ಥಿಗಳು 10 ನೇ ತರಗತಿ ಪರೀಕ್ಷೆ ಬರೆದಿದ್ದಾರೆ. 1ಕೋಟಿ ಮಕ್ಕಳ ಭವಿಷ್ಯ ಅತಂತ್ರಕ್ಕೆ ತಳ್ಳುವ ಕೆಲಸ ನಡೆದಿದೆ. ಶಿಕ್ಷಣ ಇಲಾಖೆ ನಿಭಾಯಿಸುವಲ್ಲಿ ಸಚಿವರು ವಿಫಲರಾಗಿದ್ದು, ಸರ್ಕಾರ ಸೂತ್ರದ ಗೊಂಬೆಗಳಂತೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ದೂರಿದರು.

10ನೇ ತರಗತಿ ಪರೀಕ್ಷೆಯಲ್ಲಿ ಅಧಿಕಾರಿಗಳ ಮೂಲಕ ಒತ್ತಡ ಹಾಕಿ ವೆಬ್‌ಕಾಸ್ಟಿಂಗ್ ನಡೆಸಿದರು, ಕ್ಯಾಮೆರಾ ಹಾಕಿಸಿ ಮಕ್ಕಳಲ್ಲಿ ಭಯ ಹುಟ್ಟಿಸಿದರು, ಸಿಟ್ಟಿಂಗ್ ಸ್ಕ್ವಾಡ್, ಫ್ಲೈಯಿಂಗ್ ಸ್ಕ್ವಾಡ್ ನೇಮಕ ಮಾಡಿ ಮಕ್ಕಳಲ್ಲಿ ಆತಂಕ ಉಂಟಾಗುವಂತೆ ಮಾಡಿದರು ಎಂದರು.

5, 8, 9 ಮತ್ತು 11ನೇ ತರಗತಿ ಪರೀಕ್ಷೆಗಳೂ ಗೊಂದಲಕ್ಕೆ ಒಳಗಾದವು, ಪರೀಕ್ಷೆ ನಡೆಯುತ್ತದೆಯೋ ಇಲ್ಲವೋ ಎಂಬ ವಿಚಾರ ವಿದ್ಯಾರ್ಥಿಗಳು, ಪಾಲಕರಿಗೆ ತಲೆ ನೋವು ಆಗಿ ಪರಿಣಮಿಸಿತು, ಈ ವಿಚಾರವಾಗಿ ನ್ಯಾಯಾಲಯದಲ್ಲೂ ಸರ್ಕಾರ ಛೀಮಾರಿ ಹಾಕಿಸಿಕೊಂಡಿತು ಎಂದು ಹೇಳಿದರು.

ಹಿಂದಿನ ಬಿಜೆಪಿ ಸರ್ಕಾರ ಶಿಕ್ಷಣ ವ್ಯವಸ್ಥೆ ಸುಧಾರಣೆಗೆ ಸಾಕಷ್ಟು ಕ್ರಮಗಳನ್ನು ಕೈಗೊಂಡಿತ್ತು, ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಒಂದು ವರ್ಷ ಕಳೆದರೂ ಒಂದೇ ಒಂದು ಶಾಲಾ ಕೊಠಡಿಗೆ ಭೂಮಿ ಪೂಜೆ ನಡೆದಿಲ್ಲ, ಶಿಕ್ಷಕರ ನೇಮಕ ಇಲ್ಲ, ಸರ್ಕಾರ ಶಿಕ್ಷಣ ಕ್ಷೇತ್ರವನ್ನು ದುರಾಡಳಿತಕ್ಕೆ ತಳ್ಳಿದೆ ಎಂದು ವಾಗ್ದಾಳಿ ನಡೆಸಿದರು.

ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷ ಪದವೀಧರ ನಿರುದ್ಯೋಗ ಯುವಕ-ಯುವತಿಯರಿಗೆ ವಿದ್ಯಾನಿಧಿ ಯೋಜನೆ ಮೂಲಕ ಹಣ ನೀಡಲಾಗುವುದು ಎಂದು ಭರವಸೆ ನೀಡಿತ್ತು ಆದರೆ ಇದುವರೆಗೂ ಒಬ್ಬೇ ಒಬ್ಬ ಪದವೀಧರನಿಗೆ ಹಣ ಬಂದಿಲ್ಲ ಎಂದು ದೂರಿದರು.

ಈ ಸಂದರ್ಭದಲ್ಲಿ ಬಿಜೆಪಿ ವಿಜಯನಗರ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್, ಮುಖಂಡರಾದ ಎಂ.ಪಿ. ನಾಯ್ಕ್, ಕೊಟ್ರಪ್ಪ, ಕಣಿವಿಹಳ್ಳಿ ಮಂಜುನಾಥ, ಮುದಕವನವರ್ ಶಂಕರ, ಎಲ್. ಮಂಜ್ಯಾನಾಯ್ಕ್, ಮಹೇಶ, ಬಿ.ವೈ. ವೆಂಕಟೇಶನಾಯ್ಕ್, ಓಂಕಾರಗೌಡ, ಚನ್ನನಗೌಡ, ಲಿಂಗಾನಂದ, ಕುಸುಮ ಜಗದೀಶ, ಸಪ್ನ ಮಲ್ಲಿಕಾರ್ಜುನ, ಕಡತಿ ರಮೇಶ, ಎಂ.ಚಂದ್ರಶೇಖರ್ ಸೇರಿದಂತೆ ಇತರರು ಇದ್ದರು.

# 3 ಗಂಟೆಗಳ ಕಾಲ ಸತತ ಕಾರ್ಯಾಚರಣೆಯಲ್ಲಿ ಕರಡಿ ಸೆರೆ

ಹೊನ್ನಾಳಿ, ಮೇ 29- ಕಳೆದ ಒಂದು ವಾರದಿಂದ ಕರಡಿ ಹಿಡಿಯುವ ಪ್ರಯತ್ನದಲ್ಲಿದ್ದ ಚನ್ನಗಿರಿ ವಲಯ ಅರಣ್ಯಾಧಿಕಾರಿಗಳು ಇಂದು ಮಧ್ಯಾಹ್ನ 2.30 ರ ವೇಳೆಗೆ ಕರಡಿಯನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ತಾಲ್ಲೂಕಿನ ಹೊಸದೇವರ ಹೊನ್ನಾಳಿಯ ಜಮೀನುಗಳಲ್ಲಿ ವಾರದಿಂದ ಕರಡಿ ಕಾಣಿಸಿಕೊಳ್ಳುತ್ತಿದ್ದುದರಿಂದ ಈ ಭಾಗದ ಸಾರ್ವಜನಿಕರು, ರೈತರು ಭಯಭೀತರಾಗಿದ್ದರು.

ಶಾಲಾ - ಕಾಲೇಜುಗಳಿಗೆ ಮತ್ತು ಹೊನ್ನಾಳಿ ಪಟ್ಟಣಕ್ಕೆ ಹೋಗುವವರು ಗ್ರಾಮದಿಂದ ಬಸ್ ಸ್ಟ್ಯಾಂಡ್‌ವರೆಗೆ ನಡೆದುಕೊಂಡೇ ಬರಬೇಕು. ಹೊಸ ಮತ್ತು ಹಳೆದೇವರ ಹೊನ್ನಾಳಿ ಗ್ರಾಮಗಳಿಗೆ ಇಂದಿಗೂ ಯಾವುದೇ ಬಸ್ ವ್ಯವಸ್ಥೆಯಿರುವುದಿಲ್ಲ. ಸಂಜೆಯೊಳಗೆ ಈ ಗ್ರಾಮಗಳ ಜನತೆ ಕರಡಿ ಭೀತಿಯಿಂದ ತಮ್ಮ ಮನೆಗಳಿಗೆ ಸೇರಿಕೊಂಡು ಬಿಡುತ್ತಿದ್ದರು. ಜಮೀನುಗಳಿಗೆ ಹೋಗುತ್ತಿದ್ದ ರೈತರು ಕರಡಿ ಭಯದಿಂದ ಜಮೀನುಗಳಿಗೆ ಹೋಗದೇ ಕರಡಿ ಹಿಡಿಯುವುದನ್ನೇ ಕಾಯುತ್ತಿದ್ದರು.

ಹೊಸದೇವರ ಹೊನ್ನಾಳಿ ಬಸ್ ಸ್ಟ್ಯಾಂಡ್ ಎದುರಿನ ಜಮೀನಿನನಲ್ಲಿ ಬೀರಪ್ಪ ದೇವರ ಗುಡಿಯಿದ್ದು, ಗುಡಿಯ ಹತ್ತಿರ ಪಾಳು ಬಿದ್ದ ಗುಹೆಯೊಳಗೆ ಕರಡಿ ವಾಸವಾಗಿತ್ತು. ಗುಹೆಯ ಅಕ್ಕ-ಪಕ್ಕದ ಜಮೀನುಗಳಲ್ಲಿರುವ ಹಲಸಿನ ಮರಗಳಲ್ಲಿದ್ದ ಹಲಸಿನ ಕಾಯಿಗಳನ್ನು ತಿನ್ನುತ್ತಾ ಯಾರಿಗೂ ತೊಂದರೆ ಮಾಡದೇ ಗುಹೆಯಲ್ಲಿ ಬೀಡು ಬಿಟ್ಟಿತ್ತು.

ಗ್ರಾಮದ ಜನರು ಶಾಸಕ ಡಿ.ಜಿ. ಶಾಂತನಗೌಡ ಅವರಿಗೆ ಕರಡಿ ಬಂದಿರುವ ಮಾಹಿತಿಯನ್ನು ಮುಟ್ಟಿಸಿ, ಆದಷ್ಟು ಬೇಗ ಕರಡಿ ಹಿಡಿಸುವಂತೆ ಮನವಿ ಮಾಡಿಕೊಂಡಿದ್ದರು. ನಂತರ ಶಾಸಕರು ಪಟ್ಟಣದ ಪ್ರಾದೇಶಿಕ ವಲಯ ಅರಣ್ಯಾಧಿಕಾರಿಗಳಿಗೆ ಮತ್ತು ಚನ್ನಗಿರಿ ಮಾವಿನಕಟ್ಟೆಯ ವಲಯ ಅರಣ್ಯಾಧಿಕಾರಿಗಳಿಗೆ ಕರೆ ಮಾಡಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಿ ತಕ್ಷಣವೇ ಕರಡಿ ಸೆರೆ ಹಿಡಿಯುವಂತೆ ಸೂಚನೆ ನೀಡಿದ್ದರು.



ಚನ್ನಗಿರಿಯ ಶಾಂತಿ ಸಾಗರದ ಮಾವಿನಕಟ್ಟೆಯ ವಲಯ ಅರಣ್ಯಾಧಿಕಾರಿ ವಿ.ಜಗದೀಶ್ ಅವರ ನೇತೃತ್ವದಲ್ಲಿ ತಂಡ ರಚಿಸಿ ಬೀರಪ್ಪ ದೇವರ ಗುಹೆಯ ಸಮೀಪ ಬೋನಿನಲ್ಲಿ ಕರಡಿಗೆ ಬಲು ಇಷ್ಟವಾದ ಹಲಸಿನ ಹಣ್ಣುಗಳನ್ನು ಮತ್ತು ಇತರೆ ತಿಂಡಿ - ತಿನಿಸುಗಳನ್ನಿಟ್ಟು ವಾರದಿಂದಲೂ ಕರಡಿಗಾಗಿ ಬಲೆ ಬೀಸಿದ್ದರು. ವಾರದವರೆಗೂ ಕರಡಿ ಬೋನಿಗೆ ಬೀಳದ ಕಾರಣ ಬುಧವಾರ ಬೆಳಿಗ್ಗೆಯಿಂದ ಗುಹೆಯ ಸುತ್ತಲೂ ಬಲೆ ಹಾಕಿ ಸತತ 3 ಗಂಟೆ ಕಾರ್ಯಾಚರಣೆ ನಡೆಸಿ, ಕರಡಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಕರಡಿ ನೋಡಲು ಅಕ್ಕ-ಪಕ್ಕದ ಗ್ರಾಮಗಳ ಜನ ಮುಗಿಬಿದ್ದು, ಗಲಾಟೆ ಮಾಡಿದ ಕಾರಣ ಕರಡಿ ಬಲೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಹಳೆದೇವರ ಹೊನ್ನಾಳಿಯ ನಾಗೇಂದ್ರಪ್ಪ ಅವರಿಗೆ ಕರಡಿ ಪರಚಿತು ಮತ್ತು ಫಾರೆಸ್ಟ್ ಗಾರ್ಡ್ ಒಬ್ಬರ ಮೇಲೆ ದಾಳಿ ಮಾಡಲು ಕೂಡ ಪ್ರಯತ್ನಿಸಿದಾಗ ಅದೃಷ್ಟವಶಾತ್ ಆ ಗಾರ್ಡ್ ಕೂಡ ಕೂದಲೆಳೆಯ ಅಂತರದಿಂದ ಪಾರಾಗಿದ್ದು, ಸೆರೆ ಹಿಡಿದ ಕರಡಿಯನ್ನು ಚನ್ನಗಿರಿಯ ಶಾಂತಿಸಾಗರದ ಮಾವಿನಕಟ್ಟೆ ವಲಯ ಇಲಾಖೆಗೆ ತೆಗೆದುಕೊಂಡು ಹೋಗಿದ್ದು, ನಿರ್ಜನ ಕಾಡಿಗೆ ಬಿಟ್ಟು ಬರುವುದಾಗಿ ಅರಣ್ಯಾಧಿಕಾರಿ ವಿ. ಜಗದೀಶ್ ಪತ್ರಿಕೆಗೆ ಮಾಹಿತಿ ನೀಡಿದರು.

**ಶಾಸಕರ ಧನ್ಯವಾದ :** ಕರಡಿ ಹಿಡಿಯುವಲ್ಲಿ ಯಶಸ್ವಿಯಾದ ಮಾವಿನಕಟ್ಟೆ ವಲಯದ ಅರಣ್ಯಾಧಿಕಾರಿಗಳಿಗೆ ಹಾಗೂ ಇವರಿಗೆ ಸಹಕರಿಸಿದ ಹೊನ್ನಾಳಿ ಪ್ರಾದೇಶಿಕ ವಲಯ ಅರಣ್ಯಾಧಿಕಾರಿಗಳಿಗೆ ಶಾಸಕ ಶಾಂತನಗೌಡ ಧನ್ಯವಾದ ತಿಳಿಸಿದ್ದಾರೆ. ಹಾಗೆಯೇ ಕರಡಿಯಿಂದ ಗಾಯಗೊಳಗಾದ ನಾಗೇಂದ್ರಪ್ಪ ಅವರಿಗೆ ದೂರವಾಣಿ ಕರೆ ಮಾಡಿ ಆರೋಗ್ಯ ವಿಚಾರಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ವಿ. ಜಗದೀಶ್, ಡಿ.ವೈ.ಆರ್.ಎಫ್.ಒ.ಗಳಾದ ಮೈಲಾರಿ ಸ್ವಾಮಿ, ಮನು, ಫಾರೆಸ್ಟ್ ಗಾರ್ಡ್‌ಗಳಾದ ನಾಗರಾಜ್, ದೇವಪ್ಪ, ಹೇಮಂತ್, ಶಿವಶಂಕರ್, ಭೀಮಪ್ಪ ಪಾಕಣಿಕೆ, ಮಿರ್ಜಾ ಮತ್ತು ಹೊನ್ನಾಳಿ ಪ್ರಾದೇಶಿಕ ವಲಯ ಅರಣ್ಯ ಇಲಾಖೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

# ಸಾಲಿನವರಿಗೆ ಮತ ಬೇಡ

**(1ನೇ ಪುಟದಿಂದ)** ಕಾರ್ಯನಿರ್ವಹಿಸುತ್ತೇವೆ ಎಂದರು.

ಅಭ್ಯರ್ಥಿ ಡಿ.ಟಿ. ಶ್ರೀನಿವಾಸ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ಶಿಕ್ಷಕರು ಹಾಗೂ ಸರ್ಕಾರಿ ನೌಕರರನ್ನು ಕಾಪಾಡುತ್ತಾ ಬಂದಿದೆ. 6ನೇ ವೇತನ ಆಯೋಗದ ವರದಿ ಜಾರಿಗೆ ತಂದಿದ್ದು ಹಿಂದಿನ ಸಿದ್ದರಾಮಯ್ಯ ಸರ್ಕಾರ. ಈಗಿನ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲೇ 7ನೇ ವೇತನ ಆಯೋಗದ ವರದಿ ಜಾರಿಗೆ ಬರುತ್ತಿದೆ ಎಂದರು.

ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆ ಜಾರಿಗೆ ತರಲಾಗುವುದು. ಅನುದಾನಿತ ಶಾಲಾ ಶಿಕ್ಷಕರನ್ನೂ ಹಳೆಯ ಪಿಂಚಣಿ ಯೋಜನೆಗೆ ತರಲಾಗುವುದು ಎಂದವರು ಭರವಸೆ ನೀಡಿದರು.

ಅನುದಾನಿತ ಶಾಲೆಗಳಲ್ಲಿನ ಖಾಲಿ ಹುದ್ದೆಗಳ ಭರ್ತಿ ಮಾಡಲಾಗುವುದು. ಶಿಕ್ಷಣ ಕ್ಷೇತ್ರದಲ್ಲಿನ ಹಲವಾರು ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಲೆಕ್ಕ ಪರಿಶೋಧಕ ಅಥಣಿ ವೀರಣ್ಣ, ಉದ್ಯಮಿ ಅಣಬೇರು ರಾಜಣ್ಣ, ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಎ. ನಾಗರಾಜ್, ಕಾಂಗ್ರೆಸ್ ಮುಖಂಡ ದಿನೇಶ್ ಕೆ. ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

# ಹರಿಹರ : ಎಂ.ಕೆ.ಇ.ಟಿ. ಸಿಬಿಎಸ್‌ಇ ಶಾಲೆ ಆರಂಭ




ಹರಿಹರ, ಮೇ 29 - ನಗರದ ಎಂ.ಕೆ.ಇ.ಟಿ. ಸಿಬಿಎಸ್‌ಇ ಶಾಲೆ ಇಂದು ಆರಂಭವಾಗಿದ್ದು, ಶಾಲೆಗೆ ವಿದ್ಯಾರ್ಥಿಗಳು ಉಲ್ಲಾಸ ಭರಿತರಾಗಿ ಆಗಮಿಸಿದರು.

ಈ ವೇಳೆ ವಿದ್ಯಾರ್ಥಿಗಳ ಪೋಷಕರಾದ ಮೂರ್ಕಲ್ ಆನಂದ್, ಅಮರಾವತಿ ನಾಗರಾಜ್, ಎ.ಎಂ.ಸಿ. ಹನುಮಂತಪ್ಪ, ಜಿ.ಕೆ. ಸಂತೋಷ ಮಾತನಾಡಿ, ಹರಪನಹಳ್ಳಿ ರಸ್ತೆಯಲ್ಲಿರುವ ನಾಲ್ಕು ಶಾಲೆಗಳಿಗೆ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಓಡಾಡುತ್ತಾರೆ.

ಇಲ್ಲಿನ ರಸ್ತೆಯಲ್ಲಿ ಭಾರೀ ಮತ್ತು ಸಣ್ಣ ಗಾತ್ರದ ವಾಹನಗಳು ಎಗ್ಗಿಲ್ಲದೇ ಸಂಚರಿಸುವುದರಿಂದ ವಿದ್ಯಾರ್ಥಿಗಳು ಭಯದಿಂದ ಓಡಾಡುವಂತಹ ಪರಿಸ್ಥಿತಿ ಇದೆ. ಶಾಲಾ ಸಮಯದಲ್ಲಿ ಭಾರೀ ಗಾತ್ರದ ವಾಹನಗಳು ಬದಲಿ ರಸ್ತೆಯಲ್ಲಿ ಓಡಾಡುವುದಕ್ಕೆ ಅವಕಾಶವನ್ನು ಕಲ್ಪಿಸಲು ಪೊಲೀಸ್ ಇಲಾಖೆ ಮುಂದಾದರೆ ಮಕ್ಕಳು ನಿರ್ಭಯವಾಗಿ ಓಡಾಡುವುದಕ್ಕೆ ಸಹಕಾರಿಯಾಗುತ್ತದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಇತ್ತ ಕಡೆಗೆ ಗಮನ ಹರಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವಂತೆ ಆಗ್ರಹಿಸಿದ್ದಾರೆ.

# ನಗರದಲ್ಲಿ ಇಂದು ಪರಿಸರ ಸಂರಕ್ಷಣೆ ಬೀದಿ ನಾಟಕ

ದವನ್ ಕಾಲೇಜಿನ ವತಿಯಿಂದ ಪರಿಸರ ಸಂರಕ್ಷಣೆ ಎಂಬ ಬೀದಿ ನಾಟಕ ಪ್ರದರ್ಶನವನ್ನು ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಇಂದು ಮಧ್ಯಾಹ್ನ 12.30ಕ್ಕೆ ಹಮ್ಮಿಕೊಳ್ಳಲಾಗಿದೆ. ಕಾಲೇಜಿನ ಪ್ರಥಮ ಬಿಸಿಎ ಸಿ ವಿಭಾಗದ ವಿದ್ಯಾರ್ಥಿಗಳಿಂದ ಈ ನಾಟಕ ಪ್ರದರ್ಶನ ನಡೆಯಲಿದೆ.

## ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಶ್ರೀಮತಿ ನಾಗಮ್ಮನವರು
(ಶ್ರೀ ಕೆ.ವೈ. ತಿಪ್ಪೇಸ್ವಾಮಿ ಇವರ ಧರ್ಮಪತ್ನಿ)
ಗ್ರಾ.ಪಂ. ಸದಸ್ಯರು, ಹಿಂಡಸಘಟ್ಟ
ಜನನ : 01.01.1987
ಮರಣ : 22.5.2024

ಹರಿಹರ ತಾಲ್ಲೂಕು ಹಿಂಡಸಘಟ್ಟ ಗ್ರಾಮದ ವಾಸಿ
**ಶ್ರೀಮತಿ ಜಯಮ್ಮ ಶ್ರೀ ಹನುಮಗೌಡ್ರು ವೈ.ಜಿ.**
ಇವರು ಮಾಡುವ ವಿಜ್ಞಾಪನೆಗಳು.
ದಿ.: 22.5.2024ನೇ ಬುಧವಾರ ಬೆಳಿಗ್ಗೆ 6.30ಕ್ಕೆ ನಮ್ಮ ಮಗಳಾದ
**ಶ್ರೀಮತಿ ಕೆ. ನಾಗಮ್ಮನವರು**
ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 30.5.2024ನೇ ಗುರುವಾರ ಬೆಳಿಗ್ಗೆ 10-30ಕ್ಕೆ ಹಿಂಡಸಘಟ್ಟ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ಹಮ್ಮಿಕೊಳ್ಳಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಬಯಸುವ.
ಇಂತಿ ದುಃಖತಪ್ತರು :
ಪತಿ : ಶ್ರೀ ಕೆ.ವೈ. ತಿಪ್ಪೇಸ್ವಾಮಿ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು, ಹಿಂಡಸಘಟ್ಟ.

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಎಂ.ಶಕುಂತಲ ನಿಧನ



ದಾವಣಗೆರೆ ಸಿಟಿ ವಿನೋಬನಗರ 2ನೇ ಮೇನ್, 5ನೇ ಕ್ರಾಸ್ ವಾಸಿ ದಿ. ಮಹಾಂತೇಶಪ್ಪ ನಾಗೂರು ಪಲ್ಲೇದ ಇವರ ಧರ್ಮಪತ್ನಿ **ಶ್ರೀಮತಿ ಶಕುಂತಲ ಎಂ.** (62) ಇವರು ದಿನಾಂಕ 29.5.2024ರಂಧು ಬುಧವಾರ ಬೆಳಿಗ್ಗೆ 10.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.5.2024ರಂದು ಗುರುವಾರ ಬೆಳಿಗ್ಗೆ 10.30ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ, ಮೊ : 93798 11678, 97392 17117**

## ಗಂಗನಕಟ್ಟೆ ಜಿ.ಎಂ. ವಾಮದೇವಯ್ಯ ನಿಧನ



ದಾವಣಗೆರೆ ವಿದ್ಯಾನಗರ ವಾಸಿ ದಾವಣಗೆರೆ ತಾಲ್ಲೂಕು ಗಂಗನಕಟ್ಟೆ ಗ್ರಾಮದ **ವೇ.ಮೂ. ಜಿ.ಎಂ. ವಾಮದೇವಯ್ಯ (85)** ಅವರು ದಿನಾಂಕ 29.5.2024ರ ಬುಧವಾರ ಸಂಜೆ 7 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ ಸೇರಿದಂತೆ ಮೊಮ್ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.5.2024 ರ ಗುರುವಾರ ಮಧ್ಯಾಹ್ನ 1.30 ಕ್ಕೆ ನಗರದ ಗ್ಲಾಸ್ ಹೌಸ್ ಪಕ್ಕದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು. **ಮೃತರ ಪಾರ್ಥಿವ ಶರೀರವನ್ನು ಮಧ್ಯಾಹ್ನ 1ರವರೆಗೆ ನಂ. 1416, 3ನೇ ಮೇನ್, ವಿದ್ಯಾನಗರ, ದಾವಣಗೆರೆಯಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು.**

**ದುಃಖತಪ್ತ ಕುಟುಂಬ ವರ್ಗ :**
**ಪತ್ನಿ : ಶ್ರೀಮತಿ ಅನ್ನಪೂರ್ಣಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯ ಹಾಗೂ ಬಂಧು ಮಿತ್ರರು.**

# ಶಾಲೆಗಳಲ್ಲಿ ಸ್ವಚ್ಛತೆಗೆ ಚಾಲನೆ : ನಾಳೆ ಶಾಲಾ ಪ್ರಾರಂಭ



**ಮಲೇಬೆನ್ನೂರು**

ಮಲೇಬೆನ್ನೂರು, ಮೇ 29- ಬೇಸಿಗೆ ರಜೆ ಮುಗಿದ ಹಿನ್ನೆಲೆಯಲ್ಲಿ ಮೇ 31ಕ್ಕೆ ಸರ್ಕಾರಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳು ಅಧಿಕೃತವಾಗಿ ಪುನರಾರಂಭಗೊಳ್ಳಲಿವೆ. ಅಲ್ಲೆ ನಾಡಿದ್ದು ದಿನಾಂಕ 31ರ ಶುಕ್ರವಾರ ಶಾಲೆಗೆ ಬರುವ ಮಕ್ಕಳನ್ನು ಸ್ವಾಗತಿಸಲು ಶಾಲೆಗಳಲ್ಲಿ ಸಿದ್ಧತೆಗಳು ಭರದಿಂದ ಸಾಗಿವೆ. ಇದರ ಪೂರ್ವ ಭಾವಿಯಾಗಿ ಬುಧವಾರ ಎಲ್ಲಾ ಶಾಲೆಗಳಲ್ಲಿ ಸ್ವಚ್ಛತೆ ಕೆಲಸಗಳು ನಡೆದಿದ್ದು, ಶುಕ್ರವಾರದ ವೇಳೆ ಶಾಲೆಗಳು ನವ ವಧುವಿನಂತೆ ಸಿಂಗಾರಗೊಳ್ಳಲಿವೆ. ಅಂದು ಮಕ್ಕಳಿಗೆ ಹೂವುಗಳನ್ನು ನೀಡಿ ಸ್ವಾಗತಿಸುವ ಮತ್ತು ಮಕ್ಕಳಿಗೆ ಸಿಹಿ ವಿತರಿಸುವ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗುವುದೆಂದು ಜಿಗಳಿ ಶಾಲೆಯ ಮುಖ್ಯ ಶಿಕ್ಷಕ ನಾಗೇಶ್ ತಿಳಿಸಿದ್ದಾರೆ.

ಅವರು, ಬುಧವಾರ ಶಾಲೆಯಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಗಂಗಾಧಾರಚಾರಿ, ಎಲ್.ಕೆ.ಜಿ ಶಾಲೆ ಅಧ್ಯಕ್ಷ ಕೆ.ಎಸ್.ಮಾಲತೇಶ್, ಶಿಕ್ಷಕರಾದ ಮಲ್ಲಿಕಾರ್ಜುನ್, ಶ್ರೀನಿವಾಸ್ ರೆಡ್ಡಿ, ಗುಡ್ಡಪ್ಪ, ಲಿಂಗರಾಜ್, ಜಯಶ್ರೀ, ಕರಿಬಸಮ್ಮ, ಅಡುಗೆ ಸಹಾಯಕರಾದ ಅನುಸೂಯಮ್ಮ, ಲೀಲಮ್ಮ, ಗೀತಾ, ದಾಕ್ಷಾಯಣಮ್ಮ ಅವರೊಂದಿಗೆ ಶಾಲೆಯಲ್ಲಿ ಸ್ವಚ್ಛತೆ ಕೆಲಸಗಳನ್ನು ಕೈಗೊಂಡು ಗಮನ ಸೆಳೆದರು.

# ನಗರದ ದೃಶ್ಯಕಲಾ ವಿದ್ಯಾಲಯದಲ್ಲಿ ಇಂದು ಭಿತ್ತಿಚಿತ್ರ ಶಿಬಿರ

ದೃಶ್ಯಕಲಾ ಮಹಾವಿದ್ಯಾಲಯದ ವತಿಯಿಂದ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆಯುತ್ತಿರುವ 7 ದಿನಗಳ ಭಿತ್ತಿಚಿತ್ರ ಕಲಾ ಶಿಬಿರದಲ್ಲಿ ಇಂದು ಮುಂಜಾನೆ 6.30ಕ್ಕೆ ದೃಶ್ಯಕಲಾ ಮಹಾವಿದ್ಯಾಲಯದ ಬೋಧನಾ ಸಹಾಯಕ ಡಾ. ಸಂತೋಷ್ ಕುಮಾರ್ ಕುಲಕರ್ಣಿ ಅವರು ಧ್ವಜಾರೋಹಣ ನೆರವೇರಿಸುವರು.

ಸಂಜೆ 5.30ರ ಕಾರ್ಯಕ್ರಮದಲ್ಲಿ 'ಬಣ್ಣಗಳು' ವಿಷಯ ಕುರಿತು ದಾವಣಗೆರೆ ವಿವಿ ಜೀವ ರಾಸಾಯನಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಎಂ. ಸಂತೋಷ್ ಕುಮಾರ್ ಅವರು ಉಪನ್ಯಾಸ ನೀಡುವರು. ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ರಣಧೀರ ಅವರು ಮುಖ್ಯ ಅತಿಥಿಯಾಗಿದ್ದಾರೆ.

## ಸೋಮಶೇಖರ್ ವೈ. ತಿಳುವಳ್ಳಿ ನಿಧನ



ಹಿರೇಕೇರೂರಿನ **ಶ್ರೀ ಸೋಮಶೇಖರ್ ವೈ. ತಿಳುವಳ್ಳಿ**
(ಅಮರಾವತಿ ರಾಘುವೇಂದ್ರ ಅವರ ಮಾವನವರು)
ಅವರು ದಿನಾಂಕ 29.5.2024ರ ಬುಧವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 73 ವರ್ಷ ವಯಸ್ಸಾಗಿತ್ತು. ಪತ್ನಿ, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.5.2024ರ ಗುರುವಾರ ಬೆಳಿಗ್ಗೆ 9 ಗಂಟೆಗೆ ದಾವಣಗೆರೆ ಪಿ.ಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

**ದು:ಖತಪ್ತ ಕುಟುಂಬ ವರ್ಗ : ಪತ್ನಿ : ಶ್ರೀಮತಿ ಶಾರದ ಎಸ್. ತಿಳುವಳ್ಳಿ**
- **ಶ್ರೀಮತಿ ಪುಷ್ಪಾವತಿ ಶ್ರೀ ವೀರಭದ್ರಪ್ಪ,** ಹಿರೇಕೆರೂರು
- **ಶ್ರೀಮತಿ ಸುಭದ್ರ ಶ್ರೀ ಬಸವರಾಜಪ್ಪ,** ಹಿರೇಕೆರೂರು
- **ಶ್ರೀಮತಿ ಪ್ರಭಾ ಶ್ರೀ ರಾಮಚಂದ್ರ,** ಹಿರೇಕೆರೂರು
- **ಶ್ರೀಮತಿ ಶೈಲಜಾ ಶ್ರೀ ಪ್ರಹ್ಲಾದ,** ಹಿರೇಕೆರೂರು
- **ಶ್ರೀಮತಿ ಸೀಮಾ ಶ್ರೀ ವೆಂಕಟರಾಮ ಗುತ್ತಲ್,** ಗದಗ
- **ಶ್ರೀಮತಿ ಸರಿತಾ ಶ್ರೀ ಅಮರಾವತಿ ರಾಘುವೇಂದ್ರ,** ದಾವಣಗೆರೆ
- **ಶ್ರೀಮತಿ ಸೌಮ್ಯ ಶ್ರೀ ಮುರುಳಿ ಪೆಂಡಕೂರ್,** ಹರಪನಹಳ್ಳಿ
- **ಶ್ರೀಮತಿ ಸಿಂಧು ಶ್ರೀ ಗುರುರಾಜ ಬಿ.ಕೆ.,** ರಾಯಚೂರು
- **ಮೇಲಗಿರಿ ವಂಶಸ್ಥರು ಹಾಗೂ ತಿಳುವಳ್ಳಿ ವಂಶಸ್ಥರು. ಮೊ : +91 94486 67388**

# ಶಿಕ್ಷಣ ಕ್ಷೇತ್ರ ಹಾಳು ಮಾಡುವ ಕಾಂಗ್ರೆಸ್



ಬೆಂಗಳೂರು, ಮೇ 29 - ಶಿಕ್ಷಣ ಕ್ಷೇತ್ರವನ್ನು ಸದಾ ಹಾಳು ಮಾಡುವ ಕೆಲಸದಲ್ಲಿ ಕಾಂಗ್ರೆಸ್ ತೊಡಗಿದೆ ಎಂದು ಮಾಜಿ ಡಿಸಿಎಂ ಸಿ.ಎನ್.ಅಶ್ವತ್ಥನಾರಾಯಣ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಇಟಿ ಪರೀಕ್ಷೆ, ಶಾಲಾ ಮಕ್ಕಳಿಗೆ ಪಬ್ಲಿಕ್ ಎಕ್ಸಾಮ್ ವಿಚಾರದಲ್ಲಿ ಗೊಂದಲ ಉಂಟು ಮಾಡಿದ ರಾಜ್ಯ ಸರ್ಕಾರ ಶಿಕ್ಷಣ ವಾತಾವರಣ ಹದಗೆಡಿಸಿದೆ, ಶಿಕ್ಷಕರ ಕುರಿತು ಕಾಳಜಿ, ಗೌರವ ನೀಡದ ಕಾಂಗ್ರೆಸ್ ಶಿಕ್ಷಕರ, ಪದವೀಧರರ ವಿರುದ್ಧವಾದ ನೀತಿಗಳನ್ನು ಹೊಂದಿದೆ ಎಂದರು.

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕಾಂಗ್ರೆಸ್ ರಾಜಕೀಯ ಪ್ರೇರಿತವಾಗಿ ವಿರೋಧಿಸುತ್ತಿದೆ. ವೈಜ್ಞಾನಿಕವಾಗಿ ಯೋಚಿಸದೆ, ಚರ್ಚೆ-ವಿಮರ್ಶೆ ಇಲ್ಲದೆ ಏಕಾಏಕಿಯಾಗಿ ರಾಷ್ಟ್ರೀಯ ಶಿಕ್ಷಣ ನೀತಿ ತೆಗೆದುಹಾಕುವ ಹಾಗೂ ರಾಜ್ಯ ಶಿಕ್ಷಣ ನೀತಿ ತರುವ ನಿಲುವು ಕೈಗೊಂಡಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

7ನೇ ವೇತನ ಆಯೋಗದ ಶಿಫಾರಸು ಜಾರಿ ಮಾಡದ ಕಾಂಗ್ರೆಸ್ ಸರ್ಕಾರ, ರಾಜ್ಯವನ್ನು ಸಾಲದ ಸುಳಿಯಲ್ಲಿ ಸಿಲುಕಿಸಿದೆ. ಒಪಿಎಸ್ ಬಗ್ಗೆ ಸುಳ್ಳು ಭರವಸೆ ನೀಡಿದ್ದು, ಯುಪಿಎ ಸರಕಾರವೇ ಎನ್‌ಪಿಎಸ್ ಜಾರಿಗೊಳಿಸಿತ್ತು. ಬಿಜೆಪಿ ಆಡಳಿತದಲ್ಲಿ ಪಾಲಿಟೆಕ್ನಿಕ್, ಐಟಿಐ ಗುಣಮಟ್ಟ ಹೆಚ್ಚಿಸಿ ಪ್ರವೇಶ ಪ್ರಮಾಣ ಶೇ. 100ಕ್ಕೆ ಹೆಚ್ಚಳವಾಗಿದೆ. ಕಲಿತ ಎಲ್ಲರಿಗೂ ಉದ್ಯೋಗ ಸಿಗುತ್ತಿದೆ, ಸರ್ಕಾರಿ ಕಾಲೇಜುಗಳಲ್ಲಿ ಶೇ. 87ರಷ್ಟು ಅಕ್ರೆಡಿಷನ್ ಕೊಡಿಸಿದ್ದೇವೆ.

ಶಿಕ್ಷಕರ ನೇಮಕಾತಿ ವೇಳೆ ಪಾರದರ್ಶಕ ಕೌನ್ಸೆಲಿಂಗ್ ನಡೆಸಿದ್ದೇವೆ ಎಂದರು.

ಯಡಿಯೂರಪ್ಪ ಅವರ ಅವಧಿಯಲ್ಲಿ ಅನುದಾನಿತ ಸಂಸ್ಥೆಗಳಲ್ಲಿ ಹುದ್ದೆಗಳ ಭರ್ತಿಗೆ ಅವಕಾಶ ಮಾಡಿದೆ, ಕಾಂಗ್ರೆಸ್ ನೇಮಕಾತಿಯನ್ನು ಸಂಪೂರ್ಣ ನಿಷೇಧಿಸಿತ್ತು.

ಜ್ಞಾನ ಆಯೋಗ ಆರಂಭ, ಮೂರನೇ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿ ಮೂಲಕ ದೊಡ್ಡ ಸುಧಾರಣೆ ಮಾಡಲಾಗಿದೆ.

ಕೌಶಲ್ಯಯುಕ್ತ ಶಿಕ್ಷಣ ನೀಡುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಹತ್ವದ ಕ್ರಮ ತೆಗೆದುಕೊಂಡಿದ್ದಾರೆ. ಈ ಬಾರಿಯ ಪದವೀಧರ ಹಾಗು ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

# ಬಿಜೆಪಿ ಅಭ್ಯರ್ಥಿ ಬೆಂಗಾವಲು ವಾಹನ ಅಪಘಾತ : ಇಬ್ಬರ ಸಾವು

ಗೊಂಡ, ಮೇ 29 – ಉತ್ತರ ಪ್ರದೇಶದ ಕೈಸರ್‌ಗಂಜ್‌ನ ಬಿಜೆಪಿ ಅಭ್ಯರ್ಥಿ ಕರಣ್ ಭೂಷಣ್ ಸಿಂಗ್ ಅವರ ಬೆಂಗಾವಲಿಗೆ ಸೇರಿದ್ದು ಎನ್ನಲಾದ ವಾಹನವೊಂದು ಬಡಿದು ಇಬ್ಬರು ಸಂಬಂಧಿಗಳು ಸಾವನ್ನಪ್ಪಿದ್ದಾರೆ ಹಾಗೂ ಒಬ್ಬ ಮಹಿಳೆಗೆ ಗಾಯಗಳಾಗಿವೆ ಎಂದು ಪೊಲೀಸರು ಹೇಳಿದ್ದಾರೆ.

ಕರಣ್ ಸಿಂಗ್ ಅವರು ಕುಸ್ತಿ ಒಕ್ಕೂಟದ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಪುತ್ರ. ಈ ಪ್ರದೇಶದಲ್ಲಿ ಶಾಂತಿ ಕಾಯ್ದುಕೊಳ್ಳಲು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ರೆಹಾನ್ ಖಾನ್ (17) ಹಾಗೂ ಶೆಹಜಾದ್ ಖಾನ್ (20) ಅವರು ಮೋಟರ್‌ಸೈಕಲ್‌ನಲ್ಲಿ ತೆರಳುತ್ತಿದ್ದರು. ಆಗ, ಶಾಲೆಯ ಬಳಿ ವಾಹನ ಬಡಿದಿದೆ. ಇಬ್ಬರೂ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ನಂತರ ವಾಹನದ ಚಾಲಕ ನಿಯಂತ್ರಣ ಕಳೆದುಕೊಂಡಿದ್ದು, ರಸ್ತೆ ಬದಿ ಸಾಗುತ್ತಿದ್ದ ಸೀತಾ ದೇವಿ (60) ಎಂಬ ಮಹಿಳೆಗೆ ಬಡಿದಿದೆ. ಘಟನೆಗೆ ಸಂಬಂಧಿಸಿದಂತೆ ಚಾಲಕ ಲವ್ ಕುಶ್ ಶ್ರೀವಾಸ್ತವ ಬಂಧಿಸಲಾಗಿದ್ದು, ವಾಹನವನ್ನು ಜಪ್ತಿ ಮಾಡಲಾಗಿದೆ. ಈ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಕರಣ್ ಭೂಷಣ್ ಸಿಂಗ್ ನಾಲ್ಕು ಬೆಂಗಾವಲು ವಾಹನಗಳಲ್ಲಿ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ. ಅಪಘಾತಕ್ಕೀಡಾದ ವಾಹನ ಕೊನೆಯ ಸಾಲಿನಲ್ಲಿತ್ತು ಎಂದು ಮೂಲಗಳು ತಿಳಿಸಿವೆ.

ಹೊಲಗಳ ಬದಿಯಲ್ಲಿ ಅಳವಡಿಸಲಾಗಿದ್ದ ಹತ್ತಾರು ಸಿಮೆಂಟ್ ಕಂಬಗಳಿಗೆ ತೀವ್ರ ಹಾನಿಯಾಗಿದೆ. ಇದರಿಂದಾಗಿ ವಾಹನ ಸಾಗುತ್ತಿದ್ದ ವೇಗವನ್ನು ಅಂದಾಜಿಸಬಹುದಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಂಚಾರ ನಿಯಮ ಉಲ್ಲಂಘಿಸಿದ ಕಾರಣಕ್ಕಾಗಿ ಈ ವಾಹನಕ್ಕೆ 2 ಸಾವಿರ ರೂ.ಗಳ ದಂಡ ವಿಧಿಸಲಾಗಿತ್ತು. ಆ ದಂಡವನ್ನೂ ಪಾವತಿಸಿರಲಿಲ್ಲ. ವಾಹನದ ಹಿಂದೆ ಪೊಲೀಸ್ ಎಸ್ಕಾರ್ಟ್ ಎಂದು ಬರೆಯಲಾಗಿತ್ತು ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

# ಸಪ್ಪು ತರಲು ಹೋಗಿದ್ದ ಕುರಿಗಾಹಿ ವಿದ್ಯುತ್ ತಗುಲಿ ಸಾವು

ಮಲೇಬೆನ್ನೂರು, ಮೇ 29 - ಕುರಿಗಳಿಗೆ ಸಪ್ಪು ತರಲೆಂದು ಹೋಗಿದ್ದ ಕುರಿ ಕಾಯುವ ಯುವಕ ವಿದ್ಯುತ್ ತಂತಿ ತಗುಲಿ ಮರದಲ್ಲೇ ಸಾವಿಗೀಡಾದ ಘಟನೆ ಹೊಸ ಪಾಳ್ಯ ಗ್ರಾಮದಲ್ಲಿ ಬುಧವಾರ ಬೆಳಿಗ್ಗೆ ನಡೆದಿದೆ.

ಹಾನಗಲ್ ತಾಲ್ಲೂಕಿನ ಮಾಸನಕಟ್ಟೆ ಗ್ರಾಮದ ಕೊಟ್ರೇಶ್ ಎಂಬ 22 ವರ್ಷದ ಯುವಕ ಕುರಿ ಹಿಂಡನ್ನು ಹೊಡೆದು ಕೊಂಡು ಮೇಯಿಸುತ್ತಾ ಪಾಳ್ಯ ಗ್ರಾಮದಲ್ಲಿ ಬಿಡಾರ ಹೂಡಿದ್ದ ಎನ್ನಲಾಗಿದೆ. ಕೊಟ್ರೇಶ್, ಎಂದಿನಂತೆ ಬುಧವಾರ ಬೆಳಗ್ಗೆ ಕುರಿಗಳಿಗೆ ಸಪ್ಪು ತರಲೆಂದು ಮರವೊಂದನ್ನು ಏರಿ ಸಪ್ಪು ಮುರಿಯುವಾಗ ವಿದ್ಯುತ್ ತಂತಿ ಸ್ಪರ್ಶವಾಗಿ ಅಲ್ಲಿಯೇ ಮೃತಪಟ್ಟಿದ್ದಾನೆ.

# ದೊಡ್ಡಬಾತಿ ಬಳಿ ಅಪರಿಚಿತನ ಸಾವು : ವಾರಸುದಾರರ ಪತ್ತೆಗೆ ಕರೆ

ದಾವಣಗೆರೆ, ಮೇ 29- ದೊಡ್ಡಬಾತಿಯಿಂದ ಹರಿಹರ ಕಡೆಗೆ ಹೋಗುವ ಸಿಮೆಂಟ್ ರಸ್ತೆಯಲ್ಲಿ ದೊಗ್ಗಳ್ಳಿ ಗ್ರಾಮಕ್ಕೆ ಹೋಗುವ ಮಣ್ಣಿನ ರಸ್ತೆಯಲ್ಲಿ ಕೆಳಗಡೆ ನೀರು ಹೋಗಲು ಹಾಕಿರುವ ಸಿಮೇಂಟ್ ಪೈಪ್ ಪಕ್ಕ ಚರಂಡಿಯಲ್ಲಿ ಯಾವುದೋ ಅಪರಿಚಿತ ಗಂಡಸಿನ ಶವ ಮೊನ್ನೆ ಪತ್ತೆಯಾಗಿದೆ. ಕೋಲುಮುಖ, ತೆಳ್ಳನೆಯ ಮೈಕಟ್ಟು ಹೊಂದಿದ್ದು, ಸಂಬಂಧಪಟ್ಟವರು ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆ (08192262555, 9480803256), ಪೊಲೀಸ್ ಕಂಟ್ರೋಲ್ ರೂಂ. (08192253100) ಗೆ ಸಂಪರ್ಕಿಸಬಹುದು.

# ಸ್ಕೀಜೋಫ್ರೀನಿಯ ಮನೋರೋಗದ ಗಂಭೀರ ಮಾನಸಿಕ ಸ್ಥಿತಿ : ಭುವನೇಶ್ವರಿ



ಉಚ್ಚಂಗಿದುರ್ಗ

ಹರಪನಹಳ್ಳಿ, ಮೇ 29 - ಸ್ಕೀಜೋಫ್ರೀನಿಯ ಮನೋರೋಗದ ಒಂದು ಗಂಭೀರವಾದ ಮಾನಸಿಕ ಸ್ಥಿತಿಯಾಗಿದೆ ಎಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸಿ.ಜಿ. ಭುವನೇಶ್ವರಿ ಹೇಳಿದರು.

ಉಚ್ಚಂಗಿದುರ್ಗದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ಕೀಜೋಫ್ರೀನಿಯ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ಕೀಜೋಫ್ರೀನಿಯ ಪ್ರಭಾವ ಮನುಷ್ಯನ ಯೋಚನಾ ಲಹರಿ, ಅವನು ಅಥವಾ ಅವಳು ತನ್ನನ್ನು ತಾನು ವ್ಯಕ್ತಪಡಿಸುವ ರೀತಿ, ವಾಸ್ತವಿಕ ಅಂಶಗಳನ್ನು ಸ್ವೀಕರಿಸುವ ಬಗೆ ಹಾಗೂ ಅದನ್ನು ಇತರರೊಂದಿಗೆ ಯಾವ ರೀತಿ ಜೋಡಿಸಿ ನೋಡುವ ಬಗೆಗಳ ಮೇಲೆ ಹೆಚ್ಚಾಗಿ ಬೀರುತ್ತದೆ. ಹಾಗಾಗಿ ಇದೊಂದು ಮಾನಸಿಕ ಅಸ್ವಸ್ಥತೆ ಎಂದೇ ಹೇಳಬಹುದು.

**ಲಕ್ಷಣಗಳೆಂದರೆ** : ಮನಸ್ಥಿತಿಯನ್ನು ನಿಯಂತ್ರಣದಲ್ಲಿರಿಸಿ ಅವರು ಸದಾಕಾಲ ಆತಂಕದಲ್ಲಿರುವಂತೆ, ತಮ್ಮನ್ನು ತಾವೇ ಕಳೆದುಕೊಂದಿರುವಂತೆ ಹಾಗೂ ನೈಜತೆಯಿಂದ ಬಲು ದೂರದಲ್ಲಿರುವಂತೆ ಕಂಡು ಬರುತ್ತಾರೆ, ವಾಸ್ತವ ಜಗತ್ತೇ ಮರೆತು ಹೋಗುತ್ತೆ, ಕಲ್ಪನಾ ಲೋಕದಲ್ಲಿ ಜಗತ್ತನ್ನೇ ಮರೆಯುತ್ತಾರೆ, ಅವರಿಗೆ ಎಲ್ಲವೂ ಕಲ್ಪನೆ ಗೊಂದಲ, ಹಾಗೂ ವಿವಿಧ ಬಗೆಯ ಸದ್ದುಗಳಿಂದ ಕೂಡಿರುವ ಯಾವುದೋ ಭಿನ್ನ ಜಗತ್ತಿನಂತೆ ಭಾಸವಾಗುತ್ತೆ. ಅವರ ನಡವಳಿಕೆ, ಮಾತು, ವ್ಯವಹಾರ, ಇತರರಲ್ಲಿ ಗೊಂದಲ ಮತ್ತು ಸಾಕಷ್ಟು ಅಚ್ಚರಿ, ಆತಂಕಗಳನ್ನು ಉಂಟು ಮಾಡಿದರೂ ಆಶ್ಚರ್ಯವಿಲ್ಲ.

**ಕೆಲವು ತೀವ್ರವಾದ ಲಕ್ಷಣಗಳು, ಕಲ್ಪನೆಗಳು** : ಆ ವ್ಯಕ್ತಿಗೆ ವಾಸ್ತವ ಅಂಶ ಗಳನ್ನು ಪರಿಚಯಿಸಿದರೂ ಅದನ್ನು ನಂಬುವ ಸ್ಥಿತಿಯಲ್ಲಿರುವುದಿಲ್ಲ.

**ಭ್ರಮೆಗಳು** : ತನಗೆ ಯಾರೋ ಸ್ಪರ್ಶಸುತ್ತಿದ್ದಾರೆ ಅಥವಾ ಯಾರಾದ್ರೋ ಸದ್ದು ಕೇಳುತ್ತಿರುವ ಭ್ರಮೆಗಳು ಉಂಟಾಗುವುದು, ಯಾರೋ ಮಾತನಾಡಿದ ರೀತಿ, ಯಾವುದೋ ದೃಶ್ಯಾವಳಿ ಕಾಣುವುದು, ಯಾರದ್ದೇ ಉಪಸ್ಥಿತಿ ಇರುವಿಕೆಯನ್ನು ನೋಡುತ್ತಾರೆ.

**ಭಾವನೆಗಳ ಕೊರತೆ** : ಇವರಿಗೆ ಸಾಮಾನ್ಯ ಜನರಿಗಿರುವಂತೆ ಭಾವನೆಗಳನ್ನು ಸಂದರ್ಭಕ್ಕೆ ತಕ್ಕಂತೆ ವ್ಯಕ್ತಪಡಿಸುವುದಿಲ್ಲ.

**ಏಕಾಂತತೆ** : ಎಲ್ಲರೊಡನೆ ಬೆರೆಯದೇ ಏಕಾಂತತೆಯಲ್ಲೇ ಸದಾ ಕಾಲ ಆತಂಕದ ಛಾಯೆಯಲ್ಲಿ ಒಂದು ಮೂಲೆಯಲ್ಲಿ ಸುಮ್ಮನೆ ಇರುವುದು, ಸಾಧ್ಯತೆ ಇಲ್ಲದ ನಂಬಿಕೆ, ಸಂಶಯ ಈ ರೋಗದ ಲಕ್ಷಣಗಳು.

ಈ ಕಾಯಿಲೆಯು ಅನುವಂಶಿಯತೆಯಿಂದಲೂ ಬರಬಹುದು ಎಂದರು.

ಈ ಕಾರ್ಯಕ್ರಮದಲ್ಲಿ ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ, ಶಿವಕುಮಾರ್, ಪ್ರಾಥಮಿಕ ಸಮುದಾಯ ಆರೋಗ್ಯ ಅಧಿಕಾರಿ ಮಂಜುಳಾ, ಕಾರ್ಯಕರ್ತೆ ಆಶಾ ಸೇರಿದಂತೆ ಇತರರು ಇದ್ದರು.

# ಕಪ್ಪು ತಲೆ ಹುಳುವಿನಿಂದ ಸೊರಗುತಿದೆ ದಾವಣಗೆರೆ ತೆಂಗು

ತೆಂಗಿನ ಮರ ಪ್ರಕೃತಿಯ ಮೂಸೆಯಲ್ಲಿ ಮೂಡಿಬಂದ ಅದ್ಭುತ ಸಸ್ಯ. ಅನಾದಿ ಕಾಲದಿಂದಲೂ ತೆಂಗನ್ನು ಮಾನವ ಉಪಯೋಗಿಸುತ್ತಾ ಬಂದಿದ್ದಾನೆ. ತೆಂಗನ್ನು ನೇರವಾಗಿ ಆಹಾರದಲ್ಲಿ ಸೇವಿಸುವುದಲ್ಲದೆ ಎಣ್ಣೆ, ನಾರು, ಹಗ್ಗ, ಛಾವಣಿ, ಮುಂತಾದವುಗಳಲ್ಲಿ ಉಪಯೋಗಿಸಲಾಗುವುದು. ಸೋಪ್, ಶೃಂಗಾರ ಸಾಧನಗಳು ಮತ್ತು ಔಷಧಿಗಳಲ್ಲಿಯೂ ಬಳಕೆಯಲ್ಲಿದೆ. ತೆಂಗಿನಿಂದ ವಿವಿಧ ಸಿಹಿ ತಿನಿಸುಗಳಲ್ಲದೆ ಸ್ವಾದಿಷ್ಟ ಭಕ್ಷ್ಯಗಳನ್ನು ತಯಾರಿಸಲಾಗುವುದು.



**ತೆಂಗಿನ ಮರ** : ಏಕದಳ ಸಸ್ಯಗಳ ಗುಂಪಿಗೆ ಸೇರಿರುವ ತೆಂಗನ್ನು ಸಸ್ಯಶಾಸ್ತ್ರೀಯವಾಗಿ ಕೊಕಸ್ ನ್ಯುಸಿಫೆರಾ ಎಂದು ಕರೆಯುವರು. ದಾವಣಗೆರೆಯಲ್ಲಿ ಪ್ರಮುಖವಾಗಿ ಅಡಿಕೆಯನ್ನು ಬೆಳೆಯುತ್ತಿದ್ದರೂ ತೆಂಗಿನ ಮರವನ್ನು ತೋಟಗಾರಿಕೆ ಬೆಳೆಯಾಗಿ ಸದ್ಯಕ್ಕೆ 12900 ಹೆಕ್ಟೇರ್ ಜಾಗದಲ್ಲಿ ಬೆಳೆಯಲಾಗುತ್ತಿದೆ.

**ಕೀಟ ಬಾಧೆ:** ಈ ಸಸ್ಯಕ್ಕೆ ಹಲವಾರು ಕೀಟ-ರೋಗ ಬಾಧೆಗಳಿದ್ದು ಪ್ರಮುಖವಾಗಿ ಕಪ್ಪು ತಲೆ ಕಂಬಳಿ ಹುಳು ವಿನಾಶಕಾರಿಯಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ಇದು ಆತಂಕಕಾರಿ ಉಪದ್ರವ ತೀವ್ರವಾಗಿದ್ದು, ಹಲವು ತೋಟಗಳಲ್ಲಿ ಶೇ.70 ರಷ್ಟು ಮರಗಳು ಹಾನಿಯಾಗಿವೆ. ವರ್ಷ ಪೂರ್ತಿ ತೆಂಗಿನ ಮರಗಳಿಗೆ ಹುಳು ಬಾಧೆ ಇದ್ದರೂ ಬೇಸಿಗೆ ಕಾಲದಲ್ಲಿ ಹೆಚ್ಚಿನ ತೊಂದರೆ ಕಂಡುಬರುತ್ತದೆ.


ಪ್ರತಿ ಎಲೆಯಲ್ಲಿ ಒಣಗಿದಂತಹ ಮಚ್ಚೆಗಳು ಕಂಡುಬರುತ್ತವೆ. ಸುಳಿಯ ಮಧ್ಯದಲ್ಲಿರುವ ಮೂರು-ನಾಲ್ಕು ಎಲೆಗಳು ಮಾತ್ರ ಹಸಿರಾಗಿರುತ್ತವೆ. ಒಣಗಿದ ಎಲೆಗಳನ್ನು ಬಿಡಿಸಿ ನೋಡಿದರೆ ಬಿಳಿ ಕೂದಲಿನ ತರಹದ ಅಥವಾ ಬಿಳಿಪುಡಿ ಉದುರಿರುವಂತೆ ಕಾಣುತ್ತದೆ. ತೀವ್ರವಾಗಿ ತೊಂದರೆಗೊಳಗಾಗಿರುವ ತೋಟದಲ್ಲಿ ಗಿಡಗಳ ಗರಿಗಳು ಬೆಂಕಿಗೆ ಸುಟ್ಟಂತೆ ಕಾಣುತ್ತದೆ. ಕಾಯಿಗಳ ಮೇಲೂ ಕಂದು ಬಣ್ಣದ ಕಲೆಗಳನ್ನು ಕಾಣಬಹುದು. ಸಸ್ಯದ ಬೆಳವಣಿಗೆಗೆ ಅಗತ್ಯವಿರುವ ಎಲೆಗಳು ನಾಶವಾಗುವುದರಿಂದ ಗಿಡದ ಇಳುವರಿ ಗಮನಾರ್ಹವಾಗಿ ಕಡಿಮೆಯಾಗುತ್ತದೆ.

**ಪೀಡೆಕಾರಕ ಕೀಟ:** ಇದು ಒಂದು ಪತಂಗದ ಪ್ರಭೇದ. ತನ್ನ ಜೈವಿಕ ಚಕ್ರದ ಎರಡನೇ ಹಂತವೇ ಹಾನಿಕಾರಕ ಹಂತ - ಕಂಬಳಿಹುಳು. ಇದು ಹಸಿರು-ಮಿಶ್ರಿತ ಕಂದು ಬಣ್ಣವಿದ್ದು ಕಡು-ಕಂದು ಬಣ್ಣದ ತಲೆಯಿರುವುದು. ಕುತ್ತಿಗೆ ಮಧ್ಯಭಾಗ ಕೆಂಪು ಬಣ್ಣವಿದ್ದು ದೇಹದ ಮೇಲೆ ಕಂದು ಪಟ್ಟಿಗಳನ್ನು ಕಾಣಬಹುದು. ಇವುಗಳು ತೆಂಗಿನ ಎಲೆಗಳ ಕೆಳಭಾಗಲ್ಲಿ ಎಲೆಯ ಅಂಗಾಂಶಗಳನ್ನು ತಿನ್ನುತ್ತವೆ. ಈ ಹುಳುಗಳು 30ರಿಂದ 40 ದಿನಗಳವರೆಗೆ ಎಲೆಗಳನ್ನು ತಿನ್ನುತ್ತಾ ಇರುತ್ತವೆ. ಈ ಪತಂಗದ ಜೀವನಚಕ್ರ ಪೂರ್ತಿಯಾಗಲು ಎರಡರಿಂದ ಎರಡೂವರೆ ತಿಂಗಳು ಬೇಕಾಗುತ್ತದೆ.

**ಸಮಗ್ರ ಪೀಡೆ ನಿಯಂತ್ರಣ** : ಕಪ್ಪು-ತಲೆ ಹುಳುವಿನ ನಿಯಂತ್ರಣಕ್ಕೆ ಹಲವಾರು ವಿಧಾನಗಳನ್ನು ಸೂಚಿಸಲಾಗಿದೆ. ಅಕ್ಟೋಬರ್‌ನಿಂದ ಮೇ ತಿಂಗಳವರೆಗೆ ಬಿಸಿಲು ಹೆಚ್ಚಾದಂತೆ ಕೀಟಬಾಧೆ ಉಲ್ಬಣಗೊಳ್ಳುವುದು. ಹಾಗಾಗಿ ಆದಷ್ಟು ಬೇಗನೆ ಕೀಟವನ್ನು ಪತ್ತೆ ಮಾಡುವುದು ಮುಂಜಾಗ್ರಾತ ಕ್ರಮಗಳಲ್ಲೊಂದು.

- ಮೊದಲಿಗೆ ಕೀಟಬಾಧೆಗೆ ತುತ್ತಾಗಿರುವ ಎಲೆಗಳನ್ನು ಕಡಿದು ಸುಟ್ಟು ಹಾಕಬೇಕು.
- ಕೀಟಬಾಧೆ ಕಡಿಮೆಯಿದ್ದಲ್ಲಿ ಪ್ರತಿ ಮರದ ಕೆಳಗಿನ 5 ರಿಂದ 6 ತೆಂಗಿನ ಗರಿಗಳನ್ನು ತೆಗೆದು ಸುಟ್ಟು ಹಾಕಬೇಕು. ಈ ರೀತಿ ಮಾಡುವುದರಿಂದ ಮೊಟ್ಟೆ ಮತ್ತು ಕಂಬಳಿ ಹುಳುಗಳು ನಾಶವಾಗುವುವು.
- ಹೆಚ್ಚು ಮರಗಳಿಗೆ ಹಾನಿಯಾಗಿದ್ದರೆ ಪ್ರಯೋಗಶಾಲೆಯಲ್ಲಿ ಬೆಳೆಸಿದ ಅತೀತ ಪರಾವಲಂಬಿ ಜೀವಿಗಳನ್ನು ತೋಟದಲ್ಲಿ ಬಿಡಬೇಕು. ಇದನ್ನು ಜೈವಿಕ ನಿಯಂತ್ರಣವೆನ್ನುವರು. ಕಂಬಳಿ ಹುಳುಗಳನ್ನು ಕೊಲ್ಲುವ ಜೀವಿಗಳಾದ ಬೆತ್ಯಲಿಡ್, ಗೊನಿಯೊಜಸ್ ನೆಪಾನಟೈಡಿಸ್ ಮತ್ತು ಬ್ರಕೈಮೇರಿಯಾ ನೊಸಟೊಯ್ ಎನ್ನುವ ಪರೋಪಕಾರಿ ಜೀವಿಗಳನ್ನು ತೋಟದಲ್ಲಿ ಬಿಡಬೇಕು. ಪ್ರತಿಯೊಂದು ಇಂತಹ ಜೀವಿಯ ಮೊಟ್ಟೆಗಳನ್ನು ಸಮೀಪದ ಕೃಷಿ ಇಲಾಖೆ ಅಥವಾ ಕೃಷಿ ವಿಶ್ವವಿದ್ಯಾಲಯದಿಂದ ಪಡೆಯಬಹುದು.
- ಬಹಳ ಹೆಚ್ಚು ಮರಗಳು ತೊಂದರೆಗೊಳಗಾಗಿದ್ದರೆ ಜೈವಿಕ ವಿಧಾನವಷ್ಟೇ ಸಾಲುವುದಿಲ್ಲ. ಆಗ ರಾಸಾಯನಿಕ ಕೀಟನಾಶಕದ ಬಳಕೆ ಅನಿವಾರ್ಯ. ಎಲೆಗಳ ಕೆಳಭಾಗಕ್ಕೆ ಡೈಕ್ಲರೋವೊಸ್ 0.02%, ಅಥವಾ ಮ್ಯಾಲಥಯಾನ್ 0.05% ಅಥವಾ ಕ್ವಿನಾಲ್ ಫಾಸ್ 0.05% ಅಥವಾ ಫಾಸಲೊನ್ 0.05% ಕೀಟನಾಶಕಗಳನ್ನು ಸಿಂಪಡಿಸಬೇಕು. ಮಾನೋಕ್ರೊಟೊಫಾಸ್ 60% ನ್ನು ಕಾಂಡಕ್ಕೆ ಇಂಜೆಕ್ಷನ್ ಮೂಲಕ ಕೊಡುವ ವಿಧಾನವನ್ನು ಸಹ ಶಿಫಾರಸ್ಸು ಮಾಡಲಾಗಿದೆ. ಕೀಟ ನಾಶಕಗಳನ್ನು ಬೇರಿನ ಮೂಲಕವೂ ನೀಡಬಹುದು.
- ಹತ್ತಿರದ ಕೃಷಿ ಇಲಾಖೆಯನ್ನು ಭೇಟಿ ಮಾಡಿ ಸೂಕ್ತ ಮಾರ್ಗದರ್ಶನವನ್ನು ಪಡೆಯಬೇಕು.

ಈ ರೀತಿ ಸಮಗ್ರ ಪೀಡೆ ನಿಯಂತ್ರಣ ಕ್ರಮಗಳನ್ನು ತೆಗೆದುಕೊಂಡರೆ ತೆಂಗಿನ ಮರದಲ್ಲಿ ಕಪ್ಪು-ತಲೆ ಕಂಬಳಿಹುಳು ಬಾಧೆಯನ್ನು ನಿಯಂತ್ರಿಸಿ ವರ್ಷಗಟ್ಟಲೇ ಆರೈಕೆ ಮಾಡಿದ ಮರಗಳನ್ನು ಉಳಿಸಿಕೊಳ್ಳಬಹುದು. ಇಲ್ಲಿ ರೈತರ ಸಾಮೂಹಿಕ ಪ್ರಯತ್ನ ಸಫಲತೆಯನ್ನು ಹೆಚ್ಚಿಸುತ್ತದೆ. ಅಂದರೆ ಅಕ್ಕ-ಪಕ್ಕದ ತೋಟದವರು ಪರಸ್ಪರ ಸಹಕಾರದಿಂದ ಸಮಗ್ರ ಕೀಟ ಹತೋಟಿ ಕ್ರಮಗಳನ್ನು ಜರುಗಿಸಿದರೆ ಮಾತ್ರ ಈ ರಕ್ಕಸ ಕೀಟವನ್ನು ತಹಬದಿಗೆ ತರಲು ಸಾಧ್ಯ.



- ಡಾ. ಎಸ್. ಶಿಶುಪಾಲ, ಪ್ರಾಧ್ಯಾಪಕರು, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.
ಮೊ:8792674905,
ಇಮೇಲ್: sskumb@gmail.com

# ಹೊನ್ನಾಳಿ : ಜೂ.2ರಂದು ಪಂಚಮಸಾಲಿ ಸಮಾಜದ ಪ್ರತಿಭಾ ಪುರಸ್ಕಾರ

ಹೊನ್ನಾಳಿ, ಮೇ 29- ತಾಲ್ಲೂಕು ಪಂಚಮಸಾಲಿ ಸಮಾಜವು ಜೂನ್ 2 ರ ಭಾನುವಾರ ಹಿರೇಕಲ್ಮಠದಲ್ಲಿ ಹಮ್ಮಿಕೊಂಡಿರುವ ಪಂಚಮಸಾಲಿ ಸಮಾಜದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ವೀರಣ್ಣ ಹೇಳಿದರು.

ಅವರು ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಇಂದು ಹಮ್ಮಿಕೊಂಡಿದ್ದ ಪಂಚಮಸಾಲಿ ಸಮಾಜದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಸಮಾರಂಭಕ್ಕೆ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ, ಪೀಠದ ಧರ್ಮದರ್ಶಿ ಬಿ.ಸಿ. ಉಮಾಪತಿ ಮಾಜಿ ಸಚಿವ ಮುರುಗೇಶ್ ನಿರಾಣಿ, ಪಂಚಮಸಾಲಿ ರಾಜ್ಯ ಕಾರ್ಯಾಧ್ಯಕ್ಷ ಸೋಮನಗೌಡ ರಾಜ್ಯ ಗಡಿ ನಾಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ್ ರವರು ಆಗಮಿಸುವುದಾಗಿ ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಹಾಗು ಪಿಯುಸಿಯಲ್ಲಿ ಶೇ 60% ಕ್ಕೂ ಹೆಚ್ಚು ಅಂಕ ಪಡೆದವರನ್ನು ಹಾಗು ನಿವೃತ್ತ ನೌಕರರನ್ನು ಸನ್ಮಾನಿಸಲಾಗುವುದು. ಸಮಾರಂಭದಲ್ಲಿ ಪೀಠದ ಆಡಳಿತಾಧಿಕಾರಿ ಡಾ. ರಾಜಕುಮಾರ್, ಪಟ್ಟಣಶೆಟ್ಟಿ ಪರಮೇಶ, ಕುಂಕೋದ ಸೋಮಣ್ಣ ಕುಂಕೋದ ಹಾಲೇಶ, ಚನ್ನಮುಂಬಾಪುರದ ಚಂದ್ರಶೇಖರ, ಒಡೆರಹತ್ತೂರು ಅಶೋಕ್ ಮಾತನಾಡಿದರು.

ಪೇಟೆ ಮಲ್ಲೇಶ್, ಮಠದ ಬಸಣ್ಣ ಮೆಕ್ಕೇಜೋಳ ಚನ್ನೇಶ, ಕೆ.ವಿ. ಪ್ರಸನ್ನ, ಮೃತ್ಯುಂಜಯ ಪಾಟೀಲ್, ಪಲ್ಲವಿ ರಾಜು, ಗಮಕಿ ವಿಶ್ವಣ್ಣ, ದಿವಾಕರ್, ಪಿ ವಿಜಯ್, ಹೊಟೆಲ್ ಗಿರಿ, ಮಲ್ಲೂರು ರಾಜು, ಗಿರೀಶ್ ನಾಡಿಗ್, ಮಹಿಳಾ ಸದಸ್ಯರಾದ ಶಿಲ್ಪಾರಾಜುಗೌಡ , ಶಶಿ ದಿವಾಕರ್, ಸುಮಾ ರವಿ, ಕೋಮಲ ನಾಡಿಗ್ ಇನ್ನಿತರರಿದ್ದರು.



# ಜಾತಿ-ಮತ ಬೇಧವಿಲ್ಲದೆ ಪಂಚಾಕ್ಷರಿ ಮಂತ್ರ ಜಪಿಸಿ



ರಾಣೇಬೆನ್ನೂರಿನಲ್ಲಿನ ಶ್ರೀ ಸಿದ್ಧಾರೂಢ ಸ್ವಾಮಿ ಜಯಂತಿ ಕಾರ್ಯಕ್ರಮದಲ್ಲಿ ಡಾ. ಶಿವಾನಂದ ಭಾರತಿ ಶ್ರೀಗಳು

ರಾಣೇಬೆನ್ನೂರು,ಮೇ 29- ಬಡವ-ಬಲ್ಲಿದ, ದೇಶ-ವಿದೇಶ, ಹೆಣ್ಣು-ಗಂಡು ಅಥವಾ ಯಾವುದೇ ಜಾತಿ, ಧರ್ಮ ಎನ್ನುವ ತಾರತಮ್ಯವಿಲ್ಲದೆ 'ಓಂ ನಮ ಶಿವಾಯ' ಎನ್ನುವ ಪಂಚಾಕ್ಷರಿ ಮಂತ್ರವನ್ನು ಜಪಿಸಬಹುದು. ಆ ಮೂಲಕ ತಮ್ಮೆಲ್ಲ ಪಾಪಗಳಿಗೆ ಪರಿಹಾರ ಕಂಡುಕೊಂಡು ಮುಕ್ತಿ ಪಡೆದುಕೊಳ್ಳಬಹುದು ಎಂದು ಸಂಚಾರಿ ಸಂತ ಇಂಚಲದ ಶಿವಯೋಗೇಶ್ವರ ಸಾಧು ಸಂಸ್ಥಾನ ಮಠದ ಶ್ರೀ ಡಾ. ಶಿವಾನಂದ ಭಾರತಿ ಮಹಾಸ್ವಾಮೀಜಿ ನುಡಿದರು.

ಶ್ರೀಗಳು ತಾಲ್ಲೂಕಿನ ಖಂಡೇರಾಯನ ಹಳ್ಳಿ ಶ್ರೀ ಸಿದ್ಧಾರೂಢ ಸಿದ್ಧಾಶ್ರಮದಲ್ಲಿ ನಡೆದ ಸಿದ್ಧಾರೂಢ ಸ್ವಾಮಿ ಜಯಂತಿ, 30ನೇ ವೇದಾಂತ ಪರಿಷತ್, ತಮ್ಮ 84ನೇ ಜಯಂತ್ಯೋತ್ಸವ ಹಾಗೂ ಸಾಮೂಹಿಕ ವಿವಾಹ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡುತ್ತಿದ್ದರು.

ಯಮ ಪ್ರತಿಕ್ಷಣ ನಮ್ಮ ಆಯಸ್ಸನ್ನು ನುಂಗುತ್ತಲೇ ಇರುತ್ತಾನೆ. ಯಾವ ಕ್ಷಣ ಕೊನೆಗೊಳ್ಳುತ್ತದೆ ಎನ್ನುವುದು ಯಾರಿಗೂ ತಿಳಿಯಲಾರದು. ಕಾರಣ, ಇರುವುದರೊಳಗೆ ಪಂಚಾಕ್ಷರಿ ಮಂತ್ರ ಜಪಿಸಿ ಸಂಸಾರದಲ್ಲೂ ಸಾಧನೆ ಮಾಡಿ ಬದುಕನ್ನು ಊರ್ಜಿತಗೊಳಿಸಿಕೊಳ್ಳಿರಿ ಎಂದು ಶಿವಾನಂದ ಭಾರತಿ ಶ್ರೀಗಳು ಉಪದೇಶಿಸಿದರು.

ಪಂಚಮುಖಿ ಶಿವನ ಮುಖದಿಂದ ಹೊರಹೊಮ್ಮಿದ ಈ ಪಂಚಾಕ್ಷರಿ ಮಂತ್ರವನ್ನು ದಿನಕ್ಕೊಂದು ಬಾರಿ ಜಪಿಸಿ ತಮ್ಮೆಲ್ಲ ಕಷ್ಟಗಳನ್ನು, ಪಾಪಗಳನ್ನು ದೂರ ಮಾಡಿಕೊಂಡು ಪುಣ್ಯ ಸಂಪಾದಿಸಿಕೊಂಡು, ಬದುಕಿನ ಭವಸಾಗರವನ್ನು ದಾಟಿ ಮುಕ್ತಿ ಹೊಂದಿರಿ ಎಂದು ಹಂಪಿ ಹೇಮಕೂಟದ ವಿದ್ಯಾನಂದ ಭಾರತಿ ಶ್ರೀಗಳು, ದಾವಣಗೆರೆ ಜಡೆಸಿದ್ದೇಶ್ವರ ಮಠದ ಶಿವಾನಂದ ಶ್ರೀಗಳು, ಇಂಚಲದ ಪೂರ್ಣಾನಂದ ಭಾರತಿ ಶ್ರೀಗಳು ನುಡಿದರು. ಮಣಕೂರ ಸಿದ್ಧಾರೂಢಾ ಶ್ರಮದ ಮಾತೆ ಶ್ರೀ ಚನ್ನಬಸಮ್ಮ ವೇದಿಕೆಯಲ್ಲಿದ್ದರು.

ಮಠದ ಭಕ್ತ, ವಿಧಾನಸಭೆ ಉಪಸಭಾಪತಿ ರುದ್ರಪ್ಪ ಲಮಾಣಿ ಮಾತನಾಡಿ, ಭಕ್ತರ ಸಹಾಯ, ಸಹಕಾರದಿಂದ ಮುಂದಿನ ಜಾತ್ರೆಯ ಸಮಯಕ್ಕೆ ರಥೋತ್ಸವ, ಯಾತ್ರಿ ನಿವಾಸ ಹಾಗೂ ಸಿದ್ದಾರೂಢರ ಪ್ರತಿಮೆ ಪ್ರತಿಷ್ಠಾಪನೆ ಕಾರ್ಯಗಳನ್ನು ಪೂರೈಸಲಾಗುವುದು ಎಂದು ಹೇಳಿದರು.

ಡಾ.ಶಿವಾನಂದ ಭಾರತಿ ಶ್ರೀಗಳ ತುಲಾಭಾರ, ಮಠದ ಅಭಿವೃದ್ಧಿಗೆ ಹೆಗಲು ಕೊಟ್ಟ ವಿವಿಧ ಗ್ರಾಮಗಳ ಪ್ರಮುಖರ ಸನ್ಮಾನ, ಸಾಮೂಹಿಕ ವಿವಾಹ ನಡೆದವು. ಹಡಗಿನಹಾಳ ಮಠದ ಮಲ್ಲೇಶ್ವರ ಶರಣರು ಕಾರ್ಯಕ್ರಮ ನಿರೂಪಿಸಿದರು.

# ಪ್ರಜ್ವಲ್ ರೇವಣ್ಣ ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕೃತ

**(1ನೇ ಪುಟದಿಂದ)** ವಿಡಿಯೊ ಸಂದೇಶ ಕಳುಹಿಸಿದ್ದರು. ವಿಡಿಯೋ ಸಂದೇಶ ಬಂದ ಎರಡು ದಿನಕ್ಕೆ ಅವರ ಪರ ವಕೀಲರು ಜನಪ್ರಿನಿಧಿಗಳ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದರು.

ಇದರ ಮಧ್ಯೆ, ಗೃಹ ಸಚಿವ ಪರಮೇಶ್ವರ್ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಜ್ವಲ್ ಹಿಂತಿರುಗುತ್ತಿದ್ದಂತೆ ಬಂಧಿಸಲಾಗುವುದು ಎಂದು ತಿಳಿಸಿದ್ದಾರೆ.

ಪ್ರಜ್ವಲ್ ಹೇಳಿಕೆ ಹಿನ್ನೆಲೆಯಲ್ಲಿ ಎಸ್‌ಐಟಿ ರಾಷ್ಟ್ರದ ಎಲ್ಲಾ ವಿಮಾನ ನಿಲ್ದಾಣಗಳಿಗೆ ಸಂದೇಶ ರವಾನೆ ಮಾಡಿ, ಅವರನ್ನು ವಶಕ್ಕೆ ತೆಗೆದುಕೊಳ್ಳುವಂತೆ ಅಲರ್ಟ್ ಮಾಡಿದೆ.

ಇದರ ನಡುವೆಯೂ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎಸ್‌ಐಟಿ ಅಧಿಕಾರಿಗಳ ತಂಡಗಳು ಕಾಯುತ್ತಿವೆ.

# ಶುರುವಾಯ್ತು ಮಕ್ಕಳ ಚಿಲಿಪಿಲಿ

**(1ನೇ ಪುಟದಿಂದ)**
ಪೋಷಕರು ತಮ್ಮ ಮಕ್ಕಳನ್ನು ದಾಖಲಿಸಲು ಬಂದಿದ್ದಾರೆ. ಎಲ್ಲರಿಂದಲೂ ದಾಖಲೆಗಳನ್ನು ಪಡೆದು ಪರಿಶೀಲಿಸಿ 30ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಲಾಗುವುದು ಎಂದರು.



ಮುದ್ದು ಮಗಳಿಗೆ ಅಮ್ಮನ ಆಲ್‌ದ ಬೆಸ್ಟ್

ಜಿಲ್ಲೆಯಲ್ಲಿ ಮೂರು ಶಾಲೆಗಳು 2ನೇ ಹಂತದ ಪಿಎಂಶ್ರೀ ಯೋಜನೆಗೆ ಆಯ್ಕೆಯಾಗಿದ್ದು, ದಾವಣ ಗೆರೆ ತಾಲ್ಲೂಕಿನಲ್ಲಿ ಈ ಶಾಲೆಯೊಂದೇ ಆಯ್ಕೆಯಾ ಗಿರುವ ಹಿನ್ನೆಲೆಯಲ್ಲಿ ಪ್ರಸಕ್ತವರ್ಷವೇ ಎಲ್‌ಕೆಜಿ ಆರಂಭಿಸುವ ಸಾಧ್ಯತೆಗಳು ಹೆಚ್ಚಾಗಿವೆ. ಆದೇಶಕ್ಕಾಗಿ ಕಾಯುತ್ತಿದ್ದೇವೆ ಎಂದು ಸ್ವಾಮಿ ತಿಳಿಸಿದರು. ಸದ್ಯ ದಾಖಲಾತಿಗಳು ನಡೆಯುತ್ತಿವೆ.

ಸ್ವಚ್ಛತಾ ಕಾರ್ಯಗಳೂ ನಡೆಯುತ್ತಿವೆ. ಶುಕ್ರವಾರ ಮಕ್ಕಳಿಗೆ ಬಿಸಿಯೂಟದಲ್ಲಿ ಸಿಹಿ ತಯಾರಿಸಿ ಕೊಡಲಾಗುವುದು. ಅಂದೇ ಮಕ್ಕಳನ್ನು ಅದ್ಧೂರಿಯಾಗಿ ಸ್ವಾಗತಿಸಲಾಗುವುದು ಎಂದರು.

**ನಿಂಚನ ಶಾಲೆಯಲ್ಲಿ ಶಾರದ ಪೂಜೆ :** ನಿಟುವಳ್ಳಿಯ ನಿಂಚನ ಪಬ್ಲಿಕ್ ಶಾಲೆಯಲ್ಲಿ ಬುಧವಾರ ಶಾರದಾ ಪೂಜೆಯೊಂದಿಗೆ ಶಾಲೆ ಆರಂಭಿಸಲಾಯಿತು. ಶಿಕ್ಷಕರು ಮಕ್ಕಳನ್ನು ಪ್ರೀತಿಯಿಂದ ಸ್ವಾಗತಿಸಿದರು. ತಳಿರು ತೋರಣಗಳಿಂದ ಶಾಲೆ ಸಿಂಗರಿಸಲಾಗಿತ್ತು.

# ಪ್ರಧಾನಿ ಮೋದಿ ಧ್ಯಾನ ಪ್ರಸಾರ ತಡೆಯಲು ಕಾಂಗ್ರೆಸ್ ಆಗ್ರಹ

ನವದೆಹಲಿ, ಮೇ 29 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೇ 30ರಿಂದ 48 ಗಂಟೆಗಳ ಕಾಲ ಧ್ಯಾನ ಪ್ರವಾಸ ಕೈಗೊಳ್ಳಲು ಮುಂದಾಗಿರುವುದು ನೀತಿ ಸಂಹಿತೆ ಉಲ್ಲಂಘನೆಯಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಈ ಧ್ಯಾನ ಯಾತ್ರೆಯನ್ನು ಮಾಧ್ಯಮಗಳು ಪ್ರಸಾರ ಮಾಡದಂತೆ ಚುನಾವಣಾ ಆಯೋಗ ನಿರ್ಬಂಧಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಚುನಾವಣಾ ಆಯೋಗ ಭೇಟಿ ಮಾಡಿರುವ ಕಾಂಗ್ರೆಸ್ ನಾಯಕರಾದ ರಣದೀಪ್ ಸುರ್ಜೇವಾಲ, ಅಭಿಷೇಕ್ ಸಿಂಘ್ವಿ ಹಾಗೂ ಸೈಯದ್ ನಾಸೀರ್ ಹುಸೇನ್ ಅವರನ್ನು ಒಳಗೊಂಡ ನಿಯೋಗ, ಬಿಜೆಪಿ ನೀತಿ ಸಂಹಿತೆ ಉಲ್ಲಂಘಿಸುತ್ತಿದೆ ಎಂದು ದೂರಿದೆ.

ಕನ್ಯಾಕುಮಾರಿ ಧ್ಯಾನ ಮಂಟಪದಲ್ಲಿ ಪ್ರಧಾನಿ ಮೋದಿ ಧ್ಯಾನಕ್ಕೆ ಮುಂದಾಗಿರುವುದು ನೀತಿ ಸಂಹಿತೆಯ ಉಲ್ಲಂಘನೆ. ಜೂನ್ 1ರಂದು ಪ್ರಧಾನಿ ಮೋದಿ ಸ್ಪರ್ಧಿಸಿರುವ ವಾರಣಾಸಿ ಹಾಗೂ ಇತರೆ ಕ್ಷೇತ್ರಗಳಿಗೆ ಮತದಾನ ನಡೆಯಲಿದೆ.

# ಪಿಕಪ್ ಕಾಲುವೆಯ ದುರ್ನಾತಕ್ಕೆ ಸ್ಥಳೀಯರಿಗೆ ಭಯ

ಸುನೀಲ್ ಹರಿಹರ

ಹರಿಹರದ ಬೆಂಕಿ ನಗರ ಮತ್ತು ಪ್ರಶಾಂತ ನಗರ ಬಳಿಯ ನೀರಾವರಿ ಕಾಲುವೆಯಲ್ಲಿ ಕಸ, ಪ್ಲಾಸ್ಟಿಕ್, ಹೂಳು ಮತ್ತು ತ್ಯಾಜ್ಯ ತುಂಬಿಕೊಂಡು ನೀರು ಹರಿಯದಂತೆ ಸಂಪೂರ್ಣ ಹಾಳಾಗಿ, ನಾಲೆಯೂ ಬೃಹತ್ ಚರಂಡಿ ಸ್ವರೂಪ ತಾಳಿದೆ.

ಹೌದು, ದೇವರಬೆಳೆಕೆರೆ ಪಿಕಪ್ ಜಲಾಶಯದಿಂದ ಬನ್ನಿಕೋಡು, ಕೆ. ಬೇವಿನಹಳ್ಳಿ, ಶೇರಾಪುರ ಮತ್ತು ಅಮರಾವತಿ ಮೂಲಕ ಕೋಡಿಹಳ್ಳಿ ತಲುಪಿ ಸುಮಾರು 13 ಸಾವಿರ ಹೆಕ್ಟೇರ್ ಮಳೆಯಾಶ್ರಿತ ಜಮೀನುಗಳಿಗೆ ನೀರುಣಿಸಬೇಕಾದ ನಾಲೆ ಹರಿಹರ ನಗರ ಪ್ರದೇಶದಲ್ಲಿ ತ್ಯಾಜ್ಯ ತುಂಬಿಕೊಂಡು ಸಂಪೂರ್ಣ ಹಾಳಾಗಿದೆ.

ಕಾಲುವೆಯ ದಂಡೆ ಭಾಗದ ಬೆಂಕಿನಗರದಲ್ಲಿ ಕಸ ಸಂಗ್ರಹಣಾ ವಾಹನಗಳು ಸಕಾಲಕ್ಕೆ ಬರದೇ ಇರುವ ಕಾರಣ, ಸ್ಥಳೀಯ ನಾಗರಿಕರು ಕಸವನ್ನು ಕಾಲುವೆಗೆ ಹಾಕುತ್ತಿದ್ದಾರೆ.





ನಾನು ರೈತನ ಮಿತ್ರ, ಚರಂಡಿ ಅಲ್ಲ, ನನ್ನನ್ನೂ ರಕ್ಷಿಸಿ..!

ಚಿಕನ್ ಅಂಗಡಿ ತ್ಯಾಜ್ಯ, ಮೆಡಿಸಿನ್‌ಗಳು, ಗಾಜಿನ ಚೂರುಗಳು, ಅಪಾರ ಪ್ರಮಾಣದ ಪ್ಲಾಸ್ಟಿಕ್ ಪೇಪರ್‌ಗಳು ಮತ್ತು ಹಳೇ ಬಟ್ಟೆಗಳ ರಾಶಿ-ರಾಶಿ ಕಸ ನಾಲೆಯ ದಂಡೆಯಲ್ಲಿ ಕಾಣುತ್ತಿದೆ. ನಾಲೆಯಲ್ಲಿ ಬಿಸಾಡುವ ತ್ಯಾಜ್ಯದಿಂದ ದುರ್ನಾತ ಹಬ್ಬುತ್ತಿದ್ದು, ಸೊಳ್ಳೆಗಳ ಕಾಟ ವಿಪರೀತವಾಗಿದೆ ಮತ್ತು ಇಲ್ಲಿನ ಸಣ್ಣ ಮಕ್ಕಳು ಕಾಲುವೆಯ ಅಕ್ಕಪಕ್ಕದಲ್ಲೇ ಆಡುವು ದರಿಂದ ಸಾಂಕ್ರಾಮಿಕ ಕಾಯಿಲೆಗೆ ತುತ್ತಾಗುವುದನ್ನು ಅಧಿಕಾರಿಗಳು ತಪ್ಪಿಸಬೇಕಿದೆ.

**ಬಯಲು ಶೌಚ ಮುಕ್ತವಾಗಿಲ್ಲ:** ಸ್ಮಾರ್ಟ್ ಸಿಟಿಗೆ ಹತ್ತಿರವಿರುವ ಹರಿಹರದಲ್ಲಿ ಇಂದಿಗೂ ಬಯಲು ಶೌಚ ಮುಕ್ತವಾಗಿಲ್ಲ. ಕಾಲುವೆಯ ದಂಡೆಯು ಬಹಿರ್ದೆಸೆಯ ಸ್ಥಾನವಾಗಿದೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಬಹಿರ್ದೆಸೆಯಿಂದ ಹರಡುವ ರೋಗದ ಬಗ್ಗೆ ಜಾಗೃತಿ ಮೂಡಿಸಬೇಕಿದೆ. ಸರಿಯಾದ ಸಮಯಕ್ಕೆ ಚರಂಡಿ ಸ್ವಚ್ಛಗೊಳಿಸುವುದು, ಕಸ ಸಂಗ್ರಹಿಸುವುದು ಮಾಡಬೇಕು ಮತ್ತು ದುರ್ನಾತ ಬೀರುವ ಕಾಲುವೆಯನ್ನು ಸ್ವಚ್ಛಗೊಳಿಸುವ ಕಾರ್ಯ ನಡೆದರೆ, ಸ್ಥಳೀಯರು ರೋಗ ಭಯದಿಂದ ಮುಕ್ತರಾಗುವರು. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಈ ಕುರಿತು ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಹಾಗೂ ರೈತರು ಆಗ್ರಹಿಸಿದ್ದಾರೆ.

> ಬೆಂಕಿ ನಗರಕ್ಕೆ ಭೇಟಿ ನೀಡಿ ಕಸ ಹಾಕದಂತೆ ಸೂಚಿಸಿದ್ದೇನೆ ಮತ್ತು ದಂಡ ಹಾಕುವ ಎಚ್ಚರಿಕೆಯನ್ನೂ ನೀಡಿದ್ದೇನೆ. ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಶೌಚಾಲಯ ಒದಗಿಸಿದ್ದೇವೆ.
> - ಬಸವರಾಜ್ ಐಗೂರು, ಪೌರಾಯುಕ್ತರು.

> ನಗರ ಪಾಲಿಕೆಯವರು ಕಸ ಸ್ವಚ್ಛಗೊಳಿಸಬೇಕು. ನಾಲೆಯ ದುರಸ್ತಿ ಮತ್ತು ಹೂಳು ತೆಗೆಸಲು ಅನುದಾನದ ಕೊರತೆಯಿದ್ದು, ಅನುದಾನಕ್ಕಾಗಿ ಪತ್ರ ಬರೆದಿದ್ದೇನೆ.
> - ಧನಂಜಯ್, ಎಇಇ.

# ಬಿತ್ತನೆ ಬೀಜ ದರ ಏರಿಕೆ ಖಂಡಿಸಿ ಪ್ರತಿಭಟನೆ

**(1ನೇ ಪುಟದಿಂದ)**
ಪ್ರಮಾಣದಷ್ಟು ರಸಗೊಬ್ಬರ ಪೂರೈಕೆ ಮಾಡಲು ಕ್ರಮ ವಹಿಸಬೇಕು.

ಸಮರ್ಪಕವಾಗಿ ಬರ ಪರಿಹಾರ ವಿತರಿಸಬೇಕು ಎಂದು ಆಗ್ರಹಿಸಲಾಯಿತು.

ಮಾಜಿ ಶಾಸಕ ಬಸವರಾಜನಾಯ್ಕ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್ ನಾಯ್ಕ್, ರಮೇಶನಾಯ್ಕ, ಬೇತೂರು ಸಂಗನಗೌಡ್ರು, ಅಣಬೇರು ಶಿವಪ್ರಕಾಶ್, ರಘುನಂದನ ಅಂಬರಕರ್, ಆನೆಕೊಂಡ ರೇವಣಸಿದ್ದಪ್ಪ, ಅತಿಥ್ ಅಂಬರಕರ್, ಪಿ.ಎಸ್. ಬಸವರಾಜು, ವೀರೇಶ ಪೈಲ್ವಾನ್, ಆರ್.ಎಲ್. ಶಿವಪ್ರಕಾಶ್, ಅಣಜಿ ಗುಡ್ಡೇಶ್, ಜಿ.ಎಸ್ ಶ್ಯಾಮ್, ಕೆ.ಜಿ ಕಲ್ಲಪ್ಪ ಇತರರು ಪ್ರತಿಭಟನೆಯಲ್ಲಿದ್ದರು.


## Job Opportunities

| Requirement | No. of Posts | Qualifications | Desirable Experience |
|---|---|---|---|
| NICU Staff Nurse | 6 | GNM/B.Sc(N) | >3 years experience |
| ICU Staff Nurse | 6 | GNM/B.Sc(N) | >3 years experience |
| Pharmacist / Pharmacy In-Charge | 4 | D-Pharma or B-Pharma | >5 years experience with Pharmacy management responsibility |
| Labor room Nursing Staff | 4 | GNM/B.Sc(N) | >3 years experience in Pre and Post Labor activities. |
| OT Technicians/ OT Staff Nurses | 4 | GNM/B.Sc(N) | >3 years experience in Pre and Post Labor activities. |
| Marketing Executive | 4 | Any Degree | 3 years experience in hospital marketing |
| Dental Chair Side Assistant | 1 | PUC / Degree | Experience in Assisting Dental cases. |
| Dental Doctor | 2 | BDS | Fresher or Experienced |

Interview Dates : 30th to 31st May 2024
Timings : 11 AM to 2 PM and 6 PM to 8 PM
Venue : Vishwas Life Care Hospital
#298, Vidyarthi Bhavan Circle, Hadadi Road, Davangere
Contact No.: 758-00-758-66

Note: Candidates should bring their brief CV, One Passport Size Photograph, Educational Certificates, Experience Certificates for interview. Attractive Salary will be offered for most deserving candidates.

# ರಕ್ತಸ್ರಾವ ರೋಗಿಗಳ ಕ್ಷೇಮಾಭಿವೃದ್ಧಿಯಲ್ಲಿ ಕರ್ನಾಟಕ ಹಿಮೊಫಿಲಿಯಾ ಸೊಸೈಟಿ

ಪ್ರತಿ ವರ್ಷ ಏಪ್ರಿಲ್ 17 ರಂದು 'ವಿಶ್ವ ಹಿಮೊಫಿಲಿಯಾ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಅದು "ವಿಶ್ವ ಹಿಮೊಫಿಲಿಯಾ ಫೆಡರೇಷನ್ ಎಂಬ ಸ್ವಯಂಸೇವಾ ಸಂಸ್ಥೆಯನ್ನು ಹುಟ್ಟುಹಾಕಿದ ಫ್ರಾಂಕ್‌ಶ್ಯಾನ್ ಬೆಲ್ ಅವರ ಜನ್ಮದಿನ. ಸ್ವತಃ ಹಿಮೊಫಿಲಿಯಾ ಪೀಡಿತನಾಗಿದ್ದ ಶ್ಯಾನ್ ಬೆಲ್, ಕೆನಡಾದ ಮ್ಯಾಂಟ್ರಿಯಲ್‌ನಲ್ಲಿ 1963ರಲ್ಲಿ ಈ ಸಂಸ್ಥೆ ಹುಟ್ಟುಹಾಕಿ, ಇಂದು 140 ದೇಶಗಳಲ್ಲಿ ರಾಷ್ಟ್ರೀಯ ಹಿಮೊಫಿಲಿಯಾ ಸಂಸ್ಥೆಗಳ ಹುಟ್ಟಿಗೆ ಮತ್ತು ಹಿಮೊಫಿಲಿಯಾ ಪೀಡಿತರಿಗೆ ವೈದ್ಯಕೀಯ ಸೇವೆಗಳಲ್ಲಿ ಬದಲಾವಣೆ ತರಲು ಕಾರಣೀಭೂತರಾಗಿದ್ದಾರೆ. ನಮ್ಮ ದೇಶದಲ್ಲಿ ದೆಹಲಿಯ ಹಿಮೊಫಿಲಿಯಾ ಫೆಡರೇಷನ್ ಇಂಡಿಯಾ ಮತ್ತು 90ಕ್ಕು ಹೆಚ್ಚು ಹಿಮೊಫಿಲಿಯಾ ಸೊಸೈಟಿಗಳು ದೇಶದಾದ್ಯಂತ ಹಿಮೊಫಿಲಿಯಾ ರೋಗಪತ್ತೆ, ಚಿಕಿತ್ಸೆ ಮತ್ತು ಪುನರ್ವಸತಿ ಸೇವೆಗಳನ್ನು ಹಿಮೊಫಿಲಿಯಾ ಪೀಡಿತರ ಸೇವೆಗಾಗಿ ಶ್ರಮಿಸುತ್ತಿದೆ.

ಈ ವರ್ಷದ ಧ್ಯೇಯ ವಾಕ್ಯ "ಎಲ್ಲಾ ಅನುವಂಶಿಕ ರಕ್ತಸ್ರಾವ ರೋಗಿಗಳನ್ನು ಯಾವುದೇ ಜಾತಿ, ಧರ್ಮ, ಲಿಂಗ ತಾರತಮ್ಯವಿಲ್ಲದೆ, ಸಮಾಜದ ಮುಖ್ಯವಾಹಿನಿಗೆ ತರುವುದಾಗಿದೆ.

Theme: 'Equitable access for all: recognizing all bleeding disorders'.

ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಮತ್ತು ಹಿಮೊಫಿಲಿಯಾ ಬಾಧಿತರಿಗೆ, ಕುಟುಂಬದವರಿಗೆ ಮನೋಸ್ಥೈರ್ಯ ನೀಡುವ ಉದ್ದೇಶ.

**ಹಿಮೋಫಿಲಿಯಾ ಎಂದರೇನು ? :** ಹಿಮೋಫಿಲಿಯಾ ಎಂಬುದು ರಕ್ತ ಹೆಪ್ಪುಗಟ್ಟುವ ಕ್ರಿಯೆಯಲ್ಲಿನ ನ್ಯೂನತೆಯಿಂದ ಉಂಟಾಗುವ ಅನುವಂಶಿಕ ರಕ್ತಸ್ರಾವ ರೋಗ. ಕನ್ನಡದಲ್ಲಿ ಕುಸುಮ ರೋಗವೆಂದು ಕರೆಯಲ್ಪಡುವ ಈ ರೋಗ, ಸುಮಾರು 10 ಸಾವಿರ ಜನರಲ್ಲಿ ಒಬ್ಬರಿಗೆ ಕಾಣಿಸಿಕೊಳ್ಳುವ ಸಂಭವವಿರುತ್ತದೆ. ಹಿಮೊಫಿಲಿಯಾ ಬಾಧಿತ ವ್ಯಕ್ತಿಗೆ ಸಣ್ಣಪುಟ್ಟ ಗಾಯಗಳಾದಾಗ ರಕ್ತ ಹೆಪ್ಪುಗಟ್ಟದೇ, ರಕ್ತಸ್ರಾವ ನಿಲ್ಲುವುದಿಲ್ಲ. ಅಲ್ಲದೇ, ದೇಹದ ಒಳ ಅಂಗಾಂಗಳಲ್ಲೂ, ಪ್ರಮುಖವಾಗಿ ಕೀಲುಗಳು ಮತ್ತು ಸ್ನಾಯುಗಳಲ್ಲಿ ರಕ್ತಸ್ರಾವವಾಗುತ್ತದೆ. ಕೆಲವೊಂದು ಬಾರಿ ಮಿದುಳು, ಹೊಟ್ಟೆಯೊಳಗೆ ರಕ್ತಸ್ರಾವಗಳಾದಲ್ಲಿ ಕೊಡಲೇ ಚಿಕಿತ್ಸೆ ದೊರೆಯದಿದ್ದಲ್ಲಿ ಪ್ರಾಣಾಂತಿಕವಾಗಬಹುದು.

**ರೋಗದ ತೀವ್ರತೆ :** ಆರೋಗ್ಯವಂತರ ರಕ್ತದಲ್ಲಿ ಈ ರಕ್ತ ಹೆಪ್ಪುಗಟ್ಟುವ ಪ್ರೋಟೀನುಗಳು ಶೇ.50-200ರ ಮಿತಿಯಲ್ಲಿ ಇರುತ್ತದೆ. ಆದರೆ ಹಿಮೋಫಿಲಿಯಾ ಪೀಡಿತರಲ್ಲಿ, ಫ್ಯಾಕ್ಟರ್‌ಗಳ ಪ್ರಮಾಣದ ಕೊರತೆಯ ಆಧಾರದ ಮೇಲೆ ಮೂರು ಬಗೆಯಾಗಿ ವಿಂಗಡಿಸಬಹುದು.

**1.ಅತ್ಯಂತ ತೀವ್ರತರವಾದ ಹಿಮೋಫಿಲಿಯಾ :** ಈ ಹಿಮೊಫಿಲಿಯಾ ಪೀಡಿತರ ರಕ್ತದಲ್ಲಿ ಫ್ಯಾಕ್ಟರ್ 8 ಅಥವಾ ಫ್ಯಾಕ್ಟರ್ 9ರ ಕೊರತೆಯು ಶೇ. 1ಕ್ಕಿಂತಲೂ ಕಡಿಮೆಯಿರುತ್ತದೆ. ಯಾವುದೇ ರೀತಿಯ ಪೆಟ್ಟು ಬೀಳದಿದ್ದರೂ ಆಂತರಿಕ ರಕ್ತಸ್ರಾವ ಉಂಟಾಗುತ್ತದೆ.

**2. ಸಾಧಾರಣ ಹಿಮೋಫಿಲಿಯಾ :** ಈ ರೋಗಿಗಳಲ್ಲಿ ಫ್ಯಾಕ್ಟರ್‌ಗಳ ಶೇ. 2ರಿಂದ 5ರಷ್ಟು ಪ್ರಮಾಣವಿದ್ದು, ಇವರಿಗೆ ಪೆಟ್ಟು ಬಿದ್ದಾಗ, ಹಲ್ಲುಗಳನ್ನು ಕೀಳಿಸಿದಾಗ ಅಥವಾ ಶಸ್ತ್ರ ಚಿಕಿತ್ಸೆಗೊಳಗಾದಾಗ ರಕ್ತಸ್ರಾವ ನಿಲ್ಲುವುದಿಲ್ಲ.

**3. ಸೌಮ್ಯತರ ಹಿಮೋಫಿಲಿಯಾ:** ಈ ರೋಗಿಗಳಲ್ಲಿ ಫ್ಯಾಕ್ಟರ್ ಪ್ರಮಾಣ ಶೇ. 6ರಿಂದ 40 ರಷ್ಟು ಇರುತ್ತದೆ. ಇವರಿಗೆ ಅಪಘಾತಗಳಾದಾಗ, ಶಸ್ತ್ರ ಚಿಕಿತ್ಸೆಗೊಳಗಾದಾಗ ರಕ್ತಸ್ರಾವ ನಿಲ್ಲುವುದಿಲ್ಲ.

**ಗುಣಲಕ್ಷಣಗಳು :** ● ಮಗು ತೆವಳಲು ಅಥವಾ ನಡೆಯಲು ಆರಂಭಿಸಿದಾಗ ಸಣ್ಣ ಪುಟ್ಟ ಪೆಟ್ಟುಗಳಿಂದಾಗಿ ದೇಹದ ವಿವಿಧ ಭಾಗಗಳಲ್ಲಿ ಕಂದು ಮಿಶ್ರಿತ ಮಚ್ಚೆಗಳು ಕಾಣಿಸಿಕೊಳ್ಳುತ್ತವೆ.

● ಕೀಲು ಅಥವಾ ಸ್ನಾಯುಗಳಲ್ಲಿ ಆಂತರಿಕ ರಕ್ತಸ್ರಾವವಾಗಿ ಅಥವಾ ಒಳರಕ್ತಸ್ರಾವದಿಂದಾಗಿ ಬಾವು ಮತ್ತು ನೋವು ಉಂಟಾದಲ್ಲಿ, ರಕ್ತಸ್ರಾವ ರೋಗ ಇರಬಹುದೆಂದು ಅನುಮಾನಿಸಬಹುದು.

● ಕೆಲವರಲ್ಲಿ ಹಲ್ಲು ಬೀಳುವಾಗ ಅಥವಾ ಹಲ್ಲು ಕೀಳಿಸಿಕೊಳ್ಳುವಾಗ ಕಾಣಿಸುವ ರಕ್ತಸ್ರಾವವು ಸಹಜವಾಗಿ ಹೆಪ್ಪುಗಟ್ಟದೆ ರಕ್ತ ಜಿನುಗತೊಡಗಿದರೆ ಈ ರೋಗವಿರಬಹುದು ಎಂದು ಹೇಳಬಹುದು.

● ವೈದ್ಯರು ಇಂಜೆಕ್ಷನ್‌ಗಳನ್ನು ಸ್ನಾಯುಗಳಿಗೆ ನೀಡಿದಾಗ ಉಂಟಾಗುವ ಒಳರಕ್ತಸ್ರಾವದಿಂದಾಗಿ ಬಾವು ಮತ್ತು ನೋವು ಉಂಟಾದಲ್ಲಿ ರಕ್ತಸ್ರಾವ ರೋಗ ಇರಬಹುದೆಂದು ಅನುಮಾನಿಸಬಹುದು.

● ದೇಹದ ಯಾವುದೇ ಭಾಗಗಳಲ್ಲಿ ರಕ್ತಸ್ರಾವ ಉಂಟಾಗಬಹುದು.

● ಮಿದುಳಿನಲ್ಲಿ ಅಥವಾ ಕರುಳಿನಲ್ಲಿ ರಕ್ತಸ್ರಾವಕ್ಕೆ ತಕ್ಷಣ ಚಿಕಿತ್ಸೆ ನೀಡದಿದ್ದಲ್ಲಿ ಸಾವಿನ ದವಡೆಗೆ ಸಿಲುಕಬಹುದು.

● ಇಂತಹ ಸಂದರ್ಭಗಳಲ್ಲಿ ಮಗುವನ್ನು ವೈದ್ಯರಲ್ಲಿ



ತೋರಿಸಿ, ನಿರ್ದಿಷ್ಟ ರಕ್ತ ಪರೀಕ್ಷೆಗಳಿಗೆ ಒಳಪಡಿಸಿ ಯಾವ ಪ್ರೋಟೀನಿನ ಕೊರತೆಯ ಹಿಮೊಫಿಲಿಯಾ ಎಂದು ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ನೀಡಬಹುದಾಗಿದೆ.

**ಮುನ್ನೆಚ್ಚರಿಕೆ ಕ್ರಮಗಳು :** ● ಕೀಲು, ಸ್ನಾಯುಗಳಲ್ಲಿ ರಕ್ತಸ್ರಾವವಾಗುವ ಮುನ್ಸೂಚನೆ ಗೊತ್ತಾದ ಕೂಡಲೇ, ಫ್ಯಾಕ್ಟರ್‌ಇಂಜಕ್ಷನ್ ಪಡೆಯಬೇಕು.

● ಪ್ರಾಣಾಂತಿಕ ರಕ್ತಸ್ರಾವಗಳಿಗೆ (ಮೆದುಳು ಅಥವಾ ಹೊಟ್ಟೆ) ಅದಷ್ಟು ಬೇಗನೆ ಔಷಧಿಗಳನ್ನು ನೀಡಬೇಕು. ತಡವಾದಲ್ಲಿ ಜೀವ ಉಳಿಸುವುದು ಕಷ್ಟವಾಗಬಹುದು.

● ವಿಪರೀತ ತಲೆನೋವಿನ ಜೊತೆ, ಚಿಮ್ಮಿ ಆಗುವ ವಾಂತಿ ಆದ ಕೂಡಲೇ ರೋಗಿಯನ್ನು ಚಿಕಿತ್ಸಾ ಕೇಂದ್ರಕ್ಕೆ ಕರೆದೊಯ್ಯಬೇಕು.

● ದಂತ ರಕ್ಷಣೆಗೆ (ದಿನಕ್ಕೆ ಎರಡು ಬಾರಿ ಬ್ರಶ್ ಮಾಡಬೇಕು) ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

● ಮಲಗುವ ಮುನ್ನ ಹಲ್ಲು ಉಜ್ಜಿ, ವಸಡು ಮತ್ತು ಬಾಯಿಯ ಆರೋಗ್ಯ ಕಾಪಾಡಿಕೊಂಡಲ್ಲಿ, ಹಲ್ಲುಗಳಲ್ಲಿ ರಕ್ತಸ್ರಾವಗಳಾಗುವುದನ್ನು ತಡೆಯಬಹುದು.

● ನಿತ್ಯವೂ ಲಘು ವ್ಯಾಯಾಮ ಮಾಡುವ ಪರಿಪಾಠ ಬೆಳೆಸಿಕೊಳ್ಳಬೇಕು, ದೇಹದ ಸ್ನಾಯುಗಳು ಮತ್ತು ಕೀಲುಗಳನ್ನು ಸದೃಢವಾಗಿ ಇಟ್ಟುಕೊಳ್ಳಬಹುದು.

● ಪ್ರತಿ ಮೂರು ತಿಂಗಳಿಗೊಮ್ಮೆ Inhibitor Screening test ಮಾಡಿಸಿಕೊಳ್ಳಬೇಕು.

● ವರ್ಷಕ್ಕೊಂದು ಬಾರಿಯಾದರೂ ಹಿಮೊಫಿಲಿಯಾ ಚಿಕಿತ್ಸಾ ಕೇಂದ್ರಕ್ಕೆ ಭೇಟಿ ನೀಡಿ ವಾರ್ಷಿಕ ಆರೋಗ್ಯ ತಪಾಸಣೆ ಮಾಡಿಸುವುದು ಸೂಕ್ತ.

**ಹಿಮೊಫಿಲಿಯಾದ ಇತಿಹಾಸ :** ಹಿಮೊಫಿಲಿಯಾವು ಅನುವಂಶಿಕತೆಯ ವೈಶಿಷ್ಟ್ಯವಾಗಿದೆ, ಈ ರೋಗವು ರಾಜಮನೆತನದ ರೋಗವೆಂದು ವೈದ್ಯಕೀಯ ರಂಗದಲ್ಲಿ ಪ್ರಖ್ಯಾತಿ ಪಡೆದ ಕಾರಣ, ಇದು ಇಂಗ್ಲೆಂಡ್ ದೇಶದ ರಾಜ ಮನೆತನದಲ್ಲಿ ಇತ್ತು. ರಾಣಿ ವಿಕ್ಟೋರಿಯಾ ಹಿಮೋಫಿಲಿಯಾ ವಾಹಕಿಯಾಗಿದ್ದು, ರಾಜಕುಮಾರರು ಹಿಮೋಫಿಲಿಯಾ ಪೀಡಿತರಾಗಿದ್ದರು, ಅವಳ ಕೆಲವು ರಾಜಕುಮಾರಿಯರು ಕೂಡ ವಾಹಕಿಯರಾಗಿದ್ದರು. ಈ ರಾಜಕುಮಾರಿಯರನ್ನು ನೆರೆ ದೇಶದ ರಾಜ ಮನೆತನಗಳಿಗೆ ಮದುವೆ ಮಾಡಿದ್ದರಿಂದ ನೆರೆ ದೇಶಗಳಿಗೂ ಹಿಮೋಫಿಲಿಯಾ ಹರಡಿತು. ಹಿಮೋಫಿಲಿಯಾ 'ರಾಜ ಮನೆತನದ ರೋಗ' (ರಾಯಲ್ ಡಿಸೀಸ್) ಎಂದು ಪ್ರಸಿದ್ಧವಾಯಿತು. ಗಂಡು ಮಕ್ಕಳು ಈ ರೋಗದಿಂದ ಬಳಲುತ್ತಾರೆ, ಹೆಣ್ಣುಮಕ್ಕಳು ಅನುಭವಿಸದಿದ್ದರೂ, ತಮ್ಮ ಮಕ್ಕಳಿಗೆ ರೋಗವನ್ನು ನೀಡಬಲ್ಲ ವಾಹಕಿಯರಾಗುತ್ತಾರೆ.

ರಾಯಲ್ ಡಿಸೀಸ್ ಎಂದೇ ಖ್ಯಾತಿ ಪಡೆದಿರುವ ಹಿಮೊಫಿಲಿಯಾ, ರೋಗಿಗೆ ಒಂದು ಬಾರಿ ರಕ್ತಸ್ರಾವವಾದರೆ 10 ರಿಂದ 20 ಸಾವಿರ ರೂಪಾಯಿಗಳ ವೆಚ್ಚ ತಗಲುತ್ತದೆ. ಸಾಮಾನ್ಯವಾಗಿ ತಿಂಗಳಲ್ಲಿ 2-3 ಬಾರಿ ರಕ್ತಸ್ರಾವವಾದರೆ ಬಡ ಮತ್ತು ಮಧ್ಯಮ ವರ್ಗದ ರೋಗಿಗಳಿಗೆ ನಿರಂತರವಾಗಿ ಚಿಕಿತ್ಸೆ ಪಡೆಯುವುದು ಅಸಾಧ್ಯದ ಸಂಗತಿಯಾಗಿದೆ. ಹಿಮೊಫಿಲಿಯಾ ಬಾಧೆ ಇದ್ದಲ್ಲಿ ಶ್ರೀಮಂತರೂ ಸಹ ಕೆಲವೇ ವರ್ಷಗಳಲ್ಲಿ ಬಿಪಿಎಲ್ ಕಾರ್ಡಿಗೆ ಅರ್ಜಿ ಸಲ್ಲಿಸುತ್ತಾರೆ ಎಂಬ ಮಾತು ವಾಡಿಕೆಯಿದೆ.

## ಕರ್ನಾಟಕ ಹಿಮೊಫಿಲಿಯಾ ಸೊಸೈಟಿ

ದಾವಣಗೆರೆ 1989-90 ನೇ ಸಾಲಿನಿಂದ ಇಲ್ಲಿಯವರೆಗೆ ಹಿಮೋಫಿಲಿಯಾ ಬಾಧಿತರ ಶ್ರೇಯೋಭಿವೃದ್ದಿಗಾಗಿ ಲಾಭರಹಿತ, ಸರ್ಕಾರೇತರ ಸಂಸ್ಥೆಯಾಗಿ ಕರ್ನಾಟಕದಲ್ಲಿ ಸೇವೆ ಸಲ್ಲಿಸುತ್ತಿದೆ. ದಾನಿಗಳು, ಸಾರ್ವಜನಿಕರು, ಸರ್ಕಾರದ ನೀತಿ ನಿರೂಪಕರು, ಸಮಾಜದ ಗಣ್ಯವ್ಯಕ್ತಿಗಳು, ಪ್ರಸಿದ್ದ ವ್ಯಕ್ತಿಗಳು ಮತ್ತು ಸ್ವಯಂ ಸೇವಾಯುವ ಸಮುದಾಯದ ಸಹಕಾರದಿಂದ ದಾವಣಗೆರೆಯಲ್ಲಿ ಕಳೆದ 34 ವರ್ಷಗಳಿಂದ ರಾಜ್ಯದಎಲ್ಲಾ ಜಿಲ್ಲೆಗಳ ಬಡ ಹಿಮೋಫಿಲಿಯಾ ಬಾದಿತರಿಗೆ ಉಚಿತಚಿಕಿತ್ಸೆ, ಸಲಹೆ ಮತ್ತು ಪುನರ್ವಸತಿ ಸೇವೆಗಳನ್ನು ನಿರಂತರವಾಗಿ ನೀಡುತ್ತಾ ಬಂದಿದೆ.

ಸೊಸೈಟಿಯು ಸುಸಜ್ಜಿತ ರಕ್ತ ಪರೀಕ್ಷಾಕೇಂದ್ರ, ಲೈಫ್ ಲೈನ್ ರಕ್ತ ಭಂಡಾರ, ಹೊರ/ಒಳ ರೋಗಿಗಳ ವಿಭಾಗ, ಭೌತಿಕ ಚಿಕಿತ್ಸಾ ವಿಭಾಗ, ಆಪ್ತ ಸಮಾ ಲೋಚನಾ ವಿಭಾಗ, ಟೆಲಿ ಮೆಡಿಸಿನ್, ಹಿಮೊಫಿಲಿಯಾ ಸಂಚಾರಿ ಚಿಕಿತ್ಸಾ ಘಟಕ ಹಾಗೂ ತರಬೇತಿ ಸಭಾಂಗಣ ಮತ್ತು ರಕ್ತ ಪೂರಣ ವಿಭಾಗ ಗಳನ್ನು ವ್ಯವಸ್ಥೆಗೊಳಿಸಿದೆ. ಇಂತಹ ಮಹತ್ತರ ಸವಾಲನ್ನು ಕೈಗೊಳ್ಳಲು ಮುಖ್ಯಕಾರಣ ಸ್ವತಹ ಹಿಮೊಫಿಲಿಯಾ ಪೀಡಿತರಾಗಿದ್ದು, ಜ.ಜ.ಮು. ವೈದ್ಯಕಿಯ ಮಹಾ ವಿದ್ಯಾಲಯದ ಪೆಥಾಲಜಿ ವಿಭಾಗದಲ್ಲಿ ಕಾರ್ಯನಿ ರ್ವಹಿಸುತ್ತಿರುವ ಡಾ. ಸುರೇಶ್ ಹನಗವಾಡಿಯವರು. ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯನ್ನು ಸ್ಥಾಪಿಸಿ ಸಮಾಜದಲ್ಲಿ ವೈದ್ಯರು, ಸ್ವಯಂ ಸೇವಾ ಯುವ ಸಮುದಾಯವನ್ನು ಹಿಮೊಫಿಲಿಯಾ ಕುಟುಂಬದವರನ್ನು ಸಂಘಟಿಸಿ ಇಂತಹ ಮಹತ್ತರ ಬದಲಾವಣೆಗೆ ಕಾರಣೀಭೂತರಾಗಿದ್ದಾರೆ.

ದಾವಣಗೆರೆಯಲ್ಲಿ ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯನ್ನು ಸ್ಥಾಪಿಸಿ ಮೂರು ದಶಕಗಳಿಂದ ರಾಜ್ಯದಲ್ಲಿ ಹಿಮೋಫಿಲಿಯಾ ಮತ್ತು ಇತರೆ ರಕ್ತಸ್ರಾವ ರೋಗಿಗಳ ಕ್ಷೇಮಾಭಿವೃದ್ದಿಗಾಗಿ ಶ್ರಮಿಸುತ್ತಿದೆ. ನಿರಂ ತರವಾಗಿ ಶ್ರಮವಹಿಸಿ ರಾಜ್ಯ ಸರ್ಕಾರವನ್ನು ಹಿಮೊ ಫಿಲಿಯಾ ಚಿಕಿತ್ಸಾ ಅಭಿಯಾನದಲ್ಲಿ ತೊಡಗಿಸಿಕೊಳ್ಳು ವಂತೆ ಮಾಡುವಲ್ಲಿ ಸಂಸ್ಥೆಯು ಯಶಸ್ವಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಬಹು ವೆಚ್ಚದಾಯಕ ಔಷಧಿ ಗಳು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾಗಿ ದೊರಕುವಂತಾಗಿರುವುದು ರೋಗಿಗಳ ಕುಟುಂಬಗಳು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಅಲ್ಲದೆ ವೈದ್ಯ ಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳಿಗೆ ತರ ಬೇತಿ ನೀಡಿ ಉತ್ಕೃಷ್ಟ ಚಿಕಿತ್ಸೆ ನೀಡಲು ಸಹಕಾರಿಯಾಗಿದೆ.

**- ಡಾ. ಸುರೇಶ್ ಹನಗವಾಡಿ,**
ಪ್ರಾಧ್ಯಾಪಕರು, ಪೆಥಾಲಜಿ ವಿಭಾಗ,
ಜ.ಜ.ಮು ವೈದ್ಯಕೀಯ ಕಾಲೇಜು,
ಅಧ್ಯಕ್ಷರು, ಕರ್ನಾಟಕ
ಹಿಮೊಫಿಲಿಯಾ ಸೊಸೈಟಿ,
ದಾವಣಗೆರೆ. 87222 09404,
77952 87877



---

## ಚಿಂತನ - ಮಂಥನ



### ಸ್ಪರ್ಧಾ ಪ್ರಪಂಚ

ನಾವೀಗ ಬದುಕುತ್ತಿರುವುದು ಪೈಪೋ ಟಿಯ ಪ್ರಪಂಚದಲ್ಲಿ, ಇಲ್ಲಿ ನೆಲೆಯೂರಿ ಬಾಳ ಬೇಕೆಂದರೆ ನಿತ್ಯ ನಮ್ಮ ಬೌದ್ಧಿಕ ಸಾಮರ್ಥ್ಯವನ್ನು ಒರೆಗಲ್ಲಿಗೆ ತೀಡುತ್ತಿರಲೇಬೇಕಾದದ್ದು ಅನಿವಾರ್ಯ ಹಾಗೂ ಅತ್ಯಗತ್ಯ. ಅದರೊಂದಿಗೆ ಹೊಸ, ಹೊಸ ಕೌಶಲ್ಯಗಳನ್ನು ರೂಢಿಸಿಕೊಳ್ಳುತ್ತಿದ್ದರೇನೇ ನಮ್ಮ ಸ್ಥಾನವನ್ನು ಸುಸ್ಥಿರವಾಗಿಟ್ಟುಕೊಳ್ಳಲು ಸಾಧ್ಯ.

ಸಮಾಜದ ಧೋರಣೆ ನಾವು ಸೋತರೆ ನಾನು ಮೊದಲೇ ಹೇಳಿದ್ದೆ ಎನ್ನುತ್ತಾರೆ, ನಾವು ಗೆದ್ದರೆ ಅವರಲ್ಲಿ ಪ್ರತಿಭೆ ಇದೆ ಅಂತ ನನಗೆ ಗೊತ್ತಿತ್ತು ಗ್ಯಾರಂಟಿ ಸಕ್ಸಸ್ ಆಗ್ತಾನೆ ಅಂತ ಮೊದಲೇ ಊಹಿಸಿದ್ದೇ ಎನ್ನುತ್ತಾರೆ.

ಜಗತ್ತಿನ ಇತಿಹಾಸದ ಪುಟಗಳನ್ನೊಮ್ಮೆ ತಿರುವಿ ನೋಡಿದಾಗ ಬಡತನದಲ್ಲಿ ಹುಟ್ಟಿ, ಕಷ್ಟದಿಂದ ಬದುಕಿ, ಮಹಾನ್ ಸಾಧಕರೆನಿಸಿಕೊಂಡವರ ಪಟ್ಟಿ ಸಾಕಷ್ಟು ದೊಡ್ಡದು. ಉದಾಹರಣೆಗೆ ಅಲೆಕ್ಸಾಂಡರ್, ನೆಪೋಲಿಯನ್, ಚಾಣಕ್ಯ, ಅಶೋಕ, ಚಾರ್ಲಿ ಚಾಪ್ಲಿನ್, ಥಾಮಸ್ ಅಲ್ವಾ ಎಡಿಸನ್, ಸಾಕ್ರೆಟಿಸ್, ತೇನ್‌ಸಿಂಗ್, ಕಲ್ಪನಾ ಚಾವ್ಲಾ ಹೀಗೆಯೇ ದೊಡ್ಡ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಅಂದ ಹಾಗೇ ಈ ಜಗತ್ತಿನಲ್ಲಿ ಯಶಸ್ಸು ಸಾಧಿಸಿರುವ ಎಲ್ಲರೂ ನಮ್ಮ ನಿಮ್ಮಂತೆ ಸಾಮಾನ್ಯ ಜನರೇ, ಅವರೇನು ವಿಶೇಷವಾಗಿ ರೂಪಗೊಂಡು ಬಂದವರಲ್ಲ. ಒಂದು ವಿಷಯ ನೆನಪಿರಲಿ, ಬದುಕಿನಲ್ಲಿ ಯಾರಿಗೆ ಆಗಲಿ ಸದಾಕಾಲ ಸುಖವೂ ಇರುವುದಿಲ್ಲ, ಕಷ್ಟವೂ ಇರುವುದಿಲ್ಲ, ಒಂದು ಮಾತಿನಲ್ಲಿ ಹೇಳುವುದಾದರೆ ಬದುಕೆನ್ನುವುದು ಸುಖ ದುಃಖಗಳೆರಡು ಬೆರೆತಿರುವಂತದ್ದು, ಉದಾಹರಣೆಗೆ ಆ ಹುಡುಗ ಚಿಕ್ಕವನಿದ್ದಾಗ ಬಡತನದಿಂದಾಗಿ ಹುಣಸೆ ಬೀಜ ಆಯಲು ಹೋಗುತ್ತಿದ್ದ, ಮನೆ ಮನೆಗೆ ದಿನಪತ್ರಿಕೆ ಹಂಚುತ್ತಿದ್ದ, ಮುಂದೆ ಓದಿಕೊಂಡು ವಿಜ್ಞಾನಿಯಾಗಿ ಹೆಸರು ಮಾಡಿದ, ಆಮೇಲೆ ಭಾರತದ ರಾಷ್ಟ್ರಪತಿಯೂ ಆದ ಅವರೇ ಡಾ. ಎಪಿಜೆ ಅಬ್ದುಲ್ ಕಲಾಂ.

**-ಜೆಂಬಿಗಿ ಮೃತ್ಯುಂಜಯ,** ದಾವಣಗೆರೆ.

---

# ಹೀಗೊಂದು ಕೃತಜ್ಞತೆಯ ಭೋಜನ ಸಮರ್ಪಣೆ

## ಪಾಠ ಮಾಡಿದ ಗುರುವೃಂದಕ್ಕೆ ರೊಟ್ಟಿ ಊಟ ಉಣಿಸಿದ ವಿದ್ಯಾರ್ಥಿನಿಯರು

ದಾವಣಗೆರೆ, ಮೇ 29- ಇಂದಿನ ಮಕ್ಕಳಿಗೆ ಅವರ ಶಿಕ್ಷಕರ ಮೇಲೆ ಗೌರವ ಭಾವನೆಯೇ ಇಲ್ಲ. ಇಂದು ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಮಧ್ಯೆ ಆತ್ಮೀಯವಾದ ಸಂಬಂಧವಿಲ್ಲ ಎಂದೆಲ್ಲಾ ಹೇಳುವುದನ್ನು ನಾವು ಕೇಳಿದ್ದೇವೆ. ಆದರೆ ಇಲ್ಲಿ ಒಂದು ಶಾಲೆಯ ಏಳನೇ ತರಗತಿಯ ಪುಟ್ಟ ವಿದ್ಯಾರ್ಥಿನಿಯರು ತಾವು ಶಾಲೆಯಿಂದ ಬೀಳ್ಕೊಡುವ ಸಮಯದಲ್ಲಿ ಏಳು ವರ್ಷಗಳ ಕಾಲ ಅವರಿಗೆ ಪಾಠ ಮಾಡಿದ ಗುರು ವೃಂದದವರಿಗೆ ರುಚಿಯಾದ ರೊಟ್ಟಿ ಊಟ ಬಡಿಸಿ ತಮ್ಮ ಕೃತಜ್ಞತೆ ಸಲ್ಲಿಸಿದ್ದಾರೆ.



ಇಂತಹ ಅಭಿನಂದನಾರ್ಹವಾದ ಕೆಲಸವನ್ನು ಮಾಡಿದವರು, ದಾವಣಗೆರೆಯ ಎಸ್.ಕೆ.ಪಿ ರಸ್ತೆಯಲ್ಲಿರುವ ಚನ್ನಗಿರಿ ವಿರೂಪಾಕ್ಷಪ್ಪ ವನಜಾಕ್ಷಮ್ಮ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಏಳನೇ ತರಗತಿಯ ವಿದ್ಯಾರ್ಥಿನಿಯರು. ಇದು ಒಂದು ಅನುದಾನಿತ ಶಾಲೆ. ಈ ಶಾಲೆಯ 14 ವಿದ್ಯಾರ್ಥಿನಿಯರು ಮಾರ್ಚ್ 6 ರಂದು ತಮ್ಮ ಮನೆಯಲ್ಲಿ ಮಾಡಿದ ರೊಟ್ಟಿ ಊಟವನ್ನು ವ್ಯವಸ್ಥಿತವಾಗಿ ಬಡಿಸಿ, ಉಣಿಸಿ ಆ ಮೂಲಕ ತಮ್ಮ ಕೃತಜ್ಞತೆ ಸಲ್ಲಿಸಿದ್ದಾರೆ.

ರೈಸ್‌ಬಾತ್, ಜಾಮೂನ್, ಬಿಸಿ ರೊಟ್ಟಿ, ಚಪಾತಿ, ಹಪ್ಪಳ, ಹೀರೇಕಾಯಿ ಪಲ್ಯ, ಪಾಯಸ, ಹೆಸರುಕಾಳು ಪಲ್ಯ, ಕಡ್ಲೆಕಾಳು ಉಸುಳಿ, ಕೆಂಪು ಚಟ್ನಿ, ಕೋಸಂಬರಿ, ಚಟ್ನಿಪುಡಿ, ಮೊಸರು, ಟೊಮ್ಯಾಟೋ ಚಟ್ನಿ ಹೀಗೆ ಬಗೆಬಗೆಯ ಪದಾರ್ಥಗಳು ಈ ಕೃತಜ್ಞತೆಯ ಭೋಜನದಲ್ಲಿದ್ದವು. ವಿದ್ಯಾರ್ಥಿನಿಯರಾದ ಮೇಘನಾ ಕೆ., ಸಿಂಧು ಎಸ್, ಸಿಂಚನ ಎಮ್, ಶ್ರವಂತಿ ಎಸ್. ಎಮ್, ಭೂಮಿಕ ಎಂ, ಚಂದನ ಡಿ, ಬಿಂದು ಆರ್, ಅಮೃತಾ ಪಿ, ರೇಣುಕಾ ಎಂ, ನಿಖಿತ ಟಿ.ಎನ್, ತನುಶ್ರೀ ಜಿ.ಎಸ್ ಇವರುಗಳು ತಾವೇ ಒಂದು ಅಥವಾ ಎರಡು ಪದಾರ್ಥಗಳನ್ನು ತಮ್ಮ ಮನೆಯಿಂದ ತಂದು ಪ್ರೀತಿ-ಗೌರವಗಳಿಂದ ಬಡಿಸಿ ಗುರು ವೃಂದದವರಿಗೆ ಸಲ್ಲಿಸಿದರು.

ಈ ಭೋಜನ ಕೃತಜ್ಞತೆಯ ನೇತೃತ್ವ ವಹಿಸಿಕೊಂಡಿದ್ದು ಏಳನೇ ತರಗತಿಯ ವಿದ್ಯಾರ್ಥಿನಿಯಾದ ಮೇಘನಾ ಕೆ. ಇದರ ಬಗ್ಗೆ ಕೇಳಿದಾಗ ಈ ವಿದ್ಯಾರ್ಥಿನಿಯು ನಮ್ಮ ಟೀಚರ್ಸ್‌ಗಳು ನಮಗೆ ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೆ ತುಂಬಾ ಪ್ರೀತಿಯಿಂದ ಪಾಠ ಮಾಡಿದ್ದಾರೆ. ನಮ್ಮನ್ನು ಬೆಳೆಸಿದ್ದಾರೆ. ಅವರಿಗೆ ಏನು ಕೊಟ್ಟರೂ ಕಡಿಮೆಯೇ. ಅಂತಹ ನಮ್ಮ ಗುರುಗಳಿಗೆ ಕೊನೆಯ ಪಕ್ಷ ಒಂದು ಹೊತ್ತಿನ ಊಟವನ್ನಾದರೂ ಕೊಡುವ ಮೂಲಕ ಅವರಿಗೆ ನಮ್ಮ ಕೃತಜ್ಞತೆ ಸಲ್ಲಿಸಬೇಕು ಎಂದು ಈ ರೀತಿ ಮಾಡಿದ್ದೇವೆ. ಊಟ ಹೇಗಿತ್ತೋ, ಆದರೆ ನಮ್ಮ ಎಲ್ಲಾ ಟೀಚರ್ಸ್‌ಗಳು ಅದನ್ನು ತುಂಬಾ ಪ್ರೀತಿಯಿಂದ ಸ್ವೀಕರಿಸಿದ್ದಾರೆ. ಅವರಿಗೆಲ್ಲಾ ತುಂಬಾ ಥ್ಯಾಂಕ್ಸ್ ಎಂದು ಹೇಳಿದಳು.

ಏಳನೇ ತರಗತಿಯ ತರಗತಿ ಶಿಕ್ಷಕಿ ಟಿ.ಕೆ.ನಳಿನ ಮಾತನಾಡಿ, ನಮ್ಮ ಮಕ್ಕಳು ನಮಗೆ ಊಟ ತಂದಾಗ ಯಾವ ಶಿಕ್ಷಕರಿಗೆ ತಾನೇ ಖುಷಿಯಾಗುವುದಿಲ್ಲ. ಮಕ್ಕಳ ಈ ಜವಾಬ್ದಾರಿ ಮತ್ತು ಭಾವನೆಯನ್ನು ನೋಡಿ ಎಲ್ಲಾ ಶಿಕ್ಷಕರಿಗೆ ತುಂಬಾ ಸಂತೋಷವಾಗಿದೆ, ಹೃದಯತುಂಬಿ ಬಂದಿತ್ತು. ದೊಡ್ಡ ದೊಡ್ಡ ಶಾಲೆಗಳಲ್ಲಿ ಕಲಿಯುವ ಶ್ರೀಮಂತರ ಮಕ್ಕಳಿಗೆ ಬರದ ಆಲೋಚನೆ ನಮ್ಮಂತಹ ಒಂದು ಅನುದಾನಿತ ಶಾಲೆಯ ಮಕ್ಕಳಿಗೆ ಬಂದಿರುವುದಕ್ಕೆ ನಮಗೆ ಸಂತೋಷ ಮತ್ತು ಹೆಮ್ಮೆ ಎರಡೂ ಇದೆ.

ಬಡವರ ಮನೆ ಊಟ ಚೆಂದ, ಶ್ರೀಮಂತರ ಮನೆ ಮಾತು ಚೆಂದ ಅನ್ನೋದು ಇವತ್ತು ನಮಗೆಲ್ಲಾ ಚೆನ್ನಾಗಿ ಅರ್ಥವಾಯ್ತು ಎಂದು ಭಾವುಕರಾಗಿಯೇ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಶಾಲೆಯ ಮುಖ್ಯೋಪಾಧ್ಯಾಯ ಹೆಚ್.ಎಲ್. ಶ್ರೀನಿವಾಸ ಶ್ರೇಷ್ಠಿ ಮಾತನಾಡಿ, ಇಂದಿನ ಪರಿಸ್ಥಿತಿಯಲ್ಲಿ ಇಂತಹದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಮ್ಮ ಶಾಲೆಯಲ್ಲಿ ಕೂಲಿಕಾರರ ಮಕ್ಕಳೇ ಜಾಸ್ತಿ. ಅವರ ಮನೆಯಲ್ಲಿಯೇ ಸಾಕಷ್ಟು ಸಮಸ್ಯೆಗಳಿರುತ್ತವೆ. ಹಾಗಿದ್ದರೂ ಇದನ್ನೆಲ್ಲಾ ವ್ಯವಸ್ಥೆ ಮಾಡಿದ ಮಕ್ಕಳು ಮತ್ತು ಅವರ ಪೋಷಕರು ಎಲ್ಲರಿಗೂ ಮಾದರಿ ಎಂದು ಹೇಳಿದರು. ಊಟ ಹೇಗಿತ್ತು ಎಂದು ಕೇಳಿದಾಗ ಮಕ್ಕಳು ಕೊಟ್ಟ ಊಟಕ್ಕೆ ಬೆಲೆ ಕಟ್ಟಲಿಕ್ಕೆ ಆಗುತ್ತಾ? ನಾವು ಪ್ರತಿದಿನ ಊಟ ಮಾಡ್ತೇವೆ, ಆದ್ರೆ ಈ ಊಟದ ಮುಂದೆ ಯಾವುದೂ ಇಲ್ಲ, ಇದು ನಮ್ಮ ಮಕ್ಳು ಕೊಟ್ಟ ಊಟ ಎಂದು ಹೃದಯ ತುಂಬಿ ಹೇಳಿದರು.

---

# ಪ್ರಧಾನಿ ಧ್ಯಾನಕ್ಕೆ ಕಾನೂನಿನಲ್ಲಿ ಅಡ್ಡಿಯಿಲ್ಲ

ನವದೆಹಲಿ, ಮೇ 29 – ಚುನಾವಣಾ ವೇಳೆ ಪ್ರಧಾನ ಮಂತ್ರಿ ಧ್ಯಾನ ಪ್ರವಾಸ ಕೈಗೊಳ್ಳಲು ಕಾನೂನಿನಲ್ಲಿ ಯಾವುದೇ ಅಡ್ಡಿ ಇಲ್ಲ ಎಂದು ಮೂಲಗಳು ತಿಳಿಸಿವೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೇ 30ರಂದು ಕನ್ಯಾಕುಮಾರಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಧ್ಯಾನದ ಬಗ್ಗೆ ಕಾಂಗ್ರೆಸ್ ಪಕ್ಷ ಚುನಾವಣಾ ಆಯೋಗದ ಬಳಿ ದೂರು ದಾಖಲಿಸಿದೆ.

ಬಹಿರಂಗ ಚುನಾವಣಾ ಪ್ರಚಾರಕ್ಕೆ ನಿರ್ಬಂಧ ಇರುವ ವೇಳೆ ಪ್ರಧಾನಿ 48 ಗಂಟೆಗಳ ಧ್ಯಾನ ಪ್ರವಾಸ ಕೈಗೊಳ್ಳುವುದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ. ಧ್ಯಾನ ಪ್ರವಾಸವನ್ನು ಮಾಧ್ಯಮಗಳು ಪ್ರಸಾರ ಮಾಡದಂತೆ ನಿರ್ಬಂಧಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು ಸಲ್ಲಿಸಿದೆ.

ಜನಪ್ರತಿನಿಧಿ ಕಾಯ್ದೆಯ 126ನೇ ಸೆಕ್ಷನ್ ಅನ್ವಯ ಬಹಿರಂಗ ಪ್ರಚಾರದ ಅವಧಿ ಅಂತ್ಯವಾದ ನಂತರ ಸಾರ್ವಜನಿಕ ಸಭೆ ನಡೆಸುವುದು ನಿಷೇಧಿಸಲಾಗಿದೆ. ಚುನಾವಣಾ ಚಿಹ್ನೆಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುವಂತಿಲ್ಲ.

ಆದರೆ, ಬಹು ಹಂತದ ಚುನಾವಣೆಗಳಿಗೆ ಈ ನಿಯಮ ಅನ್ವಯವಾಗುವುದಿಲ್ಲ. ಚುನಾವಣೆಗಳು ಬೇರೆ ಬೇರೆ ದಿನಾಂಕಗಳಂದು ನಡೆಯುತ್ತವೆ. ಯಾವ ಕ್ಷೇತ್ರಗಳಲ್ಲಿ ಚುನಾವಣೆ ನಡೆಯುತ್ತದೆಯೋ ಅಲ್ಲಿಗೆ ಮಾತ್ರ ನಿಯಮ ಅನ್ವಯವಾಗುತ್ತದೆ.

ಚುನಾವಣೆ ನಡೆಯುವ ಕ್ಷೇತ್ರಗಳ ಬಗ್ಗೆ ಮಾತನಾಡದಿದ್ದರೆ ಯಾವುದೇ ನಿರ್ಬಂಧವಿಲ್ಲ. ಮಾತುಗಳನ್ನೇ ಆಡದಿದ್ದರೆ ನಿಯಮದ ಉಲ್ಲಂಘನೆಯೇ ಆಗುವುದಿಲ್ಲ ಎಂದು ಮೂಲಗಳು ತಿಳಿಸಿವೆ.

---

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಸಿಟಿ ಮಧ್ಯ ಇರುವ ಔಷಧ ಅಂಗಡಿಯಲ್ಲಿ ಎಸ್ಸೆಸ್ಸೆಲ್ಸಿ ಪಾಸಾದ ಅಥವಾ ಫೇಲಾದ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
94481 14071
99020 69453

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿಯಲ್ಲಿ ಮಯೂರ ಗ್ಲೋಬಲ್ ಸ್ಕೂಲ್ ಹಿಂಭಾಗದಲ್ಲಿ 90x83 East-South Corner, 30x60 West, 60x55 East, 30x55 East, 30x55 East ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರದಲ್ಲಿ LIC ಕಾಲೋನಿಯಲ್ಲಿ ವಿವೇಕಾನಂದ ಬಡಾವಣೆಯಲ್ಲಿ 30x60 North, 40x50 South, 25x40 West, 30x45 North, 30x50 Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನದ ಹಿಂಭಾಗದಲ್ಲಿ 30x60, 30x60 North ಅಕ್ಕ-ಪಕ್ಕ, 30x40, 30x40 East ಅಕ್ಕ-ಪಕ್ಕ. Rate - 2600/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ACE TRACTOR SHOWROOM ನಲ್ಲಿ ಕೆಲಸ ಮಾಡಲು ಅಕೌಂಟೆಂಟ್ (ಮಹಿಳೆಯರು) ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ನೀಡಲಾಗುವುದು. ಟ್ಯಾಲಿ ಆಗಿರುವ ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
9916955111, 9448202030

**ಜಮೀನು ಮಾರಾಟಕ್ಕೆ ಬೇಕಾಗಿದೆ**
ದಾವಣಗೆರೆ ಸಿಟಿಯಿಂದ 10ಕೀ.ಮೀ ಒಳಗಡೆಯಲ್ಲಿ ಇರಬೇಕು. ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ.
ಮೊಬೈಲ್ : 99005 21848

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಮನೆಗಳು ಬಾಡಿಗೆಗೆ ಇವೆ**
ದಾವಣಗೆರೆ ಆಂಜನೇಯ ಬಡಾವಣೆ, ಹೇಮಾವತಿ ಹಾಸ್ಟೆಲ್ ಹಿಂಭಾಗದ ಕಾರ್ನರ್ ಬಿಲ್ಡಿಂಗ್‌ನಲ್ಲಿ 2 BHK ಮನೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
94483 92975
99866 18266

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಕೆಲಸಕ್ಕೆ ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳವರು (Day&Night) ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
94807 77338, 94821 09492

**ಮನೆ ಬಾಡಿಗೆಗೆ ಇದೆ**
ಬಾಲಕರ ವೈದ್ಯಕೀಯ ಹಾಸ್ಟೆಲ್ ರಸ್ತೆ,10ನೇ ಮೇನ್ ನಲ್ಲಿ ಸಂಪೂರ್ಣ ಸುಸಜ್ಜಿತ (fully furnished) ಮೂರು ಬೆಡ್ ರೂಮ್ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
ಮೊ : 99861 21251

**ಕರ್ನಾಟಕ ಗೃಹಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, 50x80 North, 40x60 East, 40x60 West, 40x60 North, 40x60 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ ಇದೆ**
ನಂ. 4275/366, 4ನೇ ಮುಖ್ಯರಸ್ತೆ, 10A ಅಡ್ಡ ರಸ್ತೆ, ಎಸ್.ಎಸ್. ಬಡಾವಣೆ, 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ಬೋರ್ ಹಾಗೂ ಕಾರ್ಪೊರೇಷನ್ ನೀರಿನ ವ್ಯವಸ್ಥೆ ಇರುವ ಮೊದಲನೇ ಮಹಡಿಯ ಒಂದು ಬೆಡ್ ರೂಮ್‌ನ ಮನೆ ಬಾಡಿಗೆಗೆ ಇದೆ.
98442 01186, 98804 93817

**ಸುವರ್ಣ ಅವಕಾಶ**
ತಿಂಗಳ ಆದಾಯವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ದೇಶ ಹೊರ ದೇಶಗಳ ಪ್ರವಾಸ ಎಂಜಾಯ್ ಮಾಡುವ ಕೆಲಸವನ್ನು ನಿಮ್ಮ ಸಮಯದಲ್ಲಿ ಕಾರ್ಯ ನಿರ್ವಹಿಸಲು ಉತ್ಸುಕರಾಗಿರುವ ಯುವಕರು , ಗೃಹಿಣಿಯರು, ಮಾಜಿ ಯೋಧರು, ಉತ್ತಮ ಸಂವಹನ ಹೊಂದಿರುವ ರಾಜಕಾರಣಿಗಳು ಕರೆ ಮಾಡಿ : 86602 35013

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಚ್ ಗೇಟ್ ಹತ್ತಿರ, 4ನೇ ಕ್ರಾಸ್, ಅಮರಾವತಿ ರಸ್ತೆ, 4ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ (1850/- ರೂ. ಚದುರಡಿ) ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ :
98452 36274

**ಶಿಕ್ಷಕ / ಕಿಯರು ಬೇಕಾಗಿದ್ದಾರೆ**
1) B.Sc, B.Ed - 01 ಪ್ರಾಥಮಿಕ ಶಾಲಾ ವಿಭಾಗಕ್ಕೆ.
2) BA-B.Ed - 01 ಪ್ರೌಢಶಾಲಾ ವಿಭಾಗಕ್ಕೆ (ಇಂಗ್ಲಿಷ್)
ಡ್ರೈವರ್ ಬೇಕಾಗಿದ್ದಾರೆ
ಶಾಲಾ ಬಸ್ ಓಡಿಸಲು ಡ್ರೈವರ್ ಬೇಕಾಗಿದ್ದಾರೆ.
82771 70966, 91648 67594

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟ್ ಮಾರಾಟಕ್ಕಿದೆ**
ಕೊಂಡಜ್ಜಿ ರೋಡ್‌ನಲ್ಲಿ ಶಿಬಾರದಬಳಿ 40x60 ಅಳತೆಯ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸ ಬೇಕಾದ ಮೊಬೈಲ್ ಸಂಖ್ಯೆ :
99806 66220

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ, ಸಂಪರ್ಕಿಸಬೇಕಾದ ವಿಳಾಸ : ಕಿರಣ್ ಎಂಟರ್ ಪ್ರೈಸಸ್, 4ನೇ ಮೇನ್, 1ನೇ ಕ್ರಾಸ್, ವಿನೋಬ ನಗರ, ದಾವಣಗೆರೆ-577006. ಸಂಪರ್ಕಿಸಿ :
96860 88511

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ, ಎಸ್.ಎಸ್. ಲೇಔಟ್‌ನ, 6ನೇ ಮುಖ್ಯರಸ್ತೆ, ಬಿ ಬ್ಲಾಕ್‌ನಲ್ಲಿ 35x72ವುಳ್ಳ, ಪೂರ್ವ ಮುಖದ ರೆಡ್ Gravel ಇರುವ ನಿವೇಶನ ಮಾರಾಟಕ್ಕಿದೆ.
94483 39406

**ಡ್ರೈವರ್ ಬೇಕಾಗಿದ್ದಾರೆ**
ಡ್ರೈವಿಂಗ್ ಲೈಸೆನ್ಸ್ ಹಾಗೂ ದ್ವಿಚಕ್ರವಾಹನ ಹೊಂದಿರುವ ಕಾರ್ ಡ್ರೈವರ್ ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ :
74486 56091
(ಈ ಹಿಂದೆ ಈ ಮೇಲೆ ಕಾಣಿಸಿದ ನಂಬರ್‌ಗೆ ಕರೆ ಮಾಡಿದವರು ಪುನಃ ಕರೆ ಮಾಡಬೇಡಿರಿ)

**JOB VACANCY**
EV Showroom Telecalling & Computer Work :
Min. 2 yrs Experience
Agadi Motors Private Limited
WhatsApp your resume to
86183 24082

**ಕೆಲಸಗಾರರು ಬೇಕಾಗಿದ್ದಾರೆ**
ಸುಪ್ರೀತ್ ಮೋಟಾರ್ಸ್, ಭಾಷ್ ಕಾರ್ ಸರ್ವೀಸ್ ಶಿರಮಗೊಂಡನಹಳ್ಳಿ ಹತ್ತಿರ, ಚನ್ನಗಿರಿ ರಸ್ತೆ, ದಾವಣಗೆರೆ. 3 ರಿಂದ 5 ವರ್ಷ ಅನುಭವವಿರುವ ಚೀಫ್ ಮೆಕ್ಯಾನಿಕ್, ಕಾರ್ ಟಿಂಕರಿಂಗ್ & ಪೇಂಟಿಂಗ್ ಕೆಲಸಕ್ಕೆ ಕೆಲಸಗಾರರು ಬೇಕಾಗಿದ್ದಾರೆ.
80738 47422, 93800 15165

**ಬೇಕಾಗಿದ್ದಾರೆ**
ಪ್ರತಿಷ್ಠಿತ ಶಾಲಾ ಕಾಲೇಜ್‌ಗಳಿಗೆ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ : ಶಿವ ಸೆಕ್ಯೂರಿಟಿ ಸರ್ವೀಸ್. ಬಸವರಾಜ್
99022 17511

**TUITION FOR**
ICSE - CBSE - STATE
1st to 10th Std. ಟ್ಯೂಷನ್ ಮಾಡಲಾಗುವುದು. Contact :
Vidya Vikas Tuition Cente, Behind Aaraike Hospital, Dvg. Mob:
83109 32579

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು, ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**WANTED**
FEMALE ACCOUNTANT
Tally Knowledge
5 Yrs. Experience
B.M. BONDADE AND ASSOCIATES
Vinoba Nagar, P.B. Road, Davanagere - 06.
98865 08965
98869 77879

**ನಮ್ಮಲ್ಲಿ ಉತ್ತಮ ಅಡಿಕೆ ಸಸಿಗಳು ಸಿಗುತ್ತವೆ**
ಸಂಪರ್ಕಿಸಿ :
77952 48272
97318 46014

**LADY TEACHERS WANTED**
Maths - 2 Posts
Science - 2 Posts
English - 2 Posts
Contact : SRIS, Gutturu Harihara. Mob:
98444 99944

**ಬೇಕಾಗಿದ್ದಾರೆ**
ಹೋಟೆಲ್ ಅಥವಾ ಕೆಫೆಯಲ್ಲಿ ಕೆಲಸ ಮಾಡಿದ ಅನುಭವವಿರುವ ಯುವಕರು ಬೇಕಾಗಿದ್ದಾರೆ. ಸಂಬಳ ಹಾಗೂ ಪ್ರೋತ್ಸಾಹ ಧನ ಹಾಗೂ ವಸತಿ ಇರುತ್ತದೆ.
98445 67456

**LADY TEACHERS WANTED**
Maths - 2 Posts
Science - 2 Posts
English - 2 Posts
Contact : SRIS, DCM Town ship, Dvg.
80950 08434

**ಮೆಡಿಕಲ್ ಸ್ಟೋರ್ಸ್ ಮಾರಾಟಕ್ಕಿದೆ**
ದಾವಣಗೆರೆ ನಗರದ ನಿಟ್ಟುವಳ್ಳಿಯ ಡಿಸಿಎಂ ಲೈನ್‌ನಲ್ಲಿ, ಆರ್.ವಿ.ಕೆ ಶಾಲೆಯ ಎದುರುಗಡೆ ಇರುವ ಶ್ರೀ ಲಕ್ಷ್ಮೀ ವೆಂಕಟೇಶ್ವರ ಮೆಡಿಕಲ್ ಮತ್ತು ಜನರಲ್ ಸ್ಟೋರ್ಸ್ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
8296172257, 8671814992

**ಸೌಹಾರ್ದ ಸಂಸ್ಥೆಗೆ ಕೆಲಸಕ್ಕೆ ಬೇಕಾಗಿದ್ದಾರೆ**
* ಕಲೆಕ್ಷನ್ ಬಾಯ್ (any degree)
* ಅಕೌಂಟೆಂಟ್ (B.Com Tally Computer)
* ಆಫೀಸ್ ಬಾಯ್
ESI, PF ಸೌಲಭ್ಯ, ವಯೋಮಿತಿ 25 ರಿಂದ 40
ದಾವಣಗೆರೆ. 8050322279

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ Above 40 years ಅನುಭವವುಳ್ಳವರು ಡ್ರೈವರ್, ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
63620 23451
97434 37003

**ಮಳಿಗೆ ಬಾಡಿಗೆಗೆ ಇದೆ**
ಈ ಕೆಳಕಂಡ ವಿಳಾಸದಲ್ಲಿ 30x40 ಅಡಿ ಅಳತೆಯ ಮಳಿಗೆ ಬಾಡಿಗೆಗೆ ಲಭ್ಯವಿದೆ. ಆಫೀಸ್ ರೂಂ, ಶೌಚಾಲಯ, ವಿದ್ಯುತ್ ಮತ್ತು ನೀರಿನ ಸೌಲಭ್ಯ, ಉತ್ತರ ದಿಕ್ಕು, ಬ್ಯಾಂಕ್, ಮಾಲ್, ಏಜೆನ್ಸಿ, ಜೀವವಿಮೆ ನಂತಹ ಕಛೇರಿಗಳಿಗೆ ಸೂಕ್ತವಾಗಿದೆ. #1652, 60 ಅಡಿ ಜೋಡು ರಸ್ತೆ (ಡಬ್ಬಲ್ ರೋಡ್) ಮಹಿಳಾ ಹಾಸ್ಟೆಲ್ ಹತ್ತಿರ, ಶಾಮನೂರು, ದಾವಣಗೆರೆ.
94489 63300, 88920 88250

**WANTED LADY TEACHERS**
B.Sc.BEd :04. BA.BEd; 04.
Fluency English is must.
Contact: VINAYAKA CONVENT. Ganeshpet. Behind kalikadevi temple dvg.
95356 10817

**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
No. 1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಮದುವೆ ವಿಳಂಬ, ದಾಂಪತ್ಯ ಸ್ತ್ರೀ-ಪುರುಷ ವಶೀಕರಣ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಶತಃ ಸಿದ್ಧ.
(ಮನೆ) ಜಿ. ವಿ. ಭಟ್ಟರ್
2ನೇ ಹಂತ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ
89716 99826

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮತ್ತು ಡಿಗ್ರಿ ಆದ ಹುಡುಗರು ಬೇಕಾಗಿದ್ದಾರೆ. M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್, ನಂ. 43 ಹೆಚ್, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಶಾಲಾ ವಾಹನ ಚಾಲಕರು ಬೇಕಾಗಿದ್ದಾರೆ**
Heavy Badge Liecence ಹೊಂದಿರುವ ಅನುಭವಿ ಚಾಲಕರು ಬೇಕಾಗಿದ್ದಾರೆ.
95356 10817

**ಹೋಟೆಲ್ ಬಾಡಿಗೆಗಿದೆ**
15x90ಅಳತೆಯ ಎಲ್ಲಾ ಸೌಕರ್ಯವುಳ್ಳ, ಬೋರ್‌ವೆಲ್, ಮುನ್ಸಿಪಲ್ ನೀರಿನ ಸೌಲಭ್ಯ ಹಾಗೂ ಸಾಮಾನುಗಳ ಸಮೇತ ಬಾಡಿಗೆಗೆ ಇದೆ. (ಸಸ್ಯಹಾರಿ ಹಾಗೂ ಮಾಂಸಹಾರಿಗೆ ಅನುಕೂಲವಿದೆ)
93417 10083

## ಮದುವೆಗೆ ಬಂದವರ ಆಭರಣ ದೋಚಿದ ಆರೋಪಿಯ ಬಂಧನ

ದಾವಣಗೆರೆ, ಮೇ 30- ಕಲ್ಯಾಣ ಮಂಟಪದ ಕೊಠಡಿ ಬೀಗ ಮುರಿದು ಕಳ್ಳತನ ಮಾಡಿದ್ದ ಆರೋಪಿಯನ್ನು ಇಲ್ಲಿನ ಕೆಟಿಜೆ ನಗರ ಪೊಲೀಸರು ಬಂದಿಸಿದ್ದಾರೆ.

ಶಾಂತಿ ನಗರದ ಕಿರಣ ನಾಯ್ಕ ಬಂಧಿತ. ಈತನಿಂದ 67 ಸಾವಿರ ರೂ. ಮೌಲ್ಯದ 10.5 ಗ್ರಾಂ ಬಂಗಾರದ ಆಭರಣ ವಶಪಡಿಸಿಕೊಳ್ಳಲಾಗಿದೆ.

ಈತನ ವಿರುದ್ಧ ಈಗಾಗಲೇ ವಿದ್ಯಾನಗರ, ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದು, ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿವೆ ಎಂದು ಪೊಲೀಸರು ಹೇಳಿದ್ದಾರೆ.

ಬೆಂಗಳೂರಿನ ಎ.ಸೌಮ್ಯ ಸಂಬಂಧಿಕರ ಮದುವೆಗೆ ನಗರದ ಕೆಇಬಿ ಸಮುದಾಯ ಭವನಕ್ಕೆ ಬಂದು ಕೊಠಡಿಯಲ್ಲಿ ಬ್ಯಾಗ್ ಇಟ್ಟು ಬೀಗ ಹಾಕಿ ಮದುವೆ ಕಾರ್ಯದಲ್ಲಿದ್ದರು. ಮಧ್ಯಾಹ್ನ ಬೀಗ ಮುರಿದು ಬ್ಯಾಗಿನಲ್ಲಿದ್ದ ಆಭರಣ ಹಾಗೂ ನಗದು ಕಳ್ಳತನವಾಗಿತ್ತು. ಈ ಕುರಿತು ಕೆಟಿಜೆ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಕೆಟಿಜೆ ನಗರ ಠಾಣೆಯ ನಿರೀಕ್ಷಕ ಸುನಿಲ್ ಕುಮಾರ್ ಹೆಚ್.ಎಸ್., ಪಿಎಸ್ಐ ಸಾಗರ ಅತ್ತರವಾಲಾ, ಎನ್.ಆರ್ ಕಾಟೆ ಹಾಗು ಸಿಬ್ಬಂದಿಗಳಾದ ಶಂಕರ್ ಜಾದವ್, ಪ್ರಕಾಶ ಟಿ, ಎಮ್ ಮಂಜಪ್ಪ, ಶಿವರಾಜ್ ಎಮ್.ಎಸ್, ವೀರೇಶ ಕುಮಾರ್ ಹಾಗೂ ಗೀತಾ ಸಿ ಕೆ ತಂಡ ಆರೋಪಿ ಪತ್ತೆಯಲ್ಲಿ ಯಶಸ್ವಿಯಾಗಿದೆ.

# ಹಿಂದೂ ಮಹಿಳೆಯರ ರಕ್ಷಣೆಗೆ ಶ್ರೀರಾಮ ಸೇನೆಯಿಂದ ಸಹಾಯವಾಣಿ

ದಾವಣಗೆರೆ, ಮೇ 29- ಲವ್ ಜಿಹಾದ್ ಹೆಸರಿನಲ್ಲಿ ಹಿಂದೂ ಯುವತಿಯರನ್ನು ಹಿಂಸಿಸುವ ಕೃತ್ಯವನ್ನು ಕೊನೆಗಾಣಿಸಲು ಹಾಗೂ ಆಪತ್ತಿನಲ್ಲಿ ಸಿಲುಕಿದ ಹಿಂದೂ ಸಹೋದರಿಯರ ರಕ್ಷಣೆಗೆ ಶ್ರೀರಾಮ ಸೇನೆಯಿಂದ ಸಹಾಯವಾಣಿ (9090443444) ಬಿಡುಗಡೆ ಮಾಡಲಾಯಿತು.

ಸುದ್ದಿಗೋಷ್ಠಿಯಲ್ಲಿ ಸಹಾಯವಾಣಿ ಬಿಡುಗಡೆ ಮಾಡಿ ಮಾತನಾಡಿದ ಶ್ರೀರಾಮ ಸೇನೆಯ ರಾಜ್ಯಾಧ್ಯಕ್ಷ ಗಂಗಾಧರ ಜಿ. ಕುಲಕರ್ಣಿ ಅವರು, ಕಳೆದ ಇಪ್ಪತ್ತು ವರ್ಷಗಳಿಂದ ಶ್ರೀರಾಮ ಸೇನೆ ಲವ್ ಜಿಹಾದ್ ಬಗ್ಗೆ ಹೋರಾಟ ಮಾಡುತ್ತಾ ಬಂದಿದೆ. 2008 ರಲ್ಲಿ ಲವ್ ಜಿಹಾದ್‌ಗೆ ಸಂಬಂಧಪಟ್ಟ ಪುಸ್ತಕವನ್ನು ಬಿಡುಗಡೆ ಮಾಡಲಾಗಿತ್ತು. ಆ ವೇಳೆ ಕೆಲವರು ಲವ್ ಜಿಹಾದ್ ಸುಳ್ಳು. ಇದನ್ನು ಹಿಂದೂ ಸಂಘಟನೆಗಳು ಸೃಷ್ಟಿಸಿವೆ ಎಂದಿದ್ದರು. ಲವ್ ಜಿಹಾದ್ ಬಗ್ಗೆ ಜಾಗೃತಿ ಮೂಡಿಸುತ್ತಾ ಬಂದಿದ್ದೇವೆ ಎಂದು ಹೇಳಿದರು.

ಲವ್ ಜಿಹಾದ್‌ನಿಂದ ಹೊರಬರಲು ಶ್ರೀರಾಮ ಸೇನೆಯಿಂದ ಸಹಾಯ ನೀಡುವ ಉದ್ದೇಶ ಇದಾಗಿದ್ದು, ಈ ಸಹಾಯವಾಣಿ 24*7 ಕಾರ್ಯನಿರ್ವಹಣೆ ಮಾಡಲಿದೆ. ರಾಜ್ಯದ ಯಾವುದೇ ಮೂಲೆಯಿಂದಲೂ ಕರೆ ಬಂದರೆ ಸ್ವೀಕರಿಸಲಾಗುವುದು. ಕೂಡಲೇ ಆಯಾ ಜಿಲ್ಲಾ ತಂಡ ಕಾರ್ಯ ಪ್ರವೃತ್ತವಾಗಲಿದೆ. ಈ ಮೂಲಕ ನೆರವು ನೀಡಲಾಗುವುದು ಎಂದು ಹೇಳಿದರು.

ಇದರೊಂದಿಗೆ ಕಾನೂನು ಸಲಹೆ, ಲವ್ ಜಿಹಾದ್‌ನಿಂದ ಹೊರ ಬಂದು ವಿದ್ಯಾಭ್ಯಾಸ ಮಾಡಲು ಇಚ್ಛಿಸಿದವರಿಗೆ ನೆರವು, ಸ್ವಯಂ ಉದ್ಯೋಗ ಕೈಗೊಳ್ಳಲು ಸಹಾಯ, ಮಕ್ಕಳ ವಿದ್ಯಾಭ್ಯಾಸ ನೀಡುವುದು ಹಾಗೂ ಕೋರ್ಟ್, ಕಚೇರಿ ನೆರವು ನೀಡಲಾಗುವುದು ಎಂದರು.

ರಾಜ್ಯದ ಆರು ಕೇಂದ್ರಗಳಲ್ಲಿ ಸಹಾಯವಾಣಿ ಉದ್ಘಾಟನೆ ಮಾಡಲಾಗಿದೆ. ಕಲ್ಬುರ್ಗಿಯಲ್ಲಿ ಸಿದ್ಧಲಿಂಗ ಶ್ರೀ, ಪ್ರಮೋದ್ ಮುತಾಲಿಕ್ ಹುಬ್ಬಳ್ಳಿಯಲ್ಲಿ ಹಾಗೂ ಬೆಂಗಳೂರು, ಮಂಗಳೂರು, ಬಾಗಲಕೋಟೆಯಲ್ಲೂ ಸಹಾಯವಾಣಿ ಕೇಂದ್ರ, ಉದ್ಘಾಟನೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ವರದಿಗಳ ಪ್ರಕಾರ ಓ ಇಂಡಿಯಾ ಮಾಧ್ಯಮ 2023 ರಲ್ಲಿ ಒಂದು ಸರ್ವೆ ಮಾಡಿದ್ದಾರೆ. ಅದರ ಮಾಹಿತಿಯಂತೆ ಲವ್ ಜಿಹಾದ್ ಕೇಸ್‌ನಲ್ಲಿ 153 ಯುವತಿಯರ ಭಯಾನಕ ಕೊಲೆಗಳಾಗಿವೆ. ಈ ಬಗ್ಗೆ ದಾಖಲೆ ಸಮೇತ ವರದಿ ಬಿಡುಗಡೆ ಮಾಡಿದ್ದಾರೆ. ಶೇ. 27.5 ರಷ್ಟು ಮೈನರ್ ಯುವತಿಯರ ಹತ್ಯೆ ಮಾಡಲಾಗಿದೆ.ಶೇ. 62.3 ರಷ್ಟು ಮುಸ್ಲಿ ಯುವಕರು ತಮ್ಮ ಗುರುತು ಮುಚ್ಚಿಟ್ಟು ಬೇರೆ ಬೇರೆ ಧರ್ಮದ ಹೆಸರಿನಲ್ಲಿ ಪರಿಚಯ ಮಾಡಿಕೊಂಡು ಹಿಂದೂ ಯುವತಿಯರನ್ನು ಮದುವೆಯಾಗಿದ್ದಾರೆ.

ಅಶ್ಲೀಲ ವಿಡಿಯೋ, ಫೋಟೋ, ಡ್ರಗ್ಸ್ ಜಾಲ, ಭಯೋತ್ಪಾದನೆ ಜಾಲದಲ್ಲಿ ಹಿಂದೂ ಯುವತಿಯರನ್ನು ಸಿಲುಕಿಸಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

2014-19 ರವರೆಗೆ ಸುಮಾರು 21,684 ಹಿಂದೂ ಯುವತಿಯರು ಕಾಣೆಯಾಗಿದ್ದಾರೆ. 2019-21 ರ ಅವಧಿಯಲ್ಲಿ ಒಟ್ಟು 13 ಲಕ್ಷ 13 ಸಾವಿರ ಯುವತಿಯರ ಅಪಹರಣ, ಅತ್ಯಾಚಾರ, ಮತಾಂತರದ ಪ್ರಕರಣಗಳು ನಡೆದಿವೆ ಎಂದು ಲೋಕಸಭೆಯಲ್ಲಿ ಗೃಹ ಇಲಾಖೆ ದಾಖಲೆ ನೀಡಿದೆ ಎಂದು ಮಾಹಿತಿ ನೀಡಿದರು.

ದೇಶ ಹಾಗೂ ರಾಜ್ಯದಲ್ಲಿ ವ್ಯವಸ್ಥಿತ ಜಾಲ ಕೆಲಸ ಮಾಡುತ್ತಿದೆ. ಅದಕ್ಕೆ ತರಬೇತಿ ನೀಡಲಾಗುತ್ತಿದೆ. ರಾಕ್ಷಸಿ ಕೃತ್ಯದ ಮೂಲಕ ಹತ್ಯೆ ಘಟನೆ ನಡೆಯುತ್ತಿದೆ. ಇದೆಲ್ಲವೂ ನಿರ್ಮೂಲನೆಯಾಗಬೇಕು ಎಂದು ಹೇಳಿದರು.

ಶ್ರೀರಾಮ ಸೇನೆಯ ಜಿಲ್ಲಾಧ್ಯಕ್ಷ ಮಣಿ ಸರ್ಕಾರ್ ಮಾತನಾಡಿ, ಜೂನ್ 4 ರಂದು ದಾವಣಗೆರೆಯ ಹೋಟೆಲ್‌ಗಳು, ಶಾಲಾ-ಕಾಲೇಜುಗಳು, ಜ್ಯೂಸ್ ಸ್ಟಾಲ್‌ಗಳಲ್ಲಿ ಪ್ರತಿ ವಾರ್ಡ್, ರಸ್ತೆಗಳಲ್ಲಿ ಸಹಾಯವಾಣಿ ಪೋಸ್ಟರ್ ಅಳವಡಿಸಲಾಗುವುದು.

> ಲವ್ ಜಿಹಾದ್ ಹಿಂದೂ ಸಮಾಜಕ್ಕೆ ಕ್ಯಾನ್ಸರ್ ಇದ್ದಂತೆ. ಹಿಂದೂ ಸಮಾಜದ ಮೇಲೆ ಕೆಟ್ಟ ಪ್ರಭಾವ ಬೀರುತ್ತಿದೆ. ಇದನ್ನು ತಡೆಯುವ ಉದ್ದೇಶದಿಂದ ಜಾಗೃತಿ ಮೂಡಿಸಲಾಗುವುದು.
>
> **- ಗಂಗಾಧರ ಜಿ. ಕುಲಕರ್ಣಿ,** ರಾಜ್ಯಾಧ್ಯಕ್ಷರು, ಶ್ರೀರಾಮ ಸೇನೆ

ಕಳೆದೆರಡು ತಿಂಗಳಲ್ಲಿ 2000 ಕಾರ್ಯಕರ್ತರು ಶ್ರೀರಾಮಸೇನೆಗೆ ಸೇರ್ಪಡೆಯಾಗಿದ್ದಾರೆ. ಹಿಂದೂಗಳು ಎಚ್ಚೆತ್ತುಕೊಳ್ಳದಿದ್ದಲ್ಲಿ ಜೀವನ ನಡೆಸುವುದೇ ದುಸ್ತರವಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪರಶುರಾಮ ನಡುಮನಿ, ಸಾಗರ್, ರಾಹುಲ್, ಬಿ.ಜಿ. ಶ್ರೀಧರ್, ಶಿವರಾಜ್, ರಾಜು, ಸಿದ್ಧಾರ್ಥ, ಸುನೀಲ್ ವಾಲಿ, ವಿನಯ್, ಮಂಜು, ಶಶಿಕುಮಾರ್ ಉಪಸ್ಥಿತರಿದ್ದರು.





## ಮಹಿಳೆಯರ ಸುರಕ್ಷತೆ : ದವನ್ ಕಾಲೇಜಿನ ವಿದ್ಯಾರ್ಥಿಗಳಿಂದ ಜಾಗೃತಿ ನಾಟಕ

ದಾವಣಗೆರೆ, ಮೇ 29 - ನಗರದ ಚಾಮರಾಜಪೇಟೆಯ ಶಾಂತಲಾ ವೃತ್ತದಲ್ಲಿ ದವನ್ ಕಾಲೇಜಿನ ಪ್ರಥಮ ವರ್ಷದ ಬಿಸಿಎ ವಿದ್ಯಾರ್ಥಿಗಳು ಕಟುವಾದ ನಾಟಕವನ್ನು ಇಂದು ಪ್ರದರ್ಶಿಸಿದರು. ಪ್ರದರ್ಶನವು ಮಹಿಳಾ ಕಿರುಕುಳದ ವಿಷಯದ ಸುತ್ತ ಕೇಂದ್ರೀಕೃತವಾಗಿತ್ತು. ಪ್ರಚಲಿತ ಸಮಸ್ಯೆಯ ಮೇಲೆ ಬೆಳಕು ಚೆಲ್ಲುವ ಗುರಿಯನ್ನು ಹೊಂದಿದೆ.

ನಿರೂಪಣೆಯು ಒಂದು ಕಥೆಯನ್ನು ಚಿತ್ರಿಸುತ್ತದೆ, ಇದರಲ್ಲಿ ರಸ್ತೆ ಬದಿಯ ಹುಡುಗನು ಕಾಲೇಜು ಹುಡುಗಿಗೆ ತನ್ನ ಪ್ರೀತಿಯನ್ನು ಹೇಳುತ್ತಾನೆ. ಕೇವಲ ನಿರಾಕರಣೆಯನ್ನು ಎದುರಿಸುತ್ತಾನೆ. ನಿರಾಕರಣೆಯಿಂದ ಕುಪಿತಗೊಂಡ ಹುಡುಗರ ಗುಂಪು ಒಬ್ಬ ಹುಡುಗಿಯ ಮುಖದ ಮೇಲೆ ಆಸಿಡ್ ದಾಳಿ ಮಾಡಿತು ಮತ್ತು ಕಾಲೇಜಿಗೆ ಹಿಂದಿರುಗುತ್ತಿದ್ದಾಗ ಮತ್ತೊಬ್ಬ ಹುಡುಗಿ ಅತ್ಯಾಚಾರದ ಭೀಕರ ಘಟನೆಗೆ ಒಳಗಾಗುತ್ತಾಳೆ.

ಇಂತಹ ಹೇಯ ಕೃತ್ಯಗಳ ಚಿತ್ರಣವು ಮಹಿಳಾ ಸುರಕ್ಷತೆಯ ಕಠೋರ ವಾಸ್ತವವನ್ನು ಮುಂಚೂಣಿಗೆ ತಂದಿತು. ಇಂತಹ ದೌರ್ಜನ್ಯಗಳನ್ನು ಎದುರಿಸಲು ಸಾಮಾಜಿಕ ಜಾಗೃತಿ ಮತ್ತು ಸಾಮೂಹಿಕ ಕ್ರಮದ ಅಗತ್ಯವನ್ನು ದವನ ಕಾಲೇಜಿನ ವಿದ್ಯಾರ್ಥಿಗಳು ನಾಟಕದ ಮೂಲಕ ಪ್ರದರ್ಶಿಸಿದರು.

## ಮಹಾಲಕ್ಷ್ಮಿ ಯೋಜನೆ : ಖಾತೆ ತೆರೆಯಲು ಧಾವಿಸಿದ ಮಹಿಳೆಯರು

ಬೆಂಗಳೂರು, ಮೇ 29 – ಐ.ಎನ್.ಡಿ.ಐ.ಎ. ಮೈತ್ರಿಕೂಟ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ನೀಡಲಿರುವ ಮಾಸಿಕ 8,500 ರೂ. ಹಣ ಪಡೆಯುವ ಸಲುವಾಗಿ ಬೆಂಗಳೂರಿನಲ್ಲಿ ಮಹಿಳೆಯರು ಅಂಚೆ ಕಚೇರಿಯಲ್ಲಿ ಉಳಿತಾಯ ಖಾತೆ ತೆರೆಯಲು ಸಾಲುಗಟ್ಟಿ ನಿಂತಿದ್ದಾರೆ.

ಚುನಾವಣಾ ಪ್ರಕ್ರಿಯೆ ಇನ್ನೂ ನಡೆಯುತ್ತಿದೆ. ಆದರೆ, ಕಾಂಗ್ರೆಸ್ ನೇತೃತ್ವದ ಐ.ಎನ್.ಡಿ.ಐ.ಎ. ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂಬ ಭರವಸೆಯೊಂದಿಗೆ ಮಹಿಳೆಯರು ಉಳಿತಾಯ ಖಾತೆ ತೆರೆಯಲು ಮುಂದಾಗಿದ್ದಾರೆ. ಇವರಲ್ಲಿ ಬಹುತೇಕರು ಮುಸ್ಲಿಮರಾಗಿದ್ದಾರೆ.

ಬೆಳಗಿನ ಜಾವದಿಂದಲೇ ಮಹಿಳೆಯರು ಸರದಿಯಲ್ಲಿ ನಿಲ್ಲುತ್ತಿದ್ದಾರೆ. ಬಹುತೇಕರು ಶಿವಾಜಿನಗರ, ಚಾಮರಾಜಪೇಟೆ ಹಾಗೂ ಸುತ್ತಲಿನ ಪ್ರದೇಶದವರು. ಈ ಬಗ್ಗೆ ಮಾತನಾಡಿರುವ ಬೆಂಗಳೂರಿನ ಜಿಪಿಒ ಚೀಫ್ ಪೋಸ್ಟ್ ಮಾಸ್ಟರ್ ಹೆಚ್.ಎಂ. ಮಂಜೇಶ್, ಗಾಳಿ ಸುದ್ದಿಯನ್ನು ನಂಬಿ ಜನರು ಖಾತೆ ತೆರೆಯಲು ಬರುತ್ತಿದ್ದಾರೆ ಎಂದು ಹೇಳಿದ್ದಾರೆ. ಈ ಬಗ್ಗೆ ಗ್ರಾಹಕರಿಗೆ ತಿಳಿಸಿದ್ದೇವೆ. ಕೆಲ ಪೋಸ್ಟರ್‌ಗಳನ್ನೂ ಅಂಟಿಸಿದ್ದೇವೆ. ಆದರೂ, ಜನರು ಐ.ಪಿ.ಪಿ.ಬಿ. ಖಾತೆ ತೆರೆಯಲು ಸಾಲುಗಟ್ಟಿ ಬರುತ್ತಿದ್ದಾರೆ. ಹೀಗಾಗಿ ಹೆಚ್ಚು ಕೌಂಟರ್‌ಗಳನ್ನು ತೆರೆಯಲಾಗಿದೆ ಎಂದವರು ಹೇಳಿದ್ದಾರೆ.

ಸಾಮಾನ್ಯವಾಗಿ ಒಂದು ಕೌಂಟರ್‌ನಲ್ಲಿ 50 ರಿಂದ 60 ಖಾತೆ ತೆರೆಯಲಾಗುತ್ತಿತ್ತು. ಈಗ 500 ರಿಂದ 600 ಖಾತೆ ತೆರೆಯಲಾಗುತ್ತಿದೆ. ಕೆಲವೊಮ್ಮೆ ದಿನಕ್ಕೆ ಸಾವಿರದವರೆಗೂ ಖಾತೆಗಳಾಗುತ್ತಿವೆ ಎಂದು ಮಂಜೇಶ್ ಹೇಳಿದ್ದಾರೆ. ಕಳೆದ ಮೂರು ದಿನಗಳಿಂದ ಖಾತೆಗಳನ್ನು ತೆರೆಯಲು ಜನಸಂದಣಿ ನೆರೆಯುತ್ತಿದೆ. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಮಹಾಲಕ್ಷ್ಮಿ ಯೋಜನೆಯ ಮೂಲಕ ಮಹಿಳೆಯರ ಖಾತೆಗೆ ಪ್ರತಿ ತಿಂಗಳು 8,500 ರೂ. ಜಮಾ ಮಾಡುವುದಾಗಿ ಕಾಂಗ್ರೆಸ್ ಭರವಸೆ ನೀಡಿದೆ.

## ಹರಿಹರ : ನಾಳೆ ಸಿಹಿ ಹಂಚುವ ಮೂಲಕ ವಿದ್ಯಾರ್ಥಿಗಳಿಗೆ ಸ್ವಾಗತ, ಇಂದು ಸ್ವಚ್ಛತೆ

ಹರಿಹರ, ಮೇ 29- ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಕ್ಷೇತ್ರ ಸಂಪನ್ಮೂಲ ಕೇಂದ್ರ, ಶಾಲಾ ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 30 ರಂದು ಶಾಲೆಗಳ ಸ್ವಚ್ಛತಾ ಕಾರ್ಯ ಹಾಗೂ ನಾಡಿದ್ದು ದಿನಾಂಕ 31 ರಂದು ತಳಿರು, ತೋರಣಗಳಿಂದ ಸಿಂಗರಿಸಿ, ಹೂಗಳನ್ನು ನೀಡಿ, ಸಿಹಿ ಹಂಚುವ ಮೂಲಕ ವಿದ್ಯಾರ್ಥಿಗಳನ್ನು ಶಾಲೆಗೆ ಬರಮಾಡಿಕೊಳ್ಳುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ತಾಲ್ಲೂಕಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು, ಸರ್ಕಾರಿ ಪ್ರೌಢಶಾಲೆಗಳು, ಅನುದಾನಿತ ಪ್ರಾಥಮಿಕ ಶಾಲೆಗಳು, ಅನುದಾನಿತ ಪ್ರೌಢಶಾಲೆಗಳು, ಅನುದಾನ ರಹಿತ ಕಿರಿಯ ಪ್ರಾಥಮಿಕ ಶಾಲೆಗಳು, ಅನುದಾನ ರಹಿತ ಹಿರಿಯ ಪ್ರಾಥಮಿಕ ಶಾಲೆಗಳು, ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ಇಂದಿನಿಂದ ಶಾಲಾ ಆವರಣ ಸ್ವಚ್ಛತೆ, ಕೊಠಡಿಗಳ ಸ್ವಚ್ಛತೆ ಹಾಗೂ ಅಕ್ಷರ ದಾಸೋಹದ ಕೊಠಡಿಗಳ ಸ್ವಚ್ಛತೆ ಮಾಡಿಕೊಳ್ಳಲು ಮುಖ್ಯ ಶಿಕ್ಷಕರ ಸಭೆ ಕರೆದು ಸೂಚಿಸಲಾಗಿದೆ ಎಂದು ಬಿಇಓ ತಿಳಿಸಿದ್ದಾರೆ.

ಜೂನ್ ತಿಂಗಳ ಮೊದಲ ವಾರದಲ್ಲಿ ಎಲ್ಲಾ ಕಿರಿಯ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿಶೇಷ ದಾಖಲಾತಿ ಆಂದೋಲನ, ಜಾಥಾ, ಪ್ರಭಾತ್ ಪೇರಿ, ಮನೆ ಮನೆ ಭೇಟಿ, ಅಂಗನವಾಡಿ ಕೇಂದ್ರಗಳಿಗೆ ಭೇಟಿ ಮಾಡುವ ಮೂಲಕ ಅರ್ಹ ವಯಸ್ಸಿನ ಎಲ್ಲಾ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳಲು ಮುಖ್ಯ ಶಿಕ್ಷಕರಿಗೆ ಸೂಚನೆ ನೀಡಲಾಗಿದೆ.

ಉಚಿತ ಪಠ್ಯ ಪುಸ್ತಕ ಹಾಗೂ ಸಮವಸ್ತ್ರಗಳನ್ನು ಮಕ್ಕಳಿಗೆ ಶಾಲಾ ಪ್ರಾರಂಭದ ದಿನದಂದೇ ಎಸ್‌ಡಿಎಂಸಿ ಮತ್ತು ಪೋಷಕರ ಸಮ್ಮುಖದಲ್ಲಿ ವಿತರಣೆ ಮಾಡಿ, ಶಾಲಾ ಶೈಕ್ಷಣಿಕ ಚಟುವಟಿಕೆಗಳಾದ ಸೇತು ಬಂಧ ಶಿಕ್ಷಣ ಮತ್ತು ವಿದ್ಯಾಪ್ರವೇಶ ಕಾರ್ಯಕ್ರಮ ಯಶಸ್ವಿಯಾಗಿ ನಿರ್ವಹಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

## ಪ.ಬಂಗಾಳ, ಹರಿಯಾಣ, ಉತ್ತರಖಾಂಡಗಳಲ್ಲಿ ಸಿಎಎಗೆ ಚಾಲನೆ

ನವದೆಹಲಿ, ಮೇ 29 – ಪೌರತ್ವ ತಿದ್ದುಪಡಿ ಕಾಯ್ದೆ (ಸಿ.ಎ.ಎ.) ಅನ್ವಯ ಪಶ್ಚಿಮ ಬಂಗಾಳ, ಹರಿಯಾಣ ಹಾಗೂ ಉತ್ತರಾಖಂಡಗಳಲ್ಲಿ ಪೌರತ್ವ ನೀಡುವುದಕ್ಕೆ ಚಾಲನೆ ನೀಡಲಾಗಿದೆ.

ಮೂರು ರಾಜ್ಯಗಳಲ್ಲಿ ಅರ್ಜಿ ಸಲ್ಲಿಸಿದವರಿಗೆ ಆಯಾ ರಾಜ್ಯಗಳ ಸಶಕ್ತ ಸಮಿತಿಗಳ ಮೂಲಕ ಪೌರತ್ವ ನೀಡಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

## ನಗದು ರಹಿತ ಮನವಿ ಗಂಟೆಯಲ್ಲೇ ಇತ್ಯರ್ಥಪಡಿಸಲು ವಿಮಾ ಕಂಪನಿಗಳಿಗೆ ಸೂಚನೆ

ನವದೆಹಲಿ, ಮೇ 29 – ನಗದು ರಹಿತ ಚಿಕಿತ್ಸೆಯ ಕುರಿತು ಮನವಿ ಬಂದ ಒಂದು ಗಂಟೆಯಲ್ಲೇ ಇತ್ಯರ್ಥಪಡಿಸಬೇಕು ಎಂದು ಆರೋಗ್ಯ ವಿಮಾ ಕಂಪನಿಗಳಿಗೆ ವಿಮಾ ನಿಯಂತ್ರಕ ಐ.ಆರ್.ಡಿ.ಎ.ಐ. ಸೂಚನೆ ನೀಡಿದೆ.

ಆರೋಗ್ಯ ವಿಮಾ ಉತ್ಪನ್ನಗಳ ಕುರಿತು ಈ ಹಿಂದೆ ಹೊರಡಿಸಲಾದ 55 ಸುತ್ತೋಲೆಗಳನ್ನು ವಾಪಸ್ ಪಡೆದು, ಹೊಸ ಸುತ್ತೋಲೆ ಪ್ರಕಟಿಸಲಾಗಿದೆ. ಇದು ಆರೋಗ್ಯ ವಿಮಾ ಸೇವೆಯಲ್ಲಿ ಪ್ರಮುಖ ಹೆಜ್ಜೆಯಾಗಲಿದೆ.

## ಚನ್ನಗಿರಿ ಪ್ರಕರಣ : ಎನ್‌ಐಎಗೆ ಒಪ್ಪಿಸಲು ಹಿಂದೂ ಸಂಘಟನೆಗಳ ಆಗ್ರಹ

ದಾವಣಗೆರೆ, ಮೇ 29- ಚನ್ನಗಿರಿ ಆರಕ್ಷಕ ಠಾಣೆಯಲ್ಲಿ ಕೆಲವು ದುಷ್ಕರ್ಮಿಗಳು ನಡೆಸಿದ ಅಮಾನವೀಯ, ಹಿಂಸಾತ್ಮಕ ಕೃತ್ಯಗಳನ್ನು ವಿಶ್ವ ಹಿಂದೂ ಪರಿಷದ್, ಬಜರಂಗದಳ ತೀವ್ರ ಖಂಡಿಸಿದೆ. ಇದೊಂದು ಭಯೋತ್ಪಾದಕ ಪ್ರೇರಿತ ಕೃತ್ಯವಾಗಿದ್ದು, ಪ್ರಕರಣವನ್ನು ಎನ್ಐಎ ಗೆ ಒಪ್ಪಿಸಬೇಕೆಂದು ವಿಶ್ವ ಹಿಂದೂ ಪರಿಷದ್, ಬಜರಂಗದಳ ಜಿಲ್ಲಾ ಕಾರ್ಯದರ್ಶಿ ಸಿ.ಎಸ್. ರಾಜು ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚನ್ನಗಿರಿಯಲ್ಲಿ ನಡೆದ ಘಟನೆ ಭಯೋತ್ಪಾದಕ ಕೃತ್ಯವಾಗಿದ್ದು, ಇದನ್ನು ರಾಷ್ಟ್ರೀಯ ಭದ್ರತಾ ಏಜೆನ್ಸಿಗೆ ಒಪ್ಪಿಸಬೇಕು.

ಈ ಘಟನೆಯಲ್ಲಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದ ಎಲ್ಲಾ ಪೊಲೀಸ್ ಅಧಿಕಾರಿಗಳ ಅಮಾನತು ಆದೇಶವನ್ನು ತಕ್ಷಣವೇ ವಾಪಾಸ್ ಪಡೆಯಬೇಕು. ಅಲ್ಲದೇ ಅಮಾನತ್ ಆದ ಅಧಿಕಾರಿಗಳನ್ನು ಪುನಃ ಅದೇ ಜಾಗದಲ್ಲಿ ಕರ್ತವ್ಯವನ್ನು ಮುಂದುವರೆಸಲು ಅವಕಾಶ ಕಲ್ಪಿಸಬೇಕೆಂದು ಆಗ್ರಹಿಸಿದರು.

ಚನ್ನಗಿರಿಯಲ್ಲಿನ ಅಹಿತಕರ ಘಟನೆಯಲ್ಲಿ ಚನ್ನಗಿರಿ ತಾಲ್ಲೂಕಿನ ಹೊನ್ನೇಬಾಗಿ, ನಲ್ಲೂರು, ಕೆರೆಬಿಳಚಿ, ಅಗರಬನ್ನಿಹಟ್ಟಿ ಗ್ರಾಮಗಳಿಂದ ಮತ್ತು ಚನ್ನಗಿರಿ ನಗರದಿಂದ ಬಂದಂತಹ ದೇಶದ್ರೋಹಿ, ಮುಸಲ್ಮಾನರು ಈ ಕೃತ್ಯಕ್ಕೆ ಕಾರಣರಾಗಿರುತ್ತಾರೆ ಎಂದರು.

ಈ ಹಿಂದೆಯೂ ಕೂಡ ಈ ತಾಲ್ಲೂಕಿನಲ್ಲಿ ಇಂತಹ ದುಷ್ಕೃತ್ಯಗಳು ನಡೆಯುತ್ತಲೇ ಇವೆ. ಪದೇ ಪದೇ ಇಂತಹ ಘಟನೆಗಳು ನಡೆಯದಂತೆ, ಇದನ್ನು ಸೂಕ್ತ ತನಿಖೆ ಮಾಡಿ, ಆ ಎಲ್ಲಾ ದೇಶದ್ರೋಹಿಗಳನ್ನು ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.

ಈ ಎಲ್ಲಾ ಹಿಂಸಾತ್ಮಕ ಕೃತ್ಯಗಳ ಹಿಂದೆ , ಗಾಂಜಾ, ಅಫೀಮು, ಡ್ರಗ್ಸ್ ಮಾಫಿಯಾದ ಮತ್ತು ಜೂಜು ದಂಧೆ ನಡೆಸುವ ದೇಶದ್ರೋಹಿ ಕೈಗಳು ಇರುವ ಶಂಕೆ ಇದೆ. ಚನ್ನಗಿರಿ ತಾಲ್ಲೂಕು ಮತ್ತು ನಗರದಲ್ಲಿ ಈ ಡ್ರಗ್ಸ್ ಮಾರಾಟ ಯಾವುದೇ ಕಾನೂನಿನ ಭಯವಿಲ್ಲದೇ ನಡೆಯುತ್ತಿದೆ. ಇದರ ಪರಿಣಾಮವೇ ಮೊನ್ನೆ ನಡೆದ ಹಿಂಸಾ ಕೃತ್ಯಗಳಿಗೆ ಕಾರಣ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಹೆಚ್. ಮಂಜುನಾಥ್, ಕಲ್ಯಾಣಮ್ಮ, ಹರೀಶ್ ಪವಾರ್, ಜಿ. ಬಸವರಾಜ್, ಡಿ.ಟಿ. ಸುಧೀಂದ್ರ, ಕೃಷ್ಣಮೂರ್ತಿ ಉಪಸ್ಥಿತರಿದ್ದರು.

## ಜಿಲ್ಲೆಯಲ್ಲಿ ಬಿತ್ತನೆ ಬೀಜ ದಾಸ್ತಾನು

**(1ನೇ ಪುಟದಿಂದ)** ಎಂದು ಹೇಳಿದ್ದಾರೆ.

ಜಿಲ್ಲೆಯ ಪ್ರಮುಖ ಬೆಳೆಗಳಾದ ಮೆಕ್ಕೆಜೋಳ, ಭತ್ತ, ತೊಗರಿ, ರಾಗಿ, ಶೇಂಗಾ ಸೇರಿದಂತೆ ವಿವಿಧ ಬೆಳೆಗಳ ಒಟ್ಟು 49869 ಕ್ವಿಂಟಾಲ್ ಬಿತ್ತನೆ ಬೀಜದ ಬೇಡಿಕೆ ಇದೆ. ಇದುವರೆಗೆ 54052 ಕ್ವಿಂಟಾಲ್ ಬಿತ್ತನೆ ಬೀಜದ ದಾಸ್ತಾನನ್ನು ಕೃಷಿ ಇಲಾಖೆಯಿಂದ ರೈತ ಸಂಪರ್ಕ ಕೇಂದ್ರಗಳಲ್ಲಿ ಹಾಗೂ ನಿಗದಿಪಡಿಸಿದ ಸಹಕಾರ ಸಂಘಗಳ ಮೂಲಕ ರಿಯಾಯತಿ ದರದಲ್ಲಿ ವಿವಿಧ ಬಿತ್ತನೆ ಬೀಜಗಳನ್ನು ದಾಸ್ತಾನು ಮಾಡಿ ವಿತರಣೆ ಮಾಡಲಾಗುತ್ತಿದೆ.

ಜಿಲ್ಲೆಯ ವಿವಿಧ ಕೃಷಿ ಪರಿಕರ ಮಾರಾಟ ಮಳಿಗೆಗಳಲ್ಲಿ ದೃಢೀಕೃತ ಬಿತ್ತನೆ ಬೀಜಗಳು ಲಭ್ಯವಿದ್ದು, ರೈತರಿಗೆ ಯಾವುದೇ ಬಿತ್ತನೆ ಬೀಜಗಳ ಕೊರತೆಯಾಗುವುದಿಲ್ಲ ಎಂದು ತಿಳಿಸಿದ್ದಾರೆ.

ರೈತರು ಲೂಸ್ ಬಿತ್ತನೆ ಬೀಜ ಮಾರಾಟ ಜಾಲಕ್ಕೆ ಸಿಲುಕದೇ ಬೀಜದಂತೆ ಬೆಳೆ ನೂಲಿನಂತೆ ಸೀರೆ ಎಂಬ ಗಾದೆಯಂತೆ ಗುಣಮಟ್ಟದ ದೃಢೀಕೃತ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳಿಂದ, ಅಧಿಕೃತ ಕೃಷಿ ಪರಿಕರ ಮಾರಾಟಗಾರರಿಂದ ಖರೀದಿಸಿ ಬಿತ್ತನೆ ಮಾಡಲು ರೈತರಲ್ಲಿ ಕೋರಿದ್ದಾರೆ.

ಜಿಲ್ಲೆಗೆ ಮುಂಗಾರು ಹಂಗಾಮಿಗೆ ಒಟ್ಟು 153683 ಮೆಟ್ರಿಕ್ ಟನ್ ವಿವಿಧ ರಸಗೊಬ್ಬರಗಳ ಬೇಡಿಕೆಯಿದ್ದು, ಜೂನ್ ಮಾಹೆಗೆ 28178 ಮೆಟ್ರಿಕ್ ಟನ್ ಗಳಷ್ಟು ರಸಗೊಬ್ಬರ ಅವಶ್ಯಕತೆ ಇರುತ್ತದೆ.

ಜಿಲ್ಲೆಯಲ್ಲಿ ಯಾವುದೇ ಅನಧಿಕೃತ ಲೂಸ್ ಬಿತ್ತನೆ ಬೀಜ ದಾಸ್ತಾನು ಹಾಗೂ ಕಳಪೆ ರಸಗೊಬ್ಬರ ಮಾರಾಟ ಮಾಡುವುದು ಕಂಡು ಬಂದರೆ ಸಹಾಯಕ ಕೃಷಿ ನಿರ್ದೇಶಕರು 8277931106, 8277931207 ಅಥವಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು, ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳನ್ನು ಸಂಪರ್ಕಿಸಲು ಕೋರಿದ್ದಾರೆ.

## ಶ್ರೀ ಮೌನೇಶ್ವರಿ ಕಿವುಡ, ಮೂಕ ಮಕ್ಕಳ ವಸತಿಯುತ ಶಾಲೆ ಪ್ರಾರಂಭೋತ್ಸವ



ದಾವಣಗೆರೆ ಮೇ 29 - ನಗರದ ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ ವತಿಯಿಂದ ನಡೆಯುತ್ತಿರುವ ಶ್ರೀ ಮೌನೇಶ್ವರಿ ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಯ 2024-25ನೇ ಸಾಲಿನ ಶಾಲಾ ಪ್ರಾರಂಭೋತ್ಸವವನ್ನು ಜಿಲ್ಲಾ ವಿಕಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ಅವರು ಶ್ರವಣ ನ್ಯೂನ್ಯತ ಮಕ್ಕಳನ್ನು ಪುಷ್ಪಗುಚ್ಛ ನೀಡಿ ಸ್ವಾಗತಿಸುವುದರ ಮೂಲಕ ವಿದ್ಯಾರ್ಥಿಗಳನ್ನು ಬರ ಮಾಡಿಕೊಂಡರು. ಸಂಸ್ಥೆಯ ಕಾರ್ಯದರ್ಶಿ ಹೆಚ್. ವಿ. ಗೋಪಾಲಪ್ಪ ಮತ್ತು ಸಿಬ್ಬಂದಿ ವರ್ಗದವರಿಗೆ ಶುಭ ಕೋರಿದರು.

## ನಗರದಲ್ಲಿ ಇಂದು ಆಧುನಿಕ ಹೈನುಗಾರಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಆಧುನಿಕ ಹೈನುಗಾರಿಕೆ ತರಬೇತಿ ಇಂದು ನಡೆಯಲಿದೆ. ಆಸಕ್ತರು ಪಶುಪಾಲನಾ, ಪಶುವೈದ್ಯಕೀಯ ತರಬೇತಿ ಕೇಂದ್ರ (ದೂ.08192-233787) ವನ್ನು ಸಂಪರ್ಕಿಸಬಹುದು.

# ಮುಂದಿನ ಪೀಳಿಗೆಗಾಗಿ ಇಂದಿನಿಂದಲೇ ಪರಿಸರ ಕಾಪಾಡಿ

### ದೃಶ್ಯಕಲಾ ವಿವಿ ಸಭಾಂಗಣದಲ್ಲಿ ದಾವಣಗೆರೆ ವಿವಿಯ ವಿಜ್ಞಾನ ವಿಭಾಗದ ಡಾ. ವೀರೇಶ್

ದಾವಣಗೆರೆ, ಮೇ 29- ಮುಂದಿನ ಪೀಳಿಗೆಗಾಗಿ ಇಂದಿನಿಂದಲೇ ಪರಿಸರ ಸಂರಕ್ಷಣೆ ಮಾಡಬೇಕಿರುವುದು ನಮ್ಮೆಲ್ಲರ ಜವಾಬ್ದಾರಿ ಎಂದು ದಾವಣಗೆರೆ ವಿವಿಯ ವಿಜ್ಞಾನ ವಿಭಾಗದ ಡಾ.ಎಸ್.ಜೆ. ವೀರೇಶ್ ಹೇಳಿದರು.

ನಗರದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಬುಧವಾರ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಘನತ್ಯಾಜ್ಯ ನಿರ್ವಹಣೆ' ಎಂಬ ವಿಷಯ ಕುರಿತು ಮಾತನಾಡಿದರು.

ದೇಶದಲ್ಲಿ ವರ್ಷಕ್ಕೆ 62 ಮಿಲಿಯನ್ ಟನ್ ಪ್ರಮಾಣದ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಇದರಲ್ಲಿ ಶೇ.70ರಷ್ಟು ಸಂಗ್ರಹಣೆ ಮಾಡುತ್ತಿದ್ದರೆ, ಶೇ.30ರಷ್ಟು ಮಣ್ಣಿನಲ್ಲಿ ಬೆರೆತು ಪರಿಸರ ನಾಶವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರಸ್ತುತ ದಿನಗಳಲ್ಲಿ ಹಸಿಕಸ, ಒಣಕಸ ಹಾಗೂ ವಿಷಕಾರಿ ಕಸವಾಗಿ ವಿಂಗಡಣೆ ಮಾಡಲಾಗುತ್ತಿದೆ. ಆದ್ದರಿಂದ ಮನೆಯಲ್ಲಿ ಉತ್ಪತ್ತಿಯಾಗುವ ಕಸವನ್ನು ಕಡ್ಡಾಯವಾಗಿ ಬೇರ್ಪಡಿಸಬೇಕು ಎಂದು ತಿಳಿಸಿದರು.



ದೇಶದಲ್ಲಿ ಜನಸಂಖ್ಯೆ ಜಾಸ್ತಿಯಾದಂತೆ, ಕಸದ ಪ್ರಮಾಣವು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, 2030ರ ವೇಳೆಗೆ ವರ್ಷಕ್ಕೆ 156 ಮಿಲಿಯನ್ ಟನ್‌ನಷ್ಟು ಘನತ್ಯಾಜ್ಯ ಉತ್ಪಾದನೆ ಆಗಬಹುದು ಎಂದು ಹೇಳಿದರು.

ಕಾನೂನಿನ ಪ್ರಕಾರ ಕಸವನ್ನು ಸುಡುವಂತಿಲ್ಲ ಆದ್ದರಿಂದ ಹಸಿಕಸವನ್ನು ಕೊಳೆಸಿ ಗೊಬ್ಬರ ಮಾಡಲಾಗುತ್ತದೆ ಮತ್ತು ಕೊಳೆಯಲಾರದ ವಸ್ತುವನ್ನು ಮರುಬಳಕೆಗೆ ಉಪಯೋಗಿಸುತ್ತಾರೆ ಎಂದು ಮಾಹಿತಿ ನೀಡಿದರು.

ಪರಿಸರ ಸ್ವಾಸ್ಥ್ಯದ ದೃಷ್ಟಿಯಿಂದ ಪರಿಸರಕ್ಕೆ ಹಾನಿಯಾಗುವ ವಸ್ತುವಿನ ಬಳಕೆ ನಿಲ್ಲಿಸಬೇಕು ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.

ದಾವಣಗೆರೆ ವಿವಿ ಸಹಾಯಕ ಪ್ರಾಧ್ಯಾಪಕ ಡಾ.ಯು. ಕುಮಾರ್ ಸಿದ್ದಮಲ್ಲಪ್ಪ ಮಾತನಾಡಿ, ನಮ್ಮ ಜ್ಞಾನವನ್ನು ಇಂದಿನ ದಿನಮಾನಕ್ಕೆ ತಕ್ಕಂತೆ ಅಭಿವೃದ್ಧಿ ಪಡಿಸಿಕೊಂಡರೆ ಉತ್ತಮ ಆದಾಯ ಗಳಿಸಬಹುದು ಎಂದು ದೃಶ್ಯಕಲಾ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

> **ಸಮೀಪದ ಆವರಗೊಳ್ಳ ಘನತ್ಯಾಜ್ಯ ಘಟಕದಲ್ಲಿ ಬೆಂಕಿ ತಗುಲಿ 15 ದಿನಗಳ ಕಾಲ ಹೊತ್ತಿ ಉರಿದಿತ್ತು. ಅಂತಹ ಘಟನೆ ಆದಾಗ ಹೊಗೆಯಿಂದ ಬರುವ ವಿಷ ಅನಿಲ ಹಾಗೂ ಮಳೆಗಾಲದಲ್ಲಿ ಅಲ್ಲಿಂದ ಬಸಿದು ಬರುವ ನೀರಿನಿಂದ ಜನರಿಗೆ ಕ್ಯಾನ್ಸರ್ ಬರಲಿದೆ ಮತ್ತು ಕಸ ವಿಲೇವಾರಿ ಘಟಕದ ವ್ಯಾಪ್ತಿಯಲ್ಲಿನ ಜನರ ಆರೋಗ್ಯ ಕ್ರಮೇಣ ಹದಗೆಡುತ್ತದೆ.**
>
> **- ಡಾ.ಎಸ್.ಜೆ. ವೀರೇಶ್**

ಈ ವೇಳೆ ಶಿಬಿರಾಧಿಕಾರಿ ಡಾ. ಸತೀಶ್ ಕುಮಾರ್ ಪಿ. ವಲ್ಲೇಪುರೆ, ಸಹ ಶಿಬಿರಾರ್ಥಿ ಡಾ.ಎಂ.ಕೆ. ಗಿರೀಶ್ ಕುಮಾರ್, ಬೋಧನಾ ಸಹಾಯಕರಾದ ದತ್ತಾತ್ರೇಯ ಎನ್. ಭಟ್, ಸಂತೋಷ್ ಕುಮಾರ್ ಕುಲಕರ್ಣಿ, ಕಾಲೇಜಿನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿದ್ದರು.

ನವ್ಯಾ ನಿರೂಪಿಸಿದರು ಮತ್ತು ಸ್ನೇಹಾ ಸ್ವಾಗತಿಸಿದರು.

## ನಗರದಲ್ಲಿ ಇಂದು ಪೊಲೀಸ್ ಚಿಣ್ಣರ ಅಂಗಳ ಶಾಲೆ ಉದ್ಘಾಟನೆ

ಪೊಲೀಸ್ ವಸತಿ ಗೃಹದ ಬಳಿ ಇರುವ 'ಪೊಲೀಸ್ ಚಿಣ್ಣರ ಅಂಗಳ' ಶಾಲಾ ಉದ್ಘಾಟನಾ ಕಾರ್ಯಕ್ರಮವನ್ನು ಬೆಳಿಗ್ಗೆ 10.15ಕ್ಕೆ ಹಮ್ಮಿಕೊಳ್ಳಲಾಗಿದೆ.

## ಕುಟುಂಬದ ಎಂಟು ಜನರ ಹತ್ಯೆಗೈದು ಆತ್ಮಹತ್ಯೆ

ಛಿಂದ್ವಾಡ, ಮೇ 29 – ಮಾನಸಿಕ ವಿಚಲಿತ ವ್ಯಕ್ತಿಯೋರ್ವ ತನ್ನ ಕೂಡು ಕುಟುಂಬದ ಎಂಟು ಜನರನ್ನು ಹತ್ಯೆಗೈದು, ನಂತರ ತಾನೂ ಆತ್ಮಹತ್ಯೆ ಮಾಡಿಕೊಂಡ ಘಟನೆ ಮಧ್ಯಪ್ರದೇಶದ ಛಿಂದ್ವಾಡಾ ಜಿಲ್ಲೆಯಲ್ಲಿ ನಡೆದಿದೆ.

ಬೊದಲ್ ಕಚ್ಚರ್ ಎಂಬ ಹಳ್ಳಿಯಲ್ಲಿ ಬೆಳಿಗ್ಗೆ 2.30ರ ಸಮಯದಲ್ಲಿ ಈ ಘಟನೆ ನಡೆದಿದೆ. 26 ವರ್ಷದ ಮಾನಸಿಕ ವಿಚಲಿತ ವ್ಯಕ್ತಿ ದಿನೇಶ್ ಸರಿಯಮ್ ಎಂಬಾತ ಈ ಹತ್ಯೆ ಮಾಡಿದ್ದಾನೆ. ಈತ ಮೇ 21ರಂದು ಮದುವೆಯಾಗಿದ್ದ ಎಂದು ಪೊಲೀಸ್ ವರಿಷ್ಠಾಧಿಕಾರಿ ಮನೀಶ್ ಖಾತ್ರಿ ತಿಳಿಸಿದ್ದಾರೆ.

ಆತ ತನ್ನ ಪತ್ನಿ, ತಾಯಿ, ಸಹೋದರಿ, ಸಹೋದರ, ಸಹೋದರನ ಪತ್ನಿ ಹಾಗೂ ಮೂವರು ಅಪ್ರಾಪ್ತ ಮಕ್ಕಳನ್ನು ಹತ್ಯೆಗೈದಿದ್ದಾನೆ. ನಂತರ ಇನ್ನೋರ್ವ ಸಂಬಂಧಿಯ ಮೇಲೆ ಹಲ್ಲೆಗೆ ಯತ್ನಿಸಿದ್ದಾನಾದರೂ, ಆತ ಪಾರಾಗಿದ್ದಾನೆ.

ಬೆಳಗಿನ ಜಾವ ಮಹಿಳೆಯೊಬ್ಬರು ಈ ಘಟನೆಯ ಬಗ್ಗೆ ಪೊಲೀಸರಿಗೆ ತಿಳಿಸಿದ್ದರು. ಪೊಲೀಸರು ಸ್ಥಳಕ್ಕೆ ಧಾವಿಸಿದರು. ಆಗ ದಿನೇಶ್ ಸರಿಯಮ್ ಮರಕ್ಕೆ ನೇಣು ಹಾಕಿಕೊಂಡಿದ್ದು ಕಂಡು ಬಂದಿದೆ.

**ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜ್, ದಾವಣಗೆರೆ.**

**ಪ್ರವೇಶ ಪ್ರಕಟಣೆ**

* ನಮ್ಮಲ್ಲಿ ಲಭ್ಯವಿರುವ ಕೋರ್ಸ್‌ಗಳು : DMLT-ಲ್ಯಾಬೋರೇಟರ್ ಟೆಕ್ನಾಲಜಿ
* DHI-ಹೆಲ್ತ್ ಇನ್ಸ್‌ಪೆಕ್ಟರ್ * DOT - ಆಪ್ತಾಲ್ಮರ್ ಟೆಕ್ನಾಲಜಿ
* DOT & AT ಆಪರೇಷನ್ ಥಿಯೇಟರ್ ಮತ್ತು ಅನಸ್ತೇಯಾ ಟೆಕ್ನಾಲಜಿ.

**ಬೇಕಾಗಿದ್ದಾರೆ**

* ಆಫೀಸ್ ಕೆಲಸಕ್ಕಾಗಿ- ಯಾವುದೇ ಪದವಿ, ಕಂಪ್ಯೂಟರ್ ಜ್ಞಾನವಿರಬೇಕು.
* ಉಪನ್ಯಾಸಕರು - ಎಂ.ಎಸ್ಸಿ, ನರ್ಸಿಂಗ್, ಬಯೋ ಕೆಮಿಸ್ಟ್ರಿ, ಮೈಕ್ರೋ ಬಯೋಲಜಿ, ಸಿಬಿಝಡ್, ಬಯೋಲಜಿ, ಕೆಮಿಸ್ಟ್ರಿ ಇತರೆ. * ಕಂಪ್ಯೂಟರ್ ಜ್ಞಾನ ಹೊಂದಿರಬೇಕು.

**ಹೆಚ್ಚಿನ ಮಾಹಿತಿಗಾಗಿ 70195 86789, 86180 50497**

**ಧರ್ಮಪ್ರವರ್ತ ರಾಜನಹಳ್ಳಿ ಹನುಮಂತಪ್ಪನವರ ಧರ್ಮಶಾಲಾ ಅಸೋಸಿಯೇಷನ್**

**ಪೂನಾ-ಬೆಂಗಳೂರು ರಸ್ತೆ, ದಾವಣಗೆರೆ 577 002.**

ಹದಡಿ ರಸ್ತೆಯ ನಮ್ಮ ಧರ್ಮಶಾಲೆಯ ಆವರಣದಲ್ಲಿ ಹೊಸದಾಗಿ ನಿರ್ಮಿಸಿರುವ ಮಳಿಗೆಗಳಲ್ಲಿ ಈ ಕೆಳಗಿನ 3 (ಮೂರು) ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ.

❊ ಮಳಿಗೆ ನಂ. 9 - 176.34 ಚದರ ಅಡಿ

❊ ಮಳಿಗೆ ನಂ. 10 - 178.00 ಚ. ಅಡಿ ❊ ಮಳಿಗೆ ನಂ. 15 - 206.63 ಚ.ಅಡಿ

ಆಸಕ್ತರು ಧರ್ಮಶಾಲೆಯ "ಹನುಮಂತಪ್ಪನವರ ಕಟ್ಟಡ" ದಲ್ಲಿರುವ ಆಡಳಿತ ಕಛೇರಿಯನ್ನು ಸಂಪರ್ಕಿಸಿ. ರೂ. 100/- ಶುಲ್ಕ ಸಲ್ಲಿಸಿ, ಟೆಂಡರ್ ಫಾರ್ಮ್ ಪಡೆದು ಭರ್ತಿ ಮಾಡಿದ ಫಾರ್ಮ್‌ಗಳನ್ನು ಕಛೇರಿಗೆ ತಲುಪಿಸಬೇಕು.

**(ದೂರವಾಣಿ : 94498 28834)**

# ಈ ಬಾರಿಯಾದರೂ 22 ಕೆರೆ ತುಂಬಿಸಿ ಇಂಜಿನಿಯರ್‌ಗಳಿಗೆ ಶಾಸಕರ ತಾಕೀತು



ದಾವಣಗೆರೆ, ಮೇ 29 - ಈ ಬಾರಿ ಅತೀ ಹೆಚ್ಚು ಮುಂಗಾರು ಮಳೆ ಆಗಲಿದೆ ಎಂದು ಹವಾಮಾನ ಇಲಾಖೆ ಹೇಳಿದ್ದು, ಅಧಿಕಾರಿಗಳು ಈಗಲೇ ಜಾಗೃತರಾಗಿ ತುಂಗಭದ್ರಾ ನದಿಯಿಂದ 22 ಕೆರೆಗಳ ಏತ ನೀರಾವರಿ ಯೋಜನೆಯ ವ್ಯಾಪ್ತಿಯ ಕೆರೆಗಳನ್ನು ಭರ್ತಿ ಮಾಡಿಸಿ, ರೈತರ ನೆರವಿಗೆ ಧಾವಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಸೂಚನೆ ನೀಡಿದರು.

ಹರಿಹರ ಸಮೀಪವಿರುವ 22 ಕೆರೆಗಳ ಏತ ನೀರಾವರಿ ಯೋಜನೆಯ ಜಾಕ್ವೆಲ್ ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸಂಬಂಧಪಟ್ಟ ಇಂಜಿನಿಯರ್‌ಗಳು ಈ ಯೋಜನೆ ವ್ಯಾಪ್ತಿಯ ಕೆರೆಗಳಿಗೆ ಸಮರ್ಪಕವಾಗಿ ನೀರು ಹರಿಯುವಂತೆ ನೋಡಿಕೊಳ್ಳಬೇಕು. ಈ ಯೋಜನೆಯ ಏನೇ ಸಮಸ್ಯೆಗಳು ಇದ್ದರೂ ಈಗಲೇ ಸರಿಪಡಿಸಿಕೊಳ್ಳಬೇಕು. ಮುನ್ನೆಚ್ಚರಿಕೆ ಕ್ರಮ ವಹಿಸಬೇಕು. ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಈ ಸಂದರ್ಭದಲ್ಲಿ 22 ಕೆರೆಗಳ ಏತ ನೀರಾವರಿ ಯೋಜನೆ ಹೋರಾಟ ಸಮಿತಿ ಅಧ್ಯಕ್ಷ ಮುದೇಗೌಡ್ರು ಗಿರೀಶ್, ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಕೆ.ಚಂದ್ರಣ್ಣ, ಜನತಾ ಬಜಾರ್ ಗುರುಸ್ವಾಮಿ, ಶಂಭಣ್ಣ, ಕೊಟ್ರೇಶ್ ನಾಯ್ಕ್ ಸೇರಿದಂತೆ, ಈ ಭಾಗದ ರೈತರು ಹಾಜರಿದ್ದರು.

# ಗಾಂಧಿ ಚಿತ್ರ : ಪ್ರಧಾನಿ ಮೋದಿ ಹೇಳಿಕೆಗೆ ಕೈ ತರಾಟೆ

ನವದೆಹಲಿ, ಮೇ 29 - 'ಗಾಂಧಿ' ಚಿತ್ರ ನಿರ್ಮಿಸುವವರೆಗೆ ಪ್ರಪಂಚಕ್ಕೆ ಮಹಾತ್ಮ ಗಾಂಧಿ ಕುರಿತು ಗೊತ್ತಿರಲಿಲ್ಲ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿರುವುದನ್ನು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಹಾತ್ಮ ಗಾಂಧಿ ಹತ್ಯೆಯಲ್ಲಿ ಭಾಗಿಯಾದ ನಾಥೂರಾಮ್ ಗೂಡ್ಸೆ ಅನುಯಾಯಿಗಳು ಎಂದೂ ಬಾಪೂಜಿ ಅವರ ಸತ್ಯದ ಮಾರ್ಗದಲ್ಲಿ ನಡೆದಿಲ್ಲ. ಈಗ ಅವರು ಗಂಟು ಮೂಟೆ ಕಟ್ಟುವ ಸಮಯ ಬಂದಿದೆ ಎಂದಿದ್ದಾರೆ.

ಖಾಸಗಿ ಸುದ್ದಿ ವಾಹಿನಿಯೊಂದಕ್ಕೆ ಸಂದರ್ಶನ ನೀಡಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಮಹಾತ್ಮ ಗಾಂಧಿ ಅವರು ಮಹಾನ್ ವ್ಯಕ್ತಿ ಎಂದು ವಿಶ್ವದಾದ್ಯಂತ ಗುರುತಿಸಲಾಗುತ್ತದೆ.

ಇಡೀ ಪ್ರಪಂಚಕ್ಕೆ ಅವರ ಬಗ್ಗೆ ತಿಳಿಸುವುದು ನಮ್ಮ ಹೊಣೆಗಾರಿಕೆ. ಆದರೆ ಅವರ ಬಗ್ಗೆ ಯಾರಿಗೂ ತಿಳಿದಿಲ್ಲ. ಗಾಂಧಿ ಚಿತ್ರ ನಿರ್ಮಿಸಿದ ನಂತರ, ಅವರ ಬಗ್ಗೆ ವಿಶ್ವದಾದ್ಯಂತ ಕುತೂಹಲ ಮೂಡಿತ್ತು. ಅಂತಹ ಚಿತ್ರ ನಿರ್ಮಿಸುವ ಕ್ರಮವನ್ನು ನಾವು ತೆಗೆದುಕೊಂಡಿರಲಿಲ್ಲ ಎಂದಿದ್ದರು.

# ಸರ್ಕಾರದ ಹಣ ಲೋಕಸಭಾ ಚುನಾವಣೆಗೆ ಬಳಕೆ

## ರಾಜ್ಯ ಸರ್ಕಾರದ ವಿರುದ್ಧ ಹರಿಹರ ಶಾಸಕ ಬಿ.ಪಿ. ಹರೀಶ್ ಗಂಭೀರ ಆರೋಪ



### ಬಿತ್ತನೆ ಬೀಜಗಳ ಬೆಲೆ ಏರಿಕೆ ಖಂಡಿಸಿ, ಮಲೇಬೆನ್ನೂರಿನಲ್ಲಿ ಬಿಜೆಪಿ-ಜೆಡಿಎಸ್ ಪ್ರತಿಭಟನೆ

ಮಲೇಬೆನ್ನೂರು, ಮೇ 29- ರಾಜ್ಯ ಸರ್ಕಾರದ ಹಣವನ್ನು ಕಾಂಗ್ರೆಸ್‌ನವರು ಲೋಕಸಭಾ ಚುನಾವಣೆಗೆ ಬಳಸಿದ್ದಾರೆ ಎಂದು ಶಾಸಕ ಬಿ.ಪಿ. ಹರೀಶ್ ಗಂಭೀರ ಆರೋಪ ಮಾಡಿದ್ದಾರೆ.

ಅವರು ಬುಧವಾರ ಪಟ್ಟಣದ ರೈತ ಸಂಪರ್ಕ ಕಛೇರಿ ಎದುರು ಬಿತ್ತನೆ ಬೀಜ, ಗೊಬ್ಬರ ಮತ್ತು ಔಷಧಿಗಳ ಬೆಲೆ ಏರಿಕೆ ಖಂಡಿಸಿ, ಬಿಜೆಪಿ-ಜೆಡಿಎಸ್ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದರು.

ಎಸ್ಸಿ-ಎಸ್ಟಿ, ಹಿಂದುಳಿದವರ ಹೆಸರು ಹೇಳಿ ಕೊಂಡು ಮತ ಪಡೆದು ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಪಕ್ಷದವರು ಎಸ್ಟಿ ಅಭಿವೃದ್ಧಿ ನಿಗಮದಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆಸಿರುವುದು ಅಲ್ಲಿನ ಅಧಿಕಾರಿಯ ಆತ್ಮಹತ್ಯೆಯಿಂದ ಬಯಲಾಗಿದೆ.

ಈ ಘಟನೆಗೆ ಸಂಬಂಧಿಸಿದಂತೆ ಸಚಿವ ಬಿ. ನಾಗೇಂದ್ರ ಅವರು ತತ್‌ಕ್ಷಣ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ, ಹರೀಶ್ ಅವರು, ಎಸ್ಸಿ-ಎಸ್ಟಿ ಜನರ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ 11,500 ಕೋಟಿ ರೂ. ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿರುವುದು ನ್ಯಾಯವೇ ? ಎಂದು ಸರ್ಕಾರವನ್ನು ಪ್ರಶ್ನಿಸಿದರು.

ಅಧಿಕಾರಕ್ಕಾಗಿ ಏನೆಲ್ಲಾ ಮಾಡುತ್ತಿರುವ ರಾಜ್ಯ ಸರ್ಕಾರ ಜನರ ವಿರೋಧಿಯಾಗಿದ್ದು, ಅಭಿವೃದ್ಧಿ ಸಂಪೂರ್ಣವಾಗಿ ಕುಂಠಿತಗೊಂಡಿದೆ. ಸರ್ಕಾರದ ಆರ್ಥಿಕ ಪರಿಸ್ಥಿತಿ ಸದೃಢವಾಗಿದೆ ಎಂದು ಹೇಳುವ ಮುಖ್ಯಮಂತ್ರಿಗಳು ರೈತರಿಗೆ ಅವಶ್ಯವಾಗಿರುವ ಬಿತ್ತನೆ ಬೀಜಗಳ ದರವನ್ನೇಕೆ ಹೆಚ್ಚಿಸಿದ್ದಾರೆ ಎಂದು ಹರೀಶ್ ಪ್ರಶ್ನಿಸಿದ್ದಾರೆ. ಮಾರುಕಟ್ಟೆಯಲ್ಲಿ ಬಿತ್ತನೆ ಬೀಜ,ಗೊಬ್ಬರ, ಔಷಧಿಗಳ ಬೆಲೆ ಶೇ. 30ರಷ್ಟು ಹೆಚ್ಚಳ ಮತ್ತು ರೈತ ಸಂಪರ್ಕ ಕೇಂದ್ರದಲ್ಲಿ ಶೇ. 10ರಷ್ಟು ದರ ಹೆಚ್ಚಳ ಮಾಡಿರುವುದನ್ನು ಕೂಡಲೇ ಹಿಂಪಡೆಯುವಂತೆ ಶಾಸಕ ಹರೀಶ್ ಸರ್ಕಾರವನ್ನು ಒತ್ತಾಯಿಸಿದರು.

ಭದ್ರಾ ನೀರಾವರಿ ಕಛೇರಿಗಳಲ್ಲಿ ಇಂಜಿನಿಯರ್ ಮತ್ತು ನಾಲೆಗಳ ಮೇಲ್ವಿಚಾರಕರು ಇಲ್ಲ. ಅಲ್ಲದೇ, ದಿನಗೂಲಿ ನೌಕರರಿಗೆ ಸರಿಯಾದ ಸಂಬಳ ನೀಡದ ಕಾರಣ ಅವರೂ ಕೆಲಸಕ್ಕೆ ಬರುತ್ತಿಲ್ಲ. ಹೀಗಾದರೆ ನಾಳೆ ನಾಲೆಯಲ್ಲಿ ನೀರು ಬಿಟ್ಟಾಗ ನೀರಿನ ನಿರ್ವಹಣೆ ಮಾಡುವವರು ಯಾರೆಂದು ಜಿಲ್ಲಾ ಉಸ್ತುವಾರಿ ಸಚಿವರನ್ನು ಪ್ರಶ್ನಿಸಿದ ಹರೀಶ್ ಅವರು, ಕಳೆದ ವರ್ಷ ಸರಿಯಾಗಿ ಮಳೆಯಾಗದ ಕಾರಣ ರೈತರು ಕಂಗಾಲಾಗಿದ್ದು, ಭಗವಂತನ ದಯೆಯಿಂದ ಈ ವರ್ಷವಾದರೂ ಉತ್ತಮ ಮಳೆಯಾಗಿ ಭದ್ರಾ ಡ್ಯಾಂ ಸೇರಿದಂತೆ ನಾಡಿನ ಎಲ್ಲಾ ಜಲಾಶಯಗಳು ಭರ್ತಿ ಯಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ ಮಾತನಾಡಿ, ರೈತರು ಬರಗಾಲ ಎದುರಿಸುತ್ತಿರುವ ಈ ಸಂದರ್ಭದಲ್ಲಿ ಬಿತ್ತನೆ ಬೀಜಗಳ ದರ ಏರಿಕೆ ಸರಿಯಲ್ಲ ಎಂದರು.

ಹರಿಹರ ತಾ. ಗ್ರಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ಹರಿಹರ ನಗರ ಬಿಜೆಪಿ ಅಧ್ಯಕ್ಷ ಅಜಿತ್ ಸಾವಂತ್, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಐರಣಿ ಅಣ್ಣಪ್ಪ, ತಾ. ಬಿಜೆಪಿ ಕಾರ್ಯದರ್ಶಿಗಳಾದ ಆದಾಪುರ ವೀರೇಶ್, ಹುಗ್ಗಿ ಮಹಾಂತೇಶ್, ಪುರಸಭೆ ಸದಸ್ಯ ಬೆಣ್ಣೆಹಳ್ಳಿ ಸಿದ್ದೇಶ್, ಜಿಗಳೇರ ಹಾಲೇಶಪ್ಪ, ಪಾನಿಪೂರಿ ರಂಗನಾಥ್, ಬೆಣ್ಣೆಹಳ್ಳಿ ಬಸವರಾಜ್, ಉಡೇದರ ಸಿದ್ದೇಶ್, ಕಜ್ಜರಿ ಹರೀಶ್, ಭೋವಿ ಮಂಜಣ್ಣ, ಬಟ್ಟೆ ಅಂಗಡಿ ವಿಶ್ವ, ಆನಂದ ಚಾರ್, ಓ.ಜಿ. ಮಂಜುನಾಥ್, ಹರಳಹಳ್ಳಿ ಶ್ರೀನಿವಾಸ್, ನಿರಂಜನ್ ಪಿಂಟು, ಜಿಗಳಿಯ ಜಿ.ಪಿ. ಮಂಜು, ಕೊಮಾರನಹಳ್ಳಿ ಸುನೀಲ್ ಸೇರಿದಂತೆ ಇನ್ನೂ ಅನೇಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಂತರ ನಾಡ ಕಛೇರಿಗೆ ತೆರಳಿ ಮನವಿ ಪತ್ರ ಸಲ್ಲಿಸಲಾಯಿತು.

# ಸ್ವದೇಶಿಯ ರುದ್ರ ಕ್ಷಿಪಣಿ ಯಶಸ್ವಿ



ಬಾಲಸೋರ್, ಮೇ 29 – ರುದ್ರಎಂ - II ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷೆಗೆ ಒಳಪಡಿಸಲಾಗಿದೆ ಎಂದು ರಕ್ಷಣಾ ಮೂಲಗಳು ತಿಳಿಸಿವೆ.ಈ ಕ್ಷಿಪಣಿ ಆಗಸದಿಂದ ನೆಲಕ್ಕೆ ಸಿಡಿಯುತ್ತದೆ. ಎಲ್ಲಾ ಮಾನದಂಡಗಳಲ್ಲಿ ಪರೀಕ್ಷೆ ಯಶಸ್ವಿಯಾಗಿದೆ ಎಂದು ರಕ್ಷಣಾ ಮೂಲಗಳು ಹೇಳಿವೆ. ಈ ಕ್ಷಿಪಣಿಯನ್ನು ದೇಶೀಯವಾಗಿ ರೂಪಿಸಲಾಗಿದೆ. ಎಸ್‌ಯು - 30ಎಂಕೆಐ ಮೂಲಕ ಈ ಕ್ಷಿಪಣಿಯನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು.

# ಪಾಕ್‌ಪರ ಘೋಷಣೆ: ಪೊಲೀಸ್ ಇಲಾಖೆ ಸ್ಪಷ್ಟನೆ

ದಾವಣಗೆರೆ, ಮೇ 29- ಇತ್ತೀಚೆಗೆ ಚನ್ನಗಿರಿ ಪೊಲೀಸ್ ಠಾಣೆಯ ಮುಂದೆ ನಡೆದ ಪ್ರತಿಭಟನೆ ವೇಳೆ ಕೆಲ ಯುವಕರು ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾರೆ ಎಂಬ ವೀಡಿಯೋ ಹರಿದಾಡುತ್ತಿದ್ದು, ಇದನ್ನು ಪರಿಶೀಲಿಸಿದಾಗ ಪಾಕ್ ಪರ ಘೋಷಣೆ ಕಂಡು ಬಂದಿಲ್ಲ.

ಬದಲಾಗಿ 'ಪೊಲೀಸರಿಗೆ ಧಿಕ್ಕಾರ' ಎಂದು ಕೂಗಲಾಗಿದೆ. ಸಾರ್ವಜನಿಕವಾಗಿ ಪಾಕ್‌ಪರ ಘೋಷಣೆ ಕೂಗಿರುವ ವೀಡಿಯೋ ಲಭ್ಯವಾದಲ್ಲಿ ಜಿಲ್ಲಾ ಪೊಲೀಸ್ ಕಚೇರಿ ಅಥವಾ ಸ್ಥಳೀಯ ಠಾಣೆಗೆ ಮಾಹಿತಿ ನೀಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಸುಳ್ಳು ಸುದ್ದಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಡಬಾರದು ಎಂದು ಪೊಲೀಸ್ ಇಲಾಖೆ ತಿಳಿಸಿದೆ.

# ನಗರದಲ್ಲಿಂದು ವಿದ್ಯುತ್ ವ್ಯತ್ಯಯ

ಹೆಚ್.ಕೆ.ಆರ್ ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ, ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ, ಇ.ಎಸ್.ಐ ಆಸ್ಪತ್ರೆ, ಕೆ.ಟಿ.ಜೆ ನಗರ ಪೊಲೀಸ್ ಠಾಣೆ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, 60 ಅಡಿ ರಸ್ತೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.




ನೀರಿನ ಮಟ್ಟ : 117 ಅಡಿ 2 ಇಂಚು
ಒಳ ಹರಿವು : 483 ಕ್ಯೂಸೆಕ್ಸ್
ಹೊರ ಹರಿವು : 379 ಕ್ಯೂಸೆಕ್ಸ್
ಕಳೆದ ವರ್ಷ : 137 ಅಡಿ 7 ಇಂಚು

# ಪ್ರಕರಣದಲ್ಲಿ ಯಾರೇ ಭಾಗಿಯಾಗಿದ್ದರೂ ಬಂಧನ

**ಪ್ರಜ್ವಲ್ ಪ್ರಕರಣ**



ಬೆಂಗಳೂರು, ಮೇ 29 - ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ಬಂಧನಕ್ಕೆ ಯಾವುದೇ ಪಕ್ಷ ಎಂಬುದಿಲ್ಲ, ಆರೋಪದಲ್ಲಿ ಭಾಗಿಯಾಗಿರುವುದು ಕಂಡು ಬಂದರೆ ಅಂತಹವರನ್ನು ಬಂಧಿಸಲಾಗುತ್ತದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್, ಜನತಾದಳ, ಬಿಜೆಪಿ ಎಂಬುದಕ್ಕಿಂತ ಹೆಚ್ಚಾಗಿ, ಈ ಪ್ರಕರಣದಲ್ಲಿ ಯಾರು ಭಾಗಿಯಾಗಿರುವುದು ಕಂಡು ಬರುತ್ತದೋ ಅಂತಹವರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತದೆ, ಈಗಾಗಲೇ ಪ್ರಕರಣದಲ್ಲಿ 11-12 ಜನರನ್ನು ಬಂಧಿಸಲಾಗಿದೆ ಎಂದರು.

ಪ್ರಜ್ವಲ್ ವಿರುದ್ಧ ವಾರಂಟ್ ಜಾರಿಯಾಗಿರುವುದರಿಂದ ಬಂಧಿಸಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಪ್ರಕ್ರಿಯೆ ಆರಂಭಿಸಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಪಕ್ಷದ ಎಂಎಲ್‌ಸಿ ಚುನಾವಣಾ ಅಭ್ಯರ್ಥಿಗಳ ಆಯ್ಕೆ ಕುರಿತು ಪ್ರಮುಖರೊಂದಿಗೆ ಸಮಾಲೋಚಿಸಿ ಆಯ್ಕೆ ಮಾಡಬೇಕಾದುದು ಪ್ರಕ್ರಿಯೆ, ಇದನ್ನು ತಪ್ಪು ಅಂತ ಹೇಳಲಾಗದು. ನಾನು ಸಹ ಕೆಪಿಸಿಸಿ ಅಧ್ಯಕ್ಷನಾಗಿ ಕೆಲಸ ಮಾಡಿದ ಅನುಭವದಿಂದ ಈ ಮಾತನ್ನು ಹೇಳಿದ್ದೇನೆ. ನಾವು ಹೇಳಿದವರಿಗೇ ಅವಕಾಶ ನೀಡಬೇಕು ಅಂತ ಹೇಳಲು ಬರುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಯಾರು ಪಕ್ಷಕ್ಕಾಗಿ ದುಡಿದಿದ್ದಾರೋ, ಯಾವ ಸಮುದಾಯ ಪಕ್ಷದ ಜೊತೆ ನಿಂತಿದೆಯೋ ಅಂತಹವರಿಗೆ ಅವಕಾಶ ಕಲ್ಪಿಸಬೇಕು. ಪಕ್ಷಕ್ಕಾಗಿ ಕೆಲಸ ಮಾಡಿದ ಅನೇಕರಿಗೆ ಅನುಭವ ಇರುತ್ತದೆ, ಅಂತಹವರೊಂದಿಗೆ ಸಮಾಲೋಚಿಸಿ ಅಭಿಪ್ರಾಯ ಪಡೆಯಬೇಕು ಎಂಬುದನ್ನು ಹೇಳಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಏಳು ಸ್ಥಾನಗಳು ನಮ್ಮ ಪಕ್ಷಕ್ಕೆ ಬರುತ್ತವೆ, 300 ಅರ್ಜಿ ಬಂದಿವೆ ಎಂಬುದನ್ನು ಪತ್ರಿಕೆಗಳಲ್ಲಿ ಗಮನಿಸಿದ್ದೇನೆ. ಆಯ್ಕೆ ಮಾಡುವುದು ಕಷ್ಟದ ಕೆಲಸ. ಹೈಪವರ್ ಕಮಿಟಿ ರಚಿಸಿ, ಸಮಿತಿ ಜೊತೆ ಚರ್ಚಿಸಿದರೆ ಸಲಹೆಗಳು ಬರುತ್ತವೆ. ಹೈಪವರ್ ಕಮಿಟಿ ರಚಿಸುವ ಸಮಯ ಮೀರಿದೆ ಎಂದು ಹೇಳಿದರು.

ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿಲ್ಲ, ಇಲಾಖೆಗೆ ಸಂಬಂಧಿಸಿದಂತೆ ಸಾಕಷ್ಟು ಕೆಲಸಗಳಿವೆ, ಯಾವುದಾದರು ತೀರ್ಮಾನ ತೆಗೆದುಕೊಳ್ಳುವಾಗ ಮುಖ್ಯಮಂತ್ರಿಯವರ ಗಮನಕ್ಕೆ ತರಬೇಕಾಗುತ್ತದೆ. ಅವರ ಸಲಹೆ ಪಡೆದು ತೀರ್ಮಾನ ಕೈಗೊಳ್ಳಬೇಕಾಗುತ್ತದೆ ಎಂದರು.

ಮಹರ್ಷಿ ವಾಲ್ಮಿಕಿ ಅಭಿವೃದ್ಧಿ ನಿಗಮದ ಅಧಿಕಾರಿ ಆತ್ಮಹತ್ಯೆ ಪ್ರಕರಣ ಕುರಿತು ಸಿಐಡಿ ತನಿಖೆ ನಡೆಸುತ್ತಿದೆ, ಬೇರೆ ಬೇರೆ ಐಟಿ ಕಂಪನಿಗಳಿಗೆ ಹಣ ವರ್ಗಾವಣೆಯಾಗಿರುವ ಆರೋಪ ತನಿಖೆಯಿಂದ ಹೊರಬರಲಿದೆ ಎಂದವರು ಮತ್ತೊಂದು ಪ್ರಶ್ನೆಗೆ ಉತ್ತರಿಸಿದ್ದಾರೆ.

ಒಂದೊಂದು ಘಟನೆಯಾದಾಗಲೂ ವಿಪಕ್ಷದವರು ರಾಜೀನಾಮೆ ಕೇಳುತ್ತಾರೆ, ಹಣ ವರ್ಗಾವಣೆಗೆ ಮೌಖಿಕವಾಗಿ ಆದೇಶ ಕೊಟ್ಟಿದ್ದಾರೆ ಎಂಬ ಆರೋಪ ತನಿಖೆಯಲ್ಲಿ ಸಾಬೀತಾದರೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಈಶ್ವರಪ್ಪ ಅವರ ವಿರುದ್ಧದ ಪ್ರಕರಣದಲ್ಲಿ ಅವರ ಹೆಸರನ್ನು ನೇರವಾಗಿ ಆರೋಪಿಸಲಾಗಿತ್ತು, ಈ ಪ್ರಕರಣದಲ್ಲಿ ಸಚಿವರ ಹೆಸರನ್ನು ಎಲ್ಲಿಯೂ ನೇರವಾಗಿ ಹೇಳಿಲ್ಲ, ತನಿಖೆ ಆಗುವವರೆಗೂ ಕಾಯಬೇಕು ಎಂದರು.

# ಜೂನ್ ಮಾಹೆಯಲ್ಲಿ ರಂಭಾಪುರಿ ಜಗದ್ಗುರುಗಳ ಪ್ರವಾಸ



ಬಾಳೆಹೊನ್ನೂರು, ಮೇ 29 - ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳ ಜೂನ್ ಮಾಹೆಯ ಪ್ರವಾಸ ಕಾರ್ಯಕ್ರಮದ ವಿವರ.

ದಿನಾಂಕ 7 ರಂದು ಹಾಸನ ಜಿಲ್ಲೆ ಆಲೂರಿನಲ್ಲಿ ಪುರ ಪ್ರವೇಶ-ಧರ್ಮ ಸಮಾರಂಭ, 9 ರಂದು ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಸಿದ್ಧರ ಬೆಟ್ಟ ಕ್ಷೇತ್ರದಲ್ಲಿ ಶ್ರೀ ವೀರಭದ್ರ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ, 12 ರಂದು ಚಿಕ್ಕಮಗಳೂರಿನಲ್ಲಿ ಶ್ರೀ ಜಗದ್ಗುರು ರೇಣುಕ-ಶ್ರೀ ಬಸವ ಜಯಂತಿ ಸಮಾರಂಭ, 13 ರಂದು ಅಜ್ಜಂಪುರ ತಾಲ್ಲೂಕು ಹಣ್ಣೆ ಮಠದಲ್ಲಿ ಲಿಂ. ಶಿವಾನಂದ ಶ್ರೀಗಳ ಪುಣ್ಯ ಸ್ಮರಣೆ ಹಾಗೂ ಮರುಳಸಿದ್ಧ ಪಂಡಿತಾರಾಧ್ಯರ 5ನೇ ವರ್ಧಂತಿ ಧರ್ಮ ಸಮಾರಂಭ, 14 ರಂದು ಶಿವಮೊಗ್ಗದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸುವರು.

ದಿನಾಂಕ 16 ರಂದು ದಾವಣಗೆರೆಯಲ್ಲಿ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮ ಸಮಾರಂಭ, 17 ರಂದು ಬೆಂಗಳೂರಿನಲ್ಲಿ ಇಷ್ಟಲಿಂಗ ಮಹಾಪೂಜೆ, 18 ರಂದು ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ ಧರ್ಮ ಸಮಾರಂಭ, ದಿನಾಂಕ 19 ರಂದು ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕು ತಾವರಗೆರೆಯಲ್ಲಿ ವೀರೇಶ ಪಾಟೀಲರ ವೈವಾಹಿಕ ಜೀವನದ ರಜತ ಮಹೋತ್ಸವದಲ್ಲಿ ಪಾಲ್ಗೊಳ್ಳುವರು.

21 ರಂದು ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರಿ ಪೀಠದಲ್ಲಿ ಪೌರ್ಣಿಮೆಯ ನಿಮಿತ್ಯ ವಾಸ್ತವ್ಯವಿದ್ದು ಭಕ್ತಾದಿಗಳಿಗೆ ದರ್ಶನಾಶೀರ್ವಾದ ನೀಡುವರು.

ದಿನಾಂಕ 27 ರಿಂದ 29ರ ವರೆಗೆ ಕಲಬುರ್ಗಿ ಜಿಲ್ಲೆ ಚಿಂಚೋಳಿಯಲ್ಲಿ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮ ಜಾಗೃತಿ ಸಮಾರಂಭ, 30 ರಂದು ಕಲಬುರ್ಗಿಯಲ್ಲಿ ಡಾ. ಸಿದ್ಧಲಿಂಗಯ್ಯ ಹನಗೋಡಿಮಠ ಅವರ ಷಷ್ಟ್ಯಬ್ಧಿ ಸಮಾರಂಭದ ಸಾನ್ನಿಧ್ಯ ವಹಿಸುವರು. ಶ್ರೀ ರಂಭಾಪುರಿ ಜಗದ್ಗುರುಗಳವರ ಧಾರ್ಮಿಕ ಕಾರ್ಯಕ್ರಮಗಳ ಲಾಭವನ್ನು ಸಮಸ್ತರು ಪಡೆದು ಕೊಳ್ಳುವಂತೆ ಶ್ರೀ ಪೀಠದ ವಾರ್ತಾ ಸಂಯೋಜನಾಧಿಕಾರಿ ಸಿ.ಎಚ್. ಬಾಳನಗೌಡ್ರ ತಿಳಿಸಿದ್ದಾರೆ.

# ಷೇರು ಮಾರುಕಟ್ಟೆ ಟಿಪ್ಸ್ ಕೊಡಲು ಹೇಳಿ ವಂಚನೆ: ಇಬ್ಬರ ಬಂಧನ

ಯುನೆಟ್ಸ್ ಟೆಕ್ನಾಲಜಿ ಕಂಪನಿ ಹೆಸರಿನಲ್ಲಿ ಷೇರು ಮಾರುಕಟ್ಟೆ ಟ್ರೇಡಿಂಗ್ ಬ್ಯೂಸಿನೆಸ್ ಬಗ್ಗೆ ಟಿಪ್ಸ್ ಕೊಡುವುದಾಗಿ ಹೇಳಿ ಹಣ ವರ್ಗಾವಣೆ ಮಾಡಿಸಿಕೊಂಡು ವಂಚನೆ ಮಾಡಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ನಗರದ ದಾವಲ್ ಪೇಟೆಯ ರಾಜೇಶ್ ಎ.ಪಾಲಂಕರ್ ಅವರನ್ನು ಪರಿಚಯಿಸಿಕೊಂಡ ಆರೋಪಿಗಳು ಷೇರು ಮಾರುಕಟ್ಟೆ ಬಗ್ಗೆ ಟಿಪ್ಸ್ ಕೊಡುವುದಾಗಿ ಹೇಳಿ 30 ಸಾವಿರ ರೂ. ವಂಚಿಸಿದ್ದರು. ಈ ಬಗ್ಗೆ ಸೀಇಎನ್ ಅಪರಾಧ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ತನಿಖೆ ನಡೆಸಿದ ಪೊಲೀಸರು ಬೆಂಗಳೂರು ರಾಜೀವ್ ನಗರದ ವಾಸಿ ಸಂದೀಪ್ ಕುಮಾರ್ ಆರ್. (30) ಹಾಗೂ ಮೀನಾಕ್ಷಿ ಲೇ ಔಟ್‌ನ ಮುರುಳಿ (25) ಇವರನ್ನು ಬಂಧಿಸಿದ್ದಾರೆ.

ಆರೋಪಿ ಪತ್ತೆ ಕಾರ್ಯದಲ್ಲಿ ಸಿ.ಇ.ಎನ್ ಕ್ರೈಂ ಪೊಲೀಸ್ ಠಾಣೆಯ ಪಿ.ಐ ಪ್ರಸಾದ್ ಪಿ. ಮತ್ತು ಸಿಬ್ಬಂದಿಯವರಾದ ಪ್ರಕಾಶ್. ಹೆಚ್. ಮುತ್ತುರಾಜ್, ಗೋವಿಂದ್ ರಾಜ್ ಯಶಸ್ವಿಯಾಗಿದ್ದಾರೆ.

# ಜೂ. 4ರಂದು ಜಿಲ್ಲಾದ್ಯಂತ ನಿಷೇಧಾಜ್ಞೆ

ದಾವಣಗೆರೆ, ಮೇ 29 - ಲೋಕಸಭಾ ಸಾರ್ವತ್ರಿಕ ಚುನಾವಣೆಯ ಮತ ಎಣಿಕೆ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಯಾದ್ಯಂತ ಜೂನ್ 4 ರಂದು ಬೆಳಿಗ್ಗೆ 6 ರಿಂದ ಜೂನ್ 5ರ ಬೆಳಿಗ್ಗೆ 6 ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಆದೇಶಿಸಿದ್ದಾರೆ.

ಮತ ಎಣಿಕೆ ಕಾರ್ಯವು ದಾವಣಗೆರೆ ವಿಶ್ವವಿದ್ಯಾಲಯದ ಕಟ್ಟಡದಲ್ಲಿ ನಡೆಯಲಿದೆ. ಗೆದ್ದಂತಹ ರಾಜಕೀಯ ಅಭ್ಯರ್ಥಿಗಳ ಕಾರ್ಯಕರ್ತರು ಗುಂಪು ಸೇರಿ ಪಟಾಕಿ ಹೊಡೆಯುವುದು, ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟು ಮಾಡುವುದು ನಿಷಿದ್ಧ ಎಂದು ಅವರು ತಿಳಿಸಿದ್ದಾರೆ.

# ಪುಣೆ ಕಾರು ಅಪಘಾತ ಪ್ರಕರಣ ಇಬ್ಬರು ವೈದ್ಯರ ಅಮಾನತ್ತು

ಮುಂಬೈ, ಮೇ 29 – ಪುಣೆಯ ಪೋಶೆ ಕಾರು ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪ್ರಾಪ್ತನ ರಕ್ತದ ಮಾದರಿಗಳನ್ನು ಬದಲಿಸಿದ ಆರೋಪದ ಮೇಲೆ ಸಸೂನ್ ಸರ್ಕಾರಿ ಆಸ್ಪತ್ರೆಯ ಇಬ್ಬರು ವೈದ್ಯರನ್ನು ಅಮಾನತ್ತುಗೊಳಿಸಲಾಗಿದೆ. ಬಿ.ಜೆ. ವೈದ್ಯಕೀಯ ಕಾಲೇಜು ಹಾಗೂ ಸಸೂನ್ ಸಾರ್ವಜನಿಕ ಆಸ್ಪತ್ರೆಯ ಡೀನ್ ಡಾ. ವಿನಾಯಕ್ ಕಾಳೆ ಅವರನ್ನು ಕಡ್ಡಾಯ ರಜೆಯ ಮೇಲೆ ಕಳಿಸಲಾಗಿದೆ.

ಮಹಾರಾಷ್ಟ್ರ ವೈದ್ಯಕೀಯ ಶಿಕ್ಷಣ ಇಲಾಖೆಯ ಆಯುಕ್ತರ ಶಿಫಾರಸ್ಸಿನ ಮೇಲೆ ವೈದ್ಯರಾದ ಡಾ. ಅಜಯ್ ತವರೆ ಹಾಗೂ ಡಾ. ಶ್ರೀಹರಿ ಹಲ್ನೂರ್ ಅವರನ್ನು ಅಮಾನತ್ತುಗೊಳಿಸಲಾಗಿದೆ.

# ಬಸವೇಶ್ವರರ ತತ್ವ ಮೈಗೂಡಿಸಿಕೊಂಡಾಗ ಬದುಕು ಸಾರ್ಥಕ



### ವಚನ ಸಾಹಿತ್ಯ ಪರಿಷತ್ತು,ಚುಟುಕು ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮದಲ್ಲಿ ರಟ್ಟಿಹಳ್ಳಿ ಕಬ್ಬಿಣಕಂತಿ ಮಠದ ಶಿವಲಿಂಗ ಶ್ರೀ

ದಾವಣಗೆರೆ, ಮೇ 29- ಜಗಜ್ಯೋತಿ ಬಸವೇಶ್ವರರ ತತ್ವಗಳನ್ನು ಸ್ವಲ್ಪವಾದರೂ ಮೈಗೂಡಿಸಿಕೊಂಡು ಸಾಧನೆ ಮಾಡಿದಾಗ ಮಾತ್ರ ಬದುಕಿಗೊಂದು ಸಾರ್ಥಕತೆ ಬರುತ್ತದೆ ಎಂದು ರಟ್ಟಿಹಳ್ಳಿ ಕಬ್ಬಿಣಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ನಗರದ ರೋಟರಿ ಬಾಲಭವನದಲ್ಲಿ ವಚನ ಸಾಹಿತ್ಯ ಪರಿಷತ್ತು, ಚುಟುಕು ಸಾಹಿತ್ಯ ಪರಿಷತ್ತು ಹಾಗೂ ಸ್ಫೂರ್ತಿ ಪ್ರಕಾಶನ ತೆಲಗಿ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಶ್ರೀ ಜಗಜ್ಯೋತಿ ಬಸವೇಶ್ವರರ ಜಯಂತ್ಯೋತ್ಸವ ಹಾಗೂ ಹಾಲಪ್ಪ ವೀರಪ್ಪ ಗುಂಡಗಟ್ಟಿ, ಮಹಾದೇವಮ್ಮ ಹಾಲಪ್ಪ ಗುಂಡಗಟ್ಟಿ ಅವರ ಸ್ಮರಣಾರ್ಥ ಕೊಡಮಾಡುವ ವಿಶ್ವಗುರು ಬಸವಶ್ರೀ ಹಾಗೂ ರಕ್ಷಕ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಬದುಕಿಗೆ ಅರ್ಥ ಮತ್ತು ವ್ಯವಸ್ಥೆ ಇದ್ದರೆ ಮಾತ್ರ ಜೀವನದಲ್ಲಿ ಶಾಂತಿ, ನೆಮ್ಮದಿ ಸಿಗಲಿದೆ. ಆದ್ದರಿಂದ ತತ್ವಬದ್ಧವಾದ ಆದರ್ಶದೊಂದಿಗೆ ಇಟ್ಟ ಗುರಿ ತಲುಪಿ ಸಾಧನೆ ಮಾಡಬೇಕು. ಸಾಧಕರ ಬದುಕಿನ ಮೌಲ್ಯಗಳು ನಮ್ಮ ಬದುಕಿಗೆ ದಾರಿದೀಪವಾಗಬೇಕು ಎಂದರು.

ಸಾಧು, ಸಂತರ ಗುಣಗಳನ್ನು ಉತ್ಕರ್ಷಣೆ ಮಾಡಿ ಪ್ರಚಾರ ಮಾಡುವುದರಿಂದ ಸಜ್ಜನರಾಗಲು ಸಾಧ್ಯ. ಒಳ್ಳೆಯ ಆಚಾರ-ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ದೈಹಿಕ ಆರೋಗ್ಯ ಚೆನ್ನಾಗಿರಲಿದೆ. ಮಾನಸಿಕ ಸ್ವಾಸ್ಥ್ಯ ಚೆನ್ನಾಗಿರಬೇಕಾದರೆ ಸಾಹಿತ್ಯ ಮತ್ತು ಸಂಗೀತದ ಮೊರೆ ಹೋಗಬೇಕು. ಅಧ್ಯಾತ್ಮ ಎಂದರೆ ತಪಸ್ಸು ಮತ್ತು ಪೂಜೆ ಮಾಡುವುದಲ್ಲ. ಸೇವೆಯಲ್ಲಿ ತನ್ನನ್ನು ತಾನು ಸಮರ್ಪಿಸಿಕೊಳ್ಳುವುದು ನೈಜವಾದ ಅಧ್ಯಾತ್ಮ ಎಂದು ಬಣ್ಣಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಸಾಹಿತಿ ಶ್ರೀಮತಿ ಜಯಮ್ಮ ನೀಲಗುಂದ ಅವರು, ತಂದೆ-ತಾಯಿ, ಭೂಮಿ ಮತ್ತು ದೇಶದ ಋಣ ತೀರಿಸಲು ಸಾಧ್ಯವಿಲ್ಲ. ಆದರೆ, ರಾಜಶೇಖರ ಗುಂಡಗಟ್ಟಿ ಅವರು ತಮ್ಮ ತಂದೆ ಹಾಲಪ್ಪ ವೀರಪ್ಪ ಗುಂಡಗಟ್ಟಿ ಹಾಗೂ ತಾಯಿ ಮಹಾದೇವಮ್ಮ ಹಾಲಮ್ಮ ಗುಂಡಗಟ್ಟಿ ಸ್ಮರಣಾರ್ಥ 5 ಸಾವಿರ ರೂ. ನಗದು ಮತ್ತು ಪ್ರಶಸ್ತಿ ಫಲಕಗಳನ್ನು ಒಳಗೊಂಡ ವಿಶ್ವಗುರು ಬಸವಶ್ರೀ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲು ಸಂಕಲ್ಪ ಮಾಡಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಕನ್ನಡ ಪಂಡಿತ ಎಸ್.ಎಂ. ರುದ್ರಮುನಿ ಅಯ್ಯನವರಿಗೆ ವಿಶ್ವಗುರು ಬಸವಶ್ರೀ ಪ್ರಶಸ್ತಿ ಹಾಗೂ ಮಾಜಿ ಯೋಧ ಎಂ.ಎಸ್. ರಾಮಚಂದ್ರಪ್ಪನವರಿಗೆ ರಕ್ಷಕ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. 'ಶರಣರ ದೃಷ್ಟಿಯಲ್ಲಿ ಬಸವಣ್ಣ ವಿಷಯ' ಕುರಿತು ಶರಣ ಸಾಹಿತ್ಯ ಪರಿಷತ್ತಿನ ಹರಪನಹಳ್ಳಿ ತಾಲ್ಲೂಕು ಘಟಕದ ಅಧ್ಯಕ್ಷ ಷಣ್ಮುಖಪ್ಪ ಪೂಜಾರ್ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಜಿ.ಹೆಚ್. ರಾಜಶೇಖರ್ ಗುಂಡಗಟ್ಟಿ, ಹೊನ್ನಾಳಿ ಹಿರಿಯ ಸಾಹಿತಿ ಯು. ಎನ್. ಸಂಗನಾಳಮಠ್, ಸ್ಫೂರ್ತಿ ಪ್ರಕಾಶನ ತೆಲಗಿ ಅಧ್ಯಕ್ಷ ಎಂ. ಬಸವರಾಜ್, ಉಮಾದೇವಿ ಎಸ್. ಹಿರೇಮಠ, ಓಂಕಾರಯ್ಯ ಎಸ್. ತವನಿಧಿ, ಸುನೀತಾ ಪ್ರಕಾಶ್, ವೀರಭದ್ರಪ್ಪ ತೆಲಗಿ, ಜಿ. ಎಂ.ಜಿ. ವೀರೇಶ್ ಮತ್ತಿತರರಿದ್ದರು.

# ಹುಬ್ಬಳ್ಳಿಗೆ ಆಗಮಿಸುವ ರೈಲುಗಳ ಸಮಯ ಬದಲಾವಣೆ



ಹುಬ್ಬಳ್ಳಿ, ಮೇ 29- ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮೀಜಿ ರೈಲ್ವೆ ನಿಲ್ದಾಣಕ್ಕೆ ಆಗಮಿಸುವ ಕೆಲವು ರೈಲುಗಳ ಆಗಮನ ಮತ್ತು ನಿರ್ಗಮನದ ಸಮಯವನ್ನು ಪರಿಷ್ಕರಿಸಲಾಗಿದೆ. ಈ ರೈಲುಗಳ ಬದಲಾವಣೆಯು ಕೆಳಗೆ ತಿಳಿಸಿದ ಪ್ರಯಾಣದ ದಿನಾಂಕಗಳಿಂದ ಜಾರಿಗೆ ಬರಲಿದೆ.

ಬರುವ ಜೂನ್ 21 ರಿಂದ ಜಾರಿಗೆ ಬರುವಂತೆ ರೈಲು ಸಂಖ್ಯೆ 16532 ಕೆಎಸ್‌ಆರ್ ಬೆಂಗಳೂರು - ಅಜ್ಮೀರ್ ಗರೀಬ್ ನವಾಜ್ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಎಸ್‌ಎಸ್‌ಎಸ್ ಹುಬ್ಬಳ್ಳಿ ನಿಲ್ದಾಣಕ್ಕೆ ಬೆಳಿಗ್ಗೆ 06:00 - 06:10 ಗಂಟೆಯ ಬದಲು 05:35 ಗಂಟೆಗೆ ಆಗಮಿಸಿ, 05:45 ಗಂಟೆಗೆ ಹೊರಡಲಿದೆ.

ಜೂನ್ 22 ರಿಂದ ಜಾರಿಗೆ ಬರುವಂತೆ ರೈಲು ಸಂಖ್ಯೆ 16506 ಕೆಎಸ್‌ಆರ್ ಬೆಂಗಳೂರು - ಗಾಂಧಿ ಧಾಮ್ ಸಾಪ್ತಾಹಿಕ ಎಕ್ಸ್ ಪ್ರೆಸ್ ರೈಲು ಎಸ್‌ಎಸ್‌ಎಸ್ ಹುಬ್ಬಳ್ಳಿ ನಿಲ್ದಾಣಕ್ಕೆ ಬೆಳಿಗ್ಗೆ 06:00 - 06:10 ಗಂಟೆಯ ಬದಲು 05:35 ಗಂಟೆಗೆ ಆಗಮಿಸಿ, 05:45 ಗಂಟೆಗೆ ಹೊರಡಲಿದೆ.

ಜೂನ್ 23 ರಿಂದ ಜಾರಿಗೆ ಬರುವಂತೆ ರೈಲು ಸಂಖ್ಯೆ 16534 ಕೆಎಸ್‌ಆರ್ ಬೆಂಗಳೂರು - ಜೋಧಪುರ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಎಸ್‌ಎಸ್‌ಎಸ್ ಹುಬ್ಬಳ್ಳಿ ನಿಲ್ದಾಣಕ್ಕೆ ಬೆಳಿಗ್ಗೆ 06:00 - 06:10 ಗಂಟೆಯ ಬದಲು 05:35 ಗಂಟೆಗೆ ಆಗಮಿಸಿ, 05:45 ಗಂಟೆಗೆ ಹೊರಡಲಿದೆ.

ಜೂನ್ 24 ರಿಂದ ಜಾರಿಗೆ ಬರುವಂತೆ ರೈಲು ಸಂಖ್ಯೆ 16508 ಕೆಎಸ್‌ಆರ್ ಬೆಂಗಳೂರು - ಜೋಧಪುರ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಎಸ್‌ಎಸ್‌ಎಸ್ ಹುಬ್ಬಳ್ಳಿ ನಿಲ್ದಾಣಕ್ಕೆ ಬೆಳಿಗ್ಗೆ 06:00 - 06:10 ಗಂಟೆಯ ಬದಲು 05:35 ಗಂಟೆಗೆ ಆಗಮಿಸಿ, 05:45 ಗಂಟೆಗೆ ಹೊರಡಲಿದೆ.

ಜೂನ್ 25 ರಿಂದ ಜಾರಿಗೆ ಬರುವಂತೆ ರೈಲು ಸಂಖ್ಯೆ 16210 ಮೈಸೂರು - ಅಜ್ಮೀರ್ ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಎಸ್‌ಎಸ್‌ಎಸ್ ಹುಬ್ಬಳ್ಳಿ ನಿಲ್ದಾಣಕ್ಕೆ ಬೆಳಿಗ್ಗೆ 06:00 - 06:10 ಗಂಟೆಯ ಬದಲು 05:35 ಗಂಟೆಗೆ ಆಗಮಿಸಿ, 05:45 ಗಂಟೆಗೆ ಹೊರಡಲಿದೆ.

ಸುಗಮ ಮತ್ತು ತೊಂದರೆ ರಹಿತ ಪ್ರಯಾಣ ಬೆಳೆಸುವುದನ್ನು ಖಚಿತಪಡಿಸಿಕೊಳ್ಳಲು ಪ್ರಯಾಣಿಕರು ಈ ಪರಿಷ್ಕೃತ ಸಮಯವನ್ನು ಗಮನಿಸಿ ಎಂದು ಹುಬ್ಬಳ್ಳಿ ನೈಋತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ. ಮಂಜುನಾಥ ಕನಮಡಿ ಸಾರ್ವಜನಿಕರಿಗೆ ತಿಳಿಸಿದ್ದಾರೆ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas